ಕನ್ನಡ ವಿಶ್ವವಿದ್ಯಾಲಯ

ಬೋಮನ ದುಡಿ ಮತ್ತು ಭಾರತೀಪುರ

ಕಾದಂಬರಿಗಳಲ್ಲಿ

ಜಾತಿ ಮತ್ತು ವರ್ಗ ಸಂಘರ್ಷ

೨೦೦೯-೧೦ನೇ ಸಾಲಿನ

ಕನ್ನಡ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ ನಿಬಂಧ

ಸಂಶೋಧಕರು

ಮಂಜುಳಾ. ಹೆಚ್.ಎಲ್.

ನೋಂದಣಿ ಸಂಖ್ಯೆ: KRSMKS ೦೦೪೫೮

ಮಾರ್ಗದರ್ಶಕರು

ಡಾ.ಪಿ.ಬೆಟ್ಟೇಗೌಡ

ಸಹ ಪ್ರಾಧ್ಯಾಪಕರು

ಸರ್ಕಾರಿ ಮಹಿಳಾ ಕಾಲೇಜು

ವಿಜಯನಗರ, ಮೈಸೂರು

ಕರ್ನಾಟಕ ಸಂಘ(ರಿ), ಮಂಡ್ಯ

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿ.ವಿ.ಯಿಂದ ಮಾನ್ಯತೆ ಪಡೆದಿದೆ)

ಮಂಡ್ಯ.

ಆಗಸ್ಟ್ ೨೦೦೯-೧೦

ಕನ್ನಡ ವಿಶ್ವವಿದ್ಯಾಲಯ

ಚೋಮನ ದುಡಿ ಮತ್ತು ಭಾರತೀಪುರ

ಕಾದಂಬರಿಗಳಲ್ಲಿ

ಜಾತಿ ಮತ್ತು ವರ್ಗ ಸಂಘರ್ಷ

೨೦೦೯–೧೦ನೇ ಸಾಲಿನ

ಕನ್ನಡ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ ನಿಬಂಧ

ಸಂಶೋಧಕರು

ಮಂಜುಳಾ. ಹೆಚ್.ಎಲ್.

ನೋಂದಣಿ ಸಂಖ್ಯೆ: KRSMKS ೦೦೪೫೮

ಮಾರ್ಗದರ್ಶಕರು

ಡಾ.ಪಿ.ಬೆಟ್ಟೇಗೌಡ

ಸಹ ಪ್ರಾಧ್ಯಾಪಕರು

ಸರ್ಕಾರಿ ಮಹಿಳಾ ಕಾಲೇಜು

ವಿಜಯನಗರ, ಮೈಸೂರು

ಕರ್ನಾಟಕ ಸಂಘ(ರಿ), ಮಂಡ್ಯ

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿ.ವಿ.ಯಿಂದ ಮಾನ್ಯತೆ ಪಡೆದಿದೆ)

ಮಂಡ್ಯ.

ಆಗಸ್ಟ್ ೨೦೦೯–೧೦

ಘೋಷಣಾ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ ೨೦೦೯–೧೦ನೇ ಸಾಲಿನ ಕನ್ನಡ ಎಂ.ಫಿಲ್ ವಿದ್ಯಾರ್ಥಿಯಾಗಿ ನಾನು ಪ್ರವೇಶ ಪಡೆದು, ಎಂ.ಫಿಲ್ ಅಧ್ಯಯನದ ಅಂಗವಾಗಿ ನಿಬಂಧ ರಚಿಸಲು **'ಚೋಮನದುಡಿ ಮತ್ತು ಭಾರತೀಪುರ ಕಾದಂಬರಿಗಳಲ್ಲಿ ಜಾತಿ ಮತ್ತು ವರ್ಗ ಸಂಘರ್ಷ'** ಎಂಬ ವಿಷಯವನ್ನು ಆಯ್ಕೆ ಮಾಡಿ ಕೊಂಡು ಡಾ.ಪಿ. ಬೆಟ್ಟೇಗೌಡರವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ಸಿದ್ದಪಡಿಸಿರುತ್ತೇನೆ.

ಈ ನಿಂಬಂಧವನ್ನಾಗಲಿ, ನಿಬಂಧದ ಅಧ್ಯಾಯಗಳನ್ನಾಗಲೀ ಯಾವುದೇ ಗ್ರಂಥ ಅಥವಾ ನಿಯತಕಾಲಿಕೆಗಳಲ್ಲಿ ಪ್ರಕಟಿಸಿರುವುದಿಲ್ಲ. ಮತ್ತು ಬೇರೆ ಯಾವ ವಿಶ್ವವಿದ್ಯಾಲಯಕ್ಕೂ ಯಾವ ಪದವಿಗೂ ಸಲ್ಲಿಸಿರುವುದಿಲ್ಲ.

ಮಂಜುಳ ಹೆಚ್.ಎಲ್.

ಮಂಜುಳ ಹೆಚ್. ಎಲ್.
ಎಂ.ಫಿಲ್. ವಿದ್ಯಾರ್ಥಿ
ನೋಂದಣಿ ಸಂಖ್ಯೆ: KRSMKS ೦೦೪೫೮

ದಿನಾಂಕ: ೨೫.೮.೨೦೧೦

ಸ್ಥಳ: ಮಂಡ್ಯ

ಮಾರ್ಗದರ್ಶಕರ ಪ್ರಮಾಣ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ಎಂ.ಫಿಲ್ (ಕನ್ನಡ) ಪದವಿಗಾಗಿ ಕು.ಹೆಚ್.ಎಲ್.ಮಂಜುಳಾರವರು **'ಚೋಮನ ದುಡಿ ಮತ್ತು ಭಾರತೀಪುರ ಕಾದಂಬರಿಗಳಲ್ಲಿ ಜಾತಿ ಮತ್ತು ವರ್ಗ ಸಂಘರ್ಷ'** ಎಂಬ ವಿಷಯದ ಮೇಲೆ ನನ್ನ ಮಾರ್ಗದರ್ಶನದಲ್ಲಿ ಈ ನಿಬಂಧವನ್ನು ಸಿದ್ಧಪಡಿಸಿದ್ದಾರೆ. ಈ ಮೊದಲು ಈ ವಿಷಯ ಕುರಿತು ಬೇರಾರಿಗೂ ಮಾರ್ಗದರ್ಶನ ಮಾಡಿಲ್ಲವೆಂದು ಈ ಮೂಲಕ ದೃಢಪಡಿಸುತ್ತೇನೆ.

ಮಾರ್ಗದರ್ಶಕರ ಸಹಿ

(ಡಾ.ಪಿ.ಬೆಟ್ಟೇಗೌಡ)
ಸಹ ಪ್ರಾಧ್ಯಾಪಕರು
ಸರ್ಕಾರಿ ಮಹಿಳಾ ಕಾಲೇಜು
ವಿಜಯನಗರ, ಮೈಸೂರು

ದಿನಾಂಕ: 31/12/2000

ಸ್ಥಳ: ಮಂಡ್ಯ

ಪರಿವಿಡಿ

೧. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಮಾನವ, ಜೀವ ಸಂಕುಲದಲ್ಲೆ ವಿಶಿಷ್ಟ ಛಾಪು ಮೂಡಿಸಿದ ಬುದ್ಧಿವಂತ ಜೀವಿ. ಮಾನವನ ಕುತೂಹಲ ಮತ್ತು ಆಸಕ್ತಿ ಪ್ರತಿನಿತ್ಯ ಹೊಸ-ಹೊಸದನ್ನು ಕಾಣುವ ಮತ್ತು ಕಂಡುಹಿಡಿಯುವ ಪ್ರಯತ್ನಕ್ಕೆ ಅವನನ್ನು ದೂಡಿದೆ. ಹಸಿ-ಹಸಿಯಾದ ಆಹಾರ, ಗೆಡ್ಡೆ-ಗೆಣಸು ತಿನ್ನುತ್ತಿದ್ದ ಮಾನವ ಆಕಸ್ಮಿಕವಾಗಿ ಬೆಂದ ಆಹಾರ ತಿಂದು ಅದರಲ್ಲಿ ರುಚಿಯನ್ನು ಗುರುತಿಸಿ ಆಹಾರ ಪದಾರ್ಥಗಳನ್ನು ಬೇಯಿಸಿ ತಿನ್ನುವುದನ್ನು ಕಲಿತುಕೊಂಡ. ಕಲ್ಲುಗಳನ್ನು ಕುಟ್ಟಿ ಬೆಂಕಿಯನ್ನು ಹೊತ್ತಿಸಿ ಬಳಸುವ ಸಿದ್ದಿಯನ್ನು ಸಾಧಿಸಿಕೊಂಡ ಪ್ರಾಚೀನ ಮಾನವ. ಇಂದು ಹಕ್ಕಿಯಂತೆ ಮುಗಿಲೆತ್ತರಕ್ಕೆ ಹಾರಬಲ್ಲ, ಸಾಗರದ ತಳದಲ್ಲಿ ವಿಹರಿಸಿಬರಬಲ್ಲ, ಕೇವಲ ಕಂಪ್ಯೂಟರ್ ಗುಂಡಿಯನ್ನು ಒತ್ತುವುದರ ಮೂಲಕ ತನ್ನ ಅವಶ್ಯಕತೆಗಳನ್ನು ಕ್ಷಣಮಾತ್ರದಲ್ಲಿ ಪೂರೈಸಿಕೊಳ್ಳಬಲ್ಲ. ಮನುಷ್ಯನ ಇಷ್ಟೆಲ್ಲಾ ಸಾಧನೆಗೆ ಕಾರಣ, ಅವನಿಗೆ ಉಂಟಾದ ಕುತೂಹಲ, ಆಸಕ್ತಿ, ಹೊಸದನ್ನು ಕಾಣುವ, ಕಟ್ಟುವ, ಸೃಷ್ಟಿಸುವ ಮನಸ್ಥಿತಿ. ಇದು ಕೇವಲ ವಿಜ್ಞಾನದ ಯಂತ್ರಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ. ಅಂತಹ ಹೊಸತನ ಸಾಹಿತ್ಯ ಕೃಷಿಯಲ್ಲೂ ಸಾಧ್ಯವೆನ್ನುವುದಕ್ಕೆ ನಮ್ಮ ಸಾಹಿತ್ಯ ಸಾಗಿ ಬಂದಿರುವುದೇ ಸಾಕ್ಷಿ.

ಒಬ್ಬೊಬ್ಬ ಕವಿಯ, ಲೇಖಕನ, ಕಾದಂಬರಿಕಾರನ ಆಸಕ್ತಿ, ಕುತೂಹಲ, ಅಭಿರುಚಿ ಒಂದೊಂದು ರೀತಿಯದು. ಈ ಭಿನ್ನ ಅಭಿರುಚಿಯ ಕಾರಣದಿಂದ ನಾನು ಶಿವರಾಮಕಾರಂತರ ಚೋಮನ ದುಡಿ ಮತ್ತು ಯು.ಆರ್. ಅನಂತಮೂರ್ತಿಯವರ ಭಾರತೀಪುರ ಕಾದಂಬರಿಗಳನ್ನು ಒಂದು ವಿಶಿಷ್ಟ ದೃಷ್ಟಿಕೋನದ ಹಿನ್ನೆಲೆಯಲ್ಲಿ ಗಮನಿಸಬಹುದೆಂದು ಅನ್ನಿಸಿ ನನ್ನ ನಿಬಂಧದ ವಿಷಯಕ್ಕೆ ಈ ಎರಡು ಕಾದಂಬರಿಗಳಲ್ಲಿ ಜಾತಿ ಮತ್ತು ವರ್ಗಸಂಘರ್ಷ' ಎಂಬ ವಿಷಯವನ್ನು ಆಯ್ಕೆಮಾಡಿಕೊಂಡೆನು.

ಇದುವರೆಗೆ ಚೋಮನ ದುಡಿ ಮತ್ತು ಭಾರತೀಪುರ ಕಾದಂಬರಿಗಳ ಮೇಲೆ ತೌಲನಿಕ ಅಧ್ಯಯನ, ದಲಿತ ಪ್ರಜ್ಞೆ, ಪಾತ್ರಗಳ ವಿಶ್ಲೇಷಣೆ, ಶೋಷಣೆ, ಭೂತಾರಾಧನೆ ಇನ್ನು ಮುಂತಾದ ದೃಷ್ಟಿಕೋನಗಳಲ್ಲಿ ಅಧ್ಯಯನ ಬಂದಿದ್ದರೂ ಜಾತಿ ಮತ್ತು ವರ್ಗ ಸಂಘರ್ಷ ಎಂಬ ದೃಷ್ಟಿಕೋನದಿಂದ ಈ ಕಾದಂಬರಿಗಳನ್ನು ವಿಶ್ಲೇಷಣೆ ಮಾಡುವುದು ಔಚಿತ್ಯವೆನಿಸಿ ನನ್ನ ನಿರ್ಬಂಧಕ್ಕೆ ಈ ವಿಷಯವನ್ನು ಆಯ್ಕೆ ಮಾಡಿದ್ದೇನೆ. ೨೧ನೇ ಶತಮಾನಕ್ಕೆ ಕಾಲಿಟ್ಟಿರುವ ಆಧುನೀಕ ಜಗತ್ತು ಅನೇಕ ವಿಸ್ಮಯಗಳನ್ನು ಕಂಡಿದೆ. ಹಲವಾರು ಮಹಾನ್ ವ್ಯಕ್ತಿಗಳು ಬಾಳಿ ಬದುಕಿದ್ದಾರೆ. ವಿಜ್ಞಾನದ ಪ್ರಗತಿ ಬಹಳ ವೇಗವಾಗಿ ಸಾಗುತ್ತಿದೆ. ಸ್ವರ್ಗ-ನರಕಗಳ ಕಲ್ಪನೆಯ ವಿಷಯವಾಗಿ ಮಾನವ ಗ್ರಹ ತಾರೆಗಳನ್ನು ಮಾತನಾಡಿಸಿ ಬಂದಿದಾನೆ.

ಒಟ್ಟಾರೆ ಇಡೀ ಜಗತ್ತು ಒಂದು ಹಳ್ಳಿಯಂತೆ ಸಂಕುಚಿತವಾಗಿದೆ. ಹಿಂದೆ ಮಾನವ ಕಲ್ಪನೆಯಲ್ಲಿ ಊಹಿಸಿದ್ದನ್ನು ಇಂದು ವಾಸ್ತವದಲ್ಲಿ ಸಾಧಿಸುತ್ತಿದ್ದಾನೆ. ಜಗತ್ತು ಇಷ್ಟೆಲ್ಲಾ ಮುಂದುವರೆದಿದೆ. ಆದರೆ ಭಾರತದಂತಹ ಸಂಪ್ರದಾಯ ಬದ್ಧ ನಾಡಿನಲ್ಲಿ ಹಿಂದಿನಿಂದಲೂ ಬೆಳೆದು ಬಂದಿರುವ ಕೆಲವು ಸಾಮಾಜಿಕ ಪಿಡುಗುಗಳು ನಿರ್ಮೂಲವಾಗಿಲ್ಲ. ಅಂತಹ ಸಮಸ್ಯೆಗಳೆಲ್ಲ ಜಾತಿ ಮತ್ತು ವರ್ಗ ಸಮಸ್ಯೆಯು ಮುಖ್ಯವಾದ ಜಾಡ್ಯಗಳಾಗಿವೆ. ಭಾರತ ಎದುರಿಸುತ್ತಿರುವ ಭೀಕರ ಸಮಸ್ಯೆಗಳಲ್ಲಿ ಇದು ಒಂದು. ಒಂದೆಡೆ ಆಹಾರ ಸಮಸ್ಯೆ, ದಾರಿದ್ರ್ಯ, ಭೀಕರ ಬಡತನದಿಂದ ತತ್ತರಿಸುತ್ತಿದ್ದರೆ, ಇನ್ನೊಂದೆಡೆ ವರ್ಣ-ವರ್ಗ ಸಂಘರ್ಷಗಳು ನಡೆದು ಭೀಕರ ದುಷ್ಪರಿಣಾಮಗಳನ್ನು ದೇಶ ಎದುರುಸುತ್ತಿರುವುದು ಒಂದು ದುರಂತವೇ ಸರಿ.

ಪ್ರಸ್ತುತ ಸಂದರ್ಭದಲ್ಲಿ ಜಾತಿ ವ್ಯವಸ್ಥೆ ಹಿಂದಿನಷ್ಟು ಕ್ರೂರವಾಗಿಲ್ಲದಿದ್ದರೂ ಅದರ ಪ್ರಭಾವವೇನು ಕಡಿಮೆಯಾಗಿಲ್ಲ. ಇಂದು ಮನುಷ್ಯ ವೈಜ್ಞಾನಿಕವಾಗಿ, ಶೈಕ್ಷಣಿಕವಾಗಿ, ಪ್ರತಿಯೊಂದು ಕ್ಷೇತ್ರದಲ್ಲಿಯೂ ಪ್ರಗತಿಯ ದಾಪುಗಾಲು ಹಾಕುತ್ತಿದ್ದಾನೆ. ಆದರೂ ನಮಗೆ ಜಾತಿ ವ್ಯವಸ್ಥೆಯ ಮುಷ್ಟಿಯಿಂದ ಬಿಡಿಸಿಕೊಳ್ಳಲಾಗಿಲ್ಲ. ಭಾರತೀಯ ಸಮಾಜದಲ್ಲಿ ಕೆಳವರ್ಗಕ್ಕೆ ಸೇರಿದ ಜನತೆ ನೂರಾರು ವರ್ಷಗಳಿಂದ ಒಂದಲ್ಲ ಒಂದು ರೀತಿಯಲ್ಲಿ ಉಗ್ರ ಶೋಷಣೆಗೆ ಗುರಿಯಾಗುತ್ತಲೇ ಬಂದಿದ್ದಾರೆ. ಈ ಸಮಸ್ಯೆ ಕೇವಲ ಶಿವರಾಮ ಕಾರಂತ, ಅನಂತಮೂರ್ತಿಯವರ ಕಾಲಕ್ಕೆ ಮಾತ್ರ ಸೀಮಿತವಾಗಿಲ್ಲ. ಪ್ರಸ್ತುತದಲ್ಲಿಯೂ ಪ್ರತಿದಿನವೂ ಈ ಜಾತಿ ಮತ್ತು ವರ್ಗದ ಕಾರಣದಿಂದ ಮನುಷ್ಯ ಸ್ವತಂತ್ರವಾಗಿ ಜೀವಿಸಲು ಆಗುತ್ತಿಲ್ಲ. ಒಂದು ಕಡೆ ಆಳುವ ಸರ್ಕಾರದಿಂದ ಏನೇ ಸವಲತ್ತು ಸೌಲಭ್ಯಗಳನ್ನು ಪಡೆಯಬೇಕಾದರೆ ಅಲ್ಲಿ ಜಾತಿಯ ಹಣೆಪಟ್ಟಿ ಅಂಟಿಸಿಕೊಂಡಿರಲೇಬೇಕು. ಶಿಕ್ಷಣ ಸಂಸ್ಥೆಗಳು ವಿಶ್ವವಿದ್ಯಾಲಯಗಳು ಸಹ ಇಂದು ಜಾತಿಯ ಆಧಾರದ ಮೇಲೆ ಧರ್ಮದ ಆಧಾರದ ಮೇಲೆ ಪ್ರವೇಶವನ್ನು, ಉದ್ಯೋಗವನ್ನು ಕೊಡುತ್ತಿರುವುದು ಬೇಲಿಯೇ ಎದ್ದು ಹೊಲ ಮೇಯುವಂತಾಗಿದೆ. ಏಕೆಂದರೆ ಜಾತಿಯನ್ನು ಹೊಡೆದೊಡಿಸುವ ಶಕ್ತಿ ಇರುವುದು ಶಿಕ್ಷಣಕ್ಕೆ ಮಾತ್ರ. ಆ ಶಿಕ್ಷಣವೇ ಇಂದು ವ್ಯಾಪಾರೀಕರಣ ಪ್ರಕ್ರಿಯೆಗೆ ಒಳಗಾಗಿ ಜಾತಿಯ ಉತ್ತರಾಧಿಕಾರಿಯಂತೆ ವರ್ತಿಸುತ್ತಿರುವುದು ನಿಜಕ್ಕೂ ನಮ್ಮ ದುರ್ದೈವವೇ ಸರಿ. ವರ್ಗ ತಾರತಮ್ಯದಿಂದ ಮನುಷ್ಯ ಅಷ್ಟೇ ಪ್ರಮಾಣದ ಸಂಕಷ್ಟಕ್ಕೆ ಸಿಲುಕಿದ್ದಾನೆ. ಸಮಾಜದಲ್ಲಿ ವರ್ಗ ಸಂಘರ್ಷವೇರ್ಪಟ್ಟರೆ ಅದು ಸಮಾಜದ ವಿನಾಶದ ಸಂಕೇತವೇ ಹೊರತು ಮತ್ತೇನು ಅಲ್ಲ. ಬಡವ ಸಿರಿವಂತರ ನಡುವೆ ಅಂತರ ಕಡಿಮೆಯಾಗಬೇಕು. ಉಳ್ಳವರು ಇಲ್ಲದವರನ್ನು ಪೋಷಿಸುವ ಆಶ್ರಯದಾತರಾಗಬೇಕು. ಆಗಿಲ್ಲದಿದ್ದರೆ ಅಧಿಕ ಸಂಖ್ಯೆಯಲ್ಲಿರುವ

ಇಲ್ಲದವರು ಅಲ್ಪ ಸಂಖ್ಯಾತರಾದ ಉಳ್ಳವರನ್ನು ನಾಶ ಮಾಡುವ ಕಾಲ ಹೆಚ್ಚು ದಿನವಿಲ್ಲ. ಹೊಟ್ಟೆ-ಬಟ್ಟೆಗಳಿಗೆ ಕಡಿಮೆಯಾದ ಮನುಷ್ಯ ಮೃಗದಂತೆ ಇಡೀ ವ್ಯವಸ್ಥೆಯನ್ನು ನಾಶಗೊಳಿಸುತ್ತಾನೆ ಎಂದು ಹೇಳುವ ಡಿ.ಆರ್. ನಾಗರಾಜರ ಮಾತು ಇಲ್ಲಿ ಮನನ ಯೋಗ್ಯ.

ಶಿವರಾಮ ಕಾರಂತರು ನವೋದಯ ಕಾಲಘಟ್ಟದ ಪ್ರಮುಖ ಲೇಖಕರು ಕಾದಂಬರಿಕಾರ, ಸೃಜನಶೀಲ ವ್ಯಕ್ತಿತ್ವ ಎಂದು ಗುರುತಿಸಿಕೊಂಡರೂ ಕಾದಂಬರಿ ಕ್ಷೇತ್ರಕ್ಕೆ ಇವರ ಕೊಡುಗೆ ಶ್ರೇಷ್ಠವಾದದ್ದು. ಶಿವರಾಮ ಕಾರಂತರು ಬರೆದದ್ದು ಒಟ್ಟು ೪೪ ಕಾದಂಬರಿಗಳು. ಈ ಕಾದಂಬರಿಗಳಲ್ಲಿ ಚೋಮನ ದುಡಿ ಕಾದಂಬರಿ ೩೦ರ ದಶಕದಲ್ಲಿ ರಚನೆಯಾದ ಅತ್ಯಮೂಲ್ಯ ಕೃತಿಯಾಗಿದೆ. ಈ ಕಾದಂಬರಿಯ ಮೇಲೆ ಸಾಕಷ್ಟು ವಿಮರ್ಶೆಗಳು ಬಂದಿರುವುದು, ಇಂದಿಗೂ ಈ ಕಾದಂಬರಿ ವಿಶ್ಲೇಷಣೆಗೆ ಒಳಪಡುತ್ತಿರುವುದು ಈ ಕಾದಂಬರಿಯು ಬಿಟ್ಟು ಕೊಡುವ ಸಾರ್ವಕಾಲಿಕ ಸತ್ಯಕ್ಕೆ ಸಾಕ್ಷಿಯಾಗಿದೆ. ಆದ್ದರಿಂದ ಇಂದಿಗೂ ಸಹ ಹಲವಾರು ಸಂಶೋಧನಾ ವಿದ್ಯಾರ್ಥಿಗಳು ಈ ಕೃತಿಯನ್ನು ವಿವಿಧ ಶಿಸ್ತಿನಿಂದ ಅಧ್ಯಯನಕ್ಕೆ ತೆಗೆದು ಕೊಳ್ಳುತ್ತಿದ್ದಾರೆ.

ಶಿವರಾಮ ಕಾರಂತರ ಚೋಮನ ದುಡಿ ಆಕಾರದಲ್ಲಿ ಪುಟ್ಟದಾದರೂ ವಿಷಯದ ವ್ಯಾಪ್ತಿಯಲ್ಲಿ ಗಹನವಾದದ್ದು, ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ಮಾತಿನಂತೆ ಆಕಾರದಲ್ಲಿ ವಾಮನನಾದರೂ ವಿಷಯ ವಿಶ್ಲೇಷಣೆಗೆ ತೆಗೆದುಕೊಂಡಾಗ ತ್ರಿವಿಕ್ರಮನಂತೆ ಬೆಳೆಯುವ ವಿಶ್ಲೇಷಣಾ ಗುಣವನ್ನು ಕಾದಂಬರಿ ಒಳಗೊಂಡಿದೆ ರಚನೆಯಾಗಿ ೮೦ ದಶಕಗಳು ಕಳೆದರೂ ಇಂದಿಗೂ ಅದು ವಿಮರ್ಶೆಗೆ ಒಳಗಾಗುತ್ತಿರುವುದು ಅದರ ಶ್ರೇಷ್ಠತೆಯನ್ನು ತೋರಿಸುತ್ತದೆ. ಸಾಹಿತ್ಯ ಲೋಕದ ಇಂತಹ ವಿಶಿಷ್ಟ ಕಾದಂಬರಿಯನ್ನು ನನ್ನ ನಿಬಂಧ ರಚನೆಗೆ ಆಯ್ಕೆ ಮಾಡಿಕೊಂಡಿದ್ದೇನೆ.

ಯು.ಆರ್. ಅನಂತಮೂರ್ತಿಯವರು ನವ್ಯ ಸಾಹಿತಿಕ ನೆಲೆಯ ಪ್ರಮುಖ ವಿಮರ್ಶಕರು, ಲೇಖಕರು ಮತ್ತು ಕಾದಂಬರಿಕಾರರೆಂದು ಸಾಹಿತ್ಯ ಲೋಕಕ್ಕೆ ಪರಿಚಿತರು ಇವರ ಆರಂಭದ ಕಾದಂಬರಿಗಳಾದ ಸಂಸ್ಕಾರ ಭಾರತೀಪುರ ಮತ್ತು ಅವಸ್ಥೆಯ ಮೂಲಕ ಸಹೃದಯ ಓದುಗ ಬಳಗಕ್ಕೆ ಮತ್ತು ಮೇಲ್ವರ್ಗದ ಬ್ರಾಹ್ಮಣರಿಗೆ ದೊಡ್ಡ ಆಘಾತವನ್ನು ಉಂಟುಮಾಡಿದವರು ಭಾರತದಲ್ಲಿ ಧರ್ಮ ಮತ್ತು ಜಾತಿಯು ಹೆಸರೆತ್ತಿದವರು ಯಾರೇ ಆಗಲಿ ಜನತಾ ದ್ರೋಹಿಗಳಾಗುತ್ತಾರೆ ಎಂಬ ಅಭಿಪ್ರಾಯ ಚಾಲ್ತಿಯಲ್ಲಿದ್ದ ಸಂದರ್ಭದಲ್ಲಿ ಸಂಪ್ರದಾಯವನ್ನು, ಪರಂಪರೆಯನ್ನು ದಮನ ಸ್ವರೂಪಿಯಾಗಿ ಕಂಡವರು ಯು.ಆರ್. ಅನಂತಮೂರ್ತಿಯವರು ಬ್ರಾಹ್ಮಣ ವರ್ಗದಲ್ಲಿ ಜನಿಸಿದರೂ

ಬ್ರಾಹ್ಮಣ್ಯವನ್ನು ತಿರಸ್ಕರಿಸಿ ಒಬ್ಬ ಸಾಮಾನ್ಯನ ನೆಲೆಯಲ್ಲಿ ನಿಂತು ಇಡೀ ವ್ಯವಸ್ಥೆಯನ್ನು ಪುನರ್ ಅವಲೋಕಿಸಿದವರು, ಬ್ರಾಹ್ಮಣ್ಯ ಜನನದ ನಂತರ ಬಂದದ್ದು ಆದರೆ ಮನುಷ್ಯತ್ವ ಅದಕ್ಕಿಂತಲೂ ಪ್ರಾಚೀನವಾದದ್ದು. ಮನುಷ್ಯ ಮೊದಲು ಮನುಷ್ಯತ್ವಕ್ಕೆ, ಮಾನವೀಯತೆಗೆ ಬೆಲೆಕೊಡಬೇಕೆಂದು ಪ್ರಬಲವಾಗಿ ತಮ್ಮ ಕೃತಿಗಳಲ್ಲಿ ಪ್ರತಿಪಾದಿಸಿದವರು.

ಅನಂತಮೂರ್ತಿಯವರ ಸಂಸ್ಕಾರ ಕಾದಂಬರಿ ಪ್ರಕಟಗೊಂಡಾಗ ಸಮಾಜದ ಇಡೀ ಬ್ರಾಹ್ಮಣ ವರ್ಗವೇ ತಲ್ಲಣಗೊಂಡಿತು. ಅದುವರೆಗೆ ಆ ವರ್ಗವನ್ನು ಪ್ರಶ್ನಿಸುವ, ಅದರಲ್ಲೂ ಅದೇ ವರ್ಗದಲ್ಲಿ ಜನಿಸಿದ ವ್ಯಕ್ತಿಯೊಬ್ಬನಿಂದ ಇಂತಹ ಸಾಹಿತ್ಯ ರಚನೆಯನ್ನು ಯಾರು ನಿರೀಕ್ಷಿಸಿರಲಿಲ್ಲ. ಅಂತಹ ವಿದ್ಯುತ್ ಸ್ಪರ್ಶವನ್ನು ಕೊಟ್ಟವರು ಅನಂತಮೂರ್ತಿಯವರು. ನಮ್ಮ ದೇಶದ ಸಂಸ್ಕೃತಿಯಲ್ಲವು ಬ್ರಾಹ್ಮಣಮಯವಾದದ್ದು, ಇಲ್ಲಿ ಶೂದ್ರ-ದಲಿತ-ಆದಿವಾಸಿಗಳಿಗೆ ತಮ್ಮದೆ ಆದ ಒಂದು ಸಂಸ್ಕೃತಿ, ಸಂಪ್ರದಾಯ ಇಲ್ಲವೆಂಬ ಮೇಲ್ಜಾತಿಯ ಗರ್ವದ ಪೊರೆಯಿಂದ ಕುರುಡಾದ ಮೇಲ್ವರ್ಗಕ್ಕೆ ಅನಂತಮೂರ್ತಿ ಒಬ್ಬ ಸಾಮಾನ್ಯನ ಸ್ತರದಲ್ಲಿ ನಿಂತು ಇಡೀ ವರ್ಗವನ್ನು ತಮ್ಮ ಕಾದಂಬರಿಯಲ್ಲಿ ವಿಮರ್ಶಗೆ, ವಿಶ್ಲೇಷಣೆಗೆ ಒಳಪಡಿಸಿದರು.

ಮೇಲ್ವರ್ಗದ ಸೇವೆಯಲ್ಲಿ ತಮ್ಮನ್ನೇ ತಾವು ಕಳೆದುಕೊಂಡಿದ್ದ ಶೂದ್ರರು, ದಲಿತರನ್ನು ಕಣ್ಣು ತೆರೆಸುವ ಪ್ರಯತ್ನವನ್ನು ಅನಂತಮೂರ್ತಿಯವರು ತಮ್ಮ ಕೃತಿಗಳಲ್ಲಿ ಮಾಡಿದ್ದಾರೆ. ಕೆಳವರ್ಗದವರ ಅನಾಥ ಪ್ರಜ್ಞೆ ಮತ್ತು ಪರಕೀಯತೆಯನ್ನು ಬ್ರಾಹ್ಮಣ ಕುಲದ ಅನಂತಮೂರ್ತಿ ಬಹಿರಂಗಗೊಳಿಸುತ್ತಾರೆ. ಇಲ್ಲಿ ಅನಂತಮೂರ್ತಿಯವರು ಸ್ವತ: ಬ್ರಾಹ್ಮಣ ವರ್ಗದಲ್ಲೆ ಜನಿಸಿ ಅದರ ವಿರುದ್ಧವೇ ತಿರುಗಿ ಬೀಳುವುದು ಆ ವರ್ಗದವರ ಮೌಢ್ಯವನ್ನು ಅಂಥ ಆಚರಣೆಗಳನ್ನು ಗೊಡ್ಡು ಸಂಪ್ರದಾಯವನ್ನು ಬಯಲಿಗೆಳೆಯುತ್ತಾರೆ.

ಸಮಾಜದಲ್ಲಿ ಕೆಳವರ್ಗದವರು ಮೇಲ್ವರ್ಗದವರನ್ನು, ಬಡವರು ಶ್ರೀಮಂತರನ್ನು, ಕೂಲಿಕಾರರು ಮಾಲೀಕರನ್ನು ಆಳು ಯಜಮಾನನ್ನು ದೂರುವುದು, ದೂಷಣೆ ಮಾಡುವುದು ಸಹಜ. ಆದರೆ ನಾನು ಅಧ್ಯಯನಕ್ಕೆ ತೆಗೆದು ಕೊಂಡಿರುವ ಇಬ್ಬರು ಲೇಖಕರು ಇದಕ್ಕೆ ವಿರುದ್ಧವಾದ ಅಭಿಪ್ರಾಯವನ್ನು ಒಳಗೊಂಡಿರುವ ಭಿನ್ನ ಕಾಲಘಟ್ಟದ ಲೇಖಕರು. ಕಾರಂತ ಮತ್ತು ಮೂರ್ತಿ ಇಬ್ಬರೂ ಸಹ ಇಂತಹ ಧೋರಣೆಯನ್ನು ಒಳಗೊಂಡಿರುವುದರಿಂದ ಜೊತೆಗೆ ಸಮಕಾಲೀನ ಸಮಾಜದ ಆಗು-ಹೋಗುಗಳಿಗೆ ಈ ಸೃಜನಶೀಲ ಮನಸ್ಸುಗಳು

ಹೇಗೆ ಸ್ಪಂದಿಸುತ್ತವೆ ಎಂಬುವುದನ್ನು ಅಧ್ಯಯನ ಮಾಡುವ ಉದ್ದೇಶದಿಂದ ಈ ಇಬ್ಬರು ಲೇಖಕರ ಕೃತಿಗಳನ್ನು ಆಯ್ಕೆ ಮಾಡಿಕೊಂಡಿದ್ದೇನೆ.

ಚೋಮನ ದುಡಿ ಕಾದಂಬರಿಯೂ ಈ ಹಿಂದೆ ಹಲವು ವಿಭಿನ್ನ ದೃಷ್ಟಿಕೋನಗಳಿಂದ ಅಧ್ಯಯನಕ್ಕೆ ಒಳಪಟ್ಟ ಕಾರಂತರ ಜನಪ್ರಿಯ ಕೃತಿ. ಈ ಕೃತಿಯ ಮೇಲೆ ಎಷ್ಟೇ ಅಧ್ಯಯನಗಳು ನಡೆದರು ಸಹ ಅದು ಸಮಕಾಲೀನರಿಂದ ಮತ್ತೆ ಮತ್ತೆ ಓದಿಸಿಕೊಳ್ಳುವ ಸಾಮಾಜಿಕ ಕಾದಂಬರಿಯಾಗಿದೆ. ಈ ಕಾದಂಬರಿಯಲ್ಲಿ ಬರುವ ಮೇಲ್ವರ್ಗದ ಸಂಕಪ್ಪಯ್ಯ ಅವನ ಶೋಷಣೆಗೆ ಒಳಪಡುವ ಕೆಳವರ್ಗದ ಚೋಮ ಲೇಖಕರ ಕಾಲದಲ್ಲಿ ಮಾತ್ರ ಜೀವಿಸಿ ಗತಿಸಿದ್ದವರಲ್ಲ ಅಂತಹ ಸಂಕಪ್ಪಯ್ಯ ಮತ್ತು ಚೋಮಗಳು ಇಂದಿಗೂ ನಮ್ಮ ಸಮಾಜದಲ್ಲಿ ಬದುಕುತ್ತಿರುವುದರಿಂದ ಈ ಕಾದಂಬರಿ ಇಂದಿಗೂ ಪ್ರಸ್ತುತವೆನಿಸುತ್ತದೆ. ಕೆಳವರ್ಗದಲ್ಲಿ ಹುಟ್ಟಿದರು ಜೀವನೋತ್ಸಹದಿಂದ ಪುಟಿಯುವ ಬೆಳ್ಳಿ, ಏನೇ ಸಮಸ್ಯೆ ಬಂದರೂ ಅದನ್ನು ಸಮಾಧಾನದಿಂದಲೇ ಸ್ವೀಕರಿಸುವ ಅವಳ ಸ್ವಭಾವ ಇಂದಿಗೂ ಪ್ರಸ್ತುತವೆನಿಸುತ್ತದೆ. ಅಂತಹ ಎಷ್ಟೋ ಹೆಣ್ಣು ಮಕ್ಕಳಿಂದ ನಮ್ಮ ಸಮಾಜ ಮುನ್ನೆಡೆಯುತ್ತಿದೆ ಎಂದರೆ ಅದು ಸತ್ಯಕ್ಕೆ ಹತ್ತಿರವಾದ ಮಾತು

ಚೋಮನದುಡಿಯಲ್ಲಿ ಬರುವ ಮಿಂಗೇಲ ಮತ್ತು ಮನ್ವೇಲರು ಮೇಲ್ವರ್ಗದ ದರ್ಪ ದಬ್ಬಾಳಿಕೆಯನ್ನು, ಕೆಳವರ್ಗದ ಮೇಲೆ ಪ್ರಯೋಗ ಮಾಡಿ ಖುಷಿಪಟ್ಟವರು ಕೆಳವರ್ಗದ ಜನರು ಮನುಷ್ಯರು, ಅವರು ನಮ್ಮಂತೆ ಗೌರವದಿಂದ ಬಾಳಿ ಬದುಕಬೇಕೆಂಬ ಕನಿಷ್ಟ ಕಾಳಜಿಯಿಲ್ಲದ ಸಮಾಜದ ಗಣ್ಯವಕ್ತಿಗಳು. ಇಂತಹ ಗಣ್ಯವ್ಯಕ್ತಿಗಳ ದೌರ್ಜನ್ಯಕ್ಕೆ ಒಳಗಾಗುವುದು ಸಮಾಜದ ಕೆಳವರ್ಗದ ಚೋಮನ ಕುಟುಂಬದವರು. ಸಮಾಜದಲ್ಲಿ ಶೋಷಣೆ, ದಬ್ಬಾಲಿಕೆ, ದೌರ್ಜನ್ಯಕ್ಕೆ ಒಳಗಾದ ಜನರು ಒಂದಾಗಿ ಮೇಲ್ವರ್ಗದವರ ವಿರುದ್ಧ ತಿರುಗಿದರೆ ಇಡೀ ಸಮಾಜದ ವ್ಯವಸ್ಥೆ ಹದಗೆಡುತ್ತದೆ. ಸಮಾಜದ ನೆಮ್ಮದಿಯನ್ನು ಕಲಕುತ್ತದೆ. ಮತ್ತದೇ ದ್ವೇಷ, ಮತ್ಸರದ ಕುದಿಯಲ್ಲಿ ಕೊನೆಗೊಮ್ಮೆ ಬಡವ ಶ್ರೀಮಂತ, ಮೇಲ್ವರ್ಗ ಕೆಳವರ್ಗ ಎಲ್ಲರೂ ನಾಶವಾಗುತ್ತಾರೆ. ಇಂತಹ ವರ್ಗ ಮತ್ತು ಜಾತಿ ವೈಷಮ್ಯಗಳನ್ನು ಕಾರಂತರ ದುಡಿಯಲ್ಲಿ ಅಧ್ಯಯನ ಮಾಡುವುದು ನನ್ನ ನಿಬಂಧದ ಉದ್ದೇಶವಾಗಿದೆ.

ಯು.ಆರ್. ಅನಂತಮೂರ್ತಿಯವರ ಭಾರತೀಪುರ ಕಾದಂಬರಿಯು ಮೇಲ್ವರ್ಗದ ಬ್ರಾಹ್ಮಣ ಕುಲದಲ್ಲಿ ಜನಿಸಿದ ಪಾಶ್ಚಾತ್ಯ ಶಿಕ್ಷಣದಿಂದ ಪ್ರಭಾವಿತನಾದ ಜಗನ್ನಾಥ ಸಮಾಜವನ್ನು ವಿಶ್ಲೇಷಣೆ ಮಾಡುವ ದೃಷ್ಟಿಕೋನವನ್ನು ಒಳಗೊಂಡಿದೆ. ಜಗನ್ನಥ ಸುಶಿಕ್ಷಿತ ಮೇಲ್ವರ್ಗದ

ಶ್ರೀಮಂತನಾದರೂ ಕೆಳವರ್ಗದ ಹೊಲೆಯರ ಬದುಕು ಬವಣೆಯನ್ನು ಹತ್ತಿರದಿಂದ ಕಂಡು ಅವಕ್ಕೆ ಪರಿಹಾರ ಹುಡುಕುವ, ಹೊಲೆಯರ ಸಾಂಪ್ರದಾಯಿಕ ದೃಷ್ಟಿಕೋನವನ್ನು ಬದಲಾಯಿಸುವ, ಅವರಲ್ಲಿ ವೈಚಾರಿಕತೆ, ವೈಜ್ಞಾನಿಕತೆಗಳ ಬಗ್ಗೆ ಅರಿವು ಮೂಡಿಸುವ ಪ್ರಯತ್ನದಲ್ಲಿ ಜಗನ್ನಾಥನ ಹೋರಾಟ. ಜಗನ್ನಾಥ ಎಷ್ಟೇ ಹೋರಾಟ ಮಾಡಿದರೂ ಅಂತಿಮವಾಗಿ ಆತ ಪಡೆಯುವ ಪ್ರತಿಫಲ ಮಾತ್ರ ಶೂನ್ಯವಾಗಿರುತ್ತದೆ. ಇದಕ್ಕೆ ಕಾರಣ ಕಾದಂಬರಿಯಲ್ಲಿ ಬರುವ ಜಾತಿ ಮತ್ತು ವರ್ಗ ಸಂಘರ್ಷದ ಅಂಶಗಳು, ಕೆಳವರ್ಗದವರು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು, ಮೇಲ್ವವರ್ಗದವರು ತಮ್ಮ ಇರುವಿಕೆಗಾಗಿ ಪೈಪೋಟಿಗಿಳಿದಾಗ ಜಗನ್ನಾಥನಂತಹ ಆದರ್ಶವಾದಿಯ ಕನಸುಗಳೆಲ್ಲ ನುಚ್ಚುನೂರಾಗುತ್ತವೆ. ಚೋಮನ ದುಡಿ ಮತ್ತು ಭಾರತೀಪುರಗಳೆರಡಲ್ಲಿಯೂ ಇಂತಹ ಜಾತಿ ಮತ್ತು ವರ್ಗ ಸಂಘರ್ಷದ ಹಿನ್ನೆಲೆಯಲ್ಲಿ ವಿಶ್ಲೇಷಣೆ ಮಾಡುವ ಉದ್ದೇಶದಿಂದ ಈ ಎರಡು ಕಾದಂಬರಿಗಳನ್ನು ಆಯ್ಕೆ ಮಾಡಿಕೊಂಡಿರುತ್ತೇನೆ.

ಜಾತಿ ಮತ್ತು ವರ್ಗ ಸಂಘರ್ಷ ಎಂಬ ನನ್ನ ನಿಬಂಧವು ಒಟ್ಟು ೭ ಅಧ್ಯಾಯಗಳನ್ನು ಒಳಗೊಂಡಿದೆ. ವಿಷಯಕ್ಕೆ ಪೂರಕವಾಗಿ ೭ ಅಧ್ಯಾಯಗಳನ್ನು ವಿಂಗಡಿಸಿಕೊಂಡಿದ್ದೇನೆ.

ಅವುಗಳೆಂದರೆ

೧. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೨. ಪ್ರೇರಣೆ ಮತ್ತು ಪ್ರಭಾವ

೩. ಚೋಮನ ದುಡಿ ಮತ್ತು ಭಾರತೀಪುರಗಳಲ್ಲಿ ಜಾತಿ ಸಂಘರ್ಷ

೪. ಚೋಮನ ದುಡಿ ಮತ್ತು ಭಾರತೀಪುರಗಳಲ್ಲಿ ವರ್ಗ ಸಂಘರ್ಷ

೫. ಕಾದಂಬರಿಯ ಫಲಿತಗಳು.

೬. ಉಪ ಸಂಹಾರ

೭. ಪರಾಮರ್ಶನ ಗ್ರಂಥಗಳು

ಹೀಗೆ ಅಧ್ಯಯನದ ದೃಷ್ಟಿಯಿಂದ ಏಳು ಅಧ್ಯಾಯಗಳಾಗಿ ಮಾಡಿಕೊಂಡು ಮೊದಲ ಅಧ್ಯಾಯವು ನನ್ನ ನಿಬಂಧದ ಆಯ್ಕೆ ಉದ್ದೇಶವನ್ನು ಒಳಗೊಂಡಿದೆ.

ಎರಡನೇ ಅಧ್ಯಾಯವು ಕಾದಂಬರಿಯ ರಚನೆಗೆ ಪೂರಕವಾದ ಪ್ರೇರಣೆಗಳು ಮತ್ತು ಲೇಖಕರ ಮೇಲೆ ಪ್ರಭಾವಬೀರಿದ ವಿವಿಧ ಘಟನೆಗಳು, ಸನ್ನಿವೇಶಗಳು ಕಾದಂಬರಿ ರಚನೆಯ ಹಿನ್ನೆಲೆಯನ್ನು ಪರಿಚಯ ಮಾಡಿಕೊಡುತ್ತದೆ.

ಮೂರನೆಯ ಅಧ್ಯಾಯವು ಎರಡು ಕಾದಂಬರಿಗಳಲ್ಲಿ ಬರುವ ಜಾತಿ ಸಂಘರ್ಷದ ಸನ್ನಿವೇಶಗಳು, ಜಾತಿ ಸಂಘರ್ಷದಿಂದ ವ್ಯಕ್ತಿಗಳು ಎದುರಿಸುವ ಸಂಕಷ್ಟ, ಕಾದಂಬರಿಕಾರನ ದೃಷ್ಟಿಯಲ್ಲಿ ಜಾತೀಯತೆ ಬಗ್ಗೆ ಈ ಅಧ್ಯಾಯದಲ್ಲಿ ಚರ್ಚಿಸಿದ್ದೇನೆ.

ನನ್ನ ನಿಬಂಧದ ನಾಲ್ಕನೆಯ ಅಧ್ಯಾಯವು ನನ್ನ ಆಯ್ಕೆಯ ಕಾದಂಬರಿಯಲ್ಲಿ ವರ್ಗ ಸಂಘರ್ಷದ ಸನ್ನಿವೇಶಗಳು, ವರ್ಗ ಸಂಘರ್ಷದಿಂದ ಸಮಾಜದ ಮೇಲೆ ಬೀರುವ ದುಷ್ಪರಿಣಾಮಗಳು, ಈ ಸನ್ನೀವೇಶದಲ್ಲಿ ಇಬ್ಬರು ಲೇಖಕರ ಅನಿಸಿಕೆಗಳ ಬಗ್ಗೆ ವಿಶ್ಲೇಷಣೆ ಮಾಡುತ್ತದೆ.

ಐದನೆಯ ಅಧ್ಯಾಯವು ಕಾದಂಬರಿಯ ಅಂತಿಮ ಫಲಿತಾಂಶವನ್ನು ಹೇಳುವ ಘಟಕವಾಗಿದೆ. ಕಾದಂಬರಿಗಳು ತನ್ನ ಉದ್ದೇಶ, ಧ್ಯೇಯ ಸಾಧಿಸುವಲ್ಲಿ ಎಷ್ಟು ಯಶಸ್ವಿಯಾಗಿವೆ, ಕಾದಂಬರಿಕಾರರು ಕೇವಲ ಆದರ್ಶವಾದಿಗಳಾಗಿಯೇ ಉಳಿದು ಕೊಳ್ಳುವರೆ ಅಥವಾ ಅವರಿಗೆ ಸಮಾಜದ ವಾಸ್ತವತೆಯ ಅರಿವಿದೆಯೇ ಎಂಬುವುದನ್ನು ಈ ಅಧ್ಯಾಯ ಒಳಗೊಂಡಿದೆ.

ಆರನೇ ಅಧ್ಯಾಯವು ನಿಬಂಧ ಸಿದ್ಧಪಡಿಸಿದ, ಸಂಶೋಧನಾ ವಿದ್ಯಾರ್ಥಿಯಾಗಿ, ನಾನು ಆಯ್ಕೆ ಮಾಡಿಕೊಂಡ ವಿಷಯದ ಬಗ್ಗೆ ನನ್ನದೆ ಅಭಿಪ್ರಾಯ ಮತ್ತು ಅನಿಸಿಕೆಗಳು ಮತ್ತು ಪ್ರಸ್ತುತ ವ್ಯವಸ್ಥೆಗೆ ನನ್ನ ನಿಬಂಧದ ಮುಖ್ಯ ಆಶಯವನ್ನು ಹೇಳುತ್ತದೆ.

ಕೊನೆಯ ಅಧ್ಯಾಯವು ಈ ನಿಬಂಧ ರಚನೆಗೆ ನಾನು ಅಧ್ಯಯನ ಮಾಡಿದ ಕೆಲವು ಪ್ರಮುಖ ಕೃತಿ ರತ್ನಗಳ ಪಟ್ಟಿಯನ್ನು ಒಳಗೊಂಡಿರುವ ಅಧ್ಯಾಯವಾಗಿದೆ.

ಹೀಗೆ ನನ್ನ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಗಳು ಬಿಂಬಿಸಲ್ಪಟ್ಟಿವೆ. ಇಲ್ಲಿ N¯ u®°… ‹ S®¡®± H °u®Ì£ 'Xµ² °î®±w® u®±m' ಮತ್ತು 'ಭಾರತೀಪುರ' ಎಂದು ಸೀಮಿತ ದೃಷ್ಟಿಯಲ್ಲಿ, ಅಧ್ಯಯನ ಮಾಡಿರುವುದನ್ನು ಸ್ಪಷ್ಟಪಡಿಸಲು ಬಯಸುತ್ತೇನೆ.

೨. ಪ್ರೇರಣೆ ಮತ್ತು ಪ್ರಭಾವ

ಕಸವರವೆಂಬುವುದು, ನೆರೆ ಸೈರಿಸಲಾರ್ಪೊಡೆ ಪರ ವಿಚಾರಮುಮಂ ಪರ ಧರ್ಮಮಂ ಎಂಬ ಮಾತನ್ನು ಕವಿರಾಜಮಾರ್ಗಕಾರ ೮ನೇ ಶತಮಾನದಲ್ಲೇ ಉಲ್ಲೇಖಿಸಿದ್ದಾನೆ. ಈ ಮಾತಿನ ಅರ್ಥ ನಿಜವಾದ ಐಶ್ವರ್ಯ ಎಂದರೆ ಪರವಿಚಾರಗಳನ್ನು, ಪರಧರ್ಮಗಳನ್ನು [illegible]' ಆಗಿದೆ. ಅನ್ಯರ ವಿಚಾರಗಳನ್ನು ಪರಧರ್ಮಗಳನ್ನು ಸಹಿಸುವುದು ಗೌರವಿಸುವುದು ಎಲ್ಲಿ ಸಾಧ್ಯವಾಗುವುದಿಲ್ಲವೋ, ಎಲ್ಲಿ ಅನ್ಯರ ಆಚಾರ-ವಿಚಾರಗಳಿಗೆ, ಹಕ್ಕುಗಳಿಗೆ ಧಕ್ಕೆ ಉಂಟಾಗುವುದೋ ಅಲ್ಲಿ ಕಾರಂತರ ಚೋಮನ ದುಡಿ ಮತ್ತು ಅನಂತಮೂರ್ತಿಯವರ ಭಾರತೀಪುರದಂತ ಕಾದಂಬರಿಗಳು ಜನ್ಮತಳೆಯಲು ಅವಕಾಶ ಉಂಟಾಗುತ್ತದೆ.

ನವೋದಯ ಮತ್ತು ನವ್ಯ ಕಾಲ ಘಟ್ಟದಲ್ಲಿ ರಚಿತವಾದಂತಹ ಕಾದಂಬರಿಗಳು ಚೋಮನ ದುಡಿ ಮತ್ತು ಭಾರತೀಪುರ ಕಾದಂಬರಿಗಳು. ಈ ಎರಡು ಕಾದಂಬರಿಗಳು ಬೇರೆ ಬೇರೆ ಕಾಲದಲ್ಲಿ ರಚಿತವಾದರೂ ಸಹ ಸಮಕಾಲೀನ ಸರ್ವಕಾಲೀಕ ಸಿದ್ಧಾಂತವನ್ನು ತಮ್ಮ ಅಂತರಂಗದಿಂದ ಬಿಂಬಿಸಿದ ಕೃತಿಗಳು.

ನವೋದಯ ಕಾಲ ಘಟ್ಟದ ಕೃತಿಗಳು ಸಾಮಾನ್ಯವಾಗಿ ಆದರ್ಶದ ನೆಲೆಯನ್ನು ಹೊಂದಿದ್ದರೆ, ನವ್ಯದ ಕೃತಿಗಳು ಮಾನವನ ಬದುಕನ್ನು ಪ್ರಯೋಗಾತ್ಮಕ ನೆಲೆಯಲ್ಲಿ ಚಿತ್ರಿಸುವ ಕಡೆಗೆ ಗಮನ ಕೊಟ್ಟಿವೆ. ಆದರೆ ಚೋಮನ ದುಡಿ ಮತ್ತು ಭಾರತೀಪುರ ಕಾದಂಬರಿಗಳು ಬೇರೆಯದೇ ರೀತಿಯಲ್ಲಿ ರಚಿತವಾಗಿರುವುದು ಕಂಡು ಬರುತ್ತದೆ. ಆ ಕಾಲಘಟ್ಟದ ಈ ವಿಭಿನ್ನ ಕೃತಿಗಳ ರಚನೆಗೆ ಕಾರಣವಾದಂತಹ ಪ್ರೇರಣೆ ಮತ್ತು ಪ್ರಭಾವಗಳನ್ನು ತಿಳಿಯುವುದು ಅಗತ್ಯ.

ಆರಂಭದಲ್ಲಿ ಚೋಮನ ದುಡಿ' ಕಾದಂಬರಿಯ ಪ್ರೇರಣೆ ಮತ್ತು ಪ್ರಭಾವಗಳನ್ನು ಗಮನಿಸೋಣ. ಚೋಮನದುಡಿ ಕಾದಂಬರಿ ಚೋಮ' ಎಂಬ ದಲಿತನ ಚಿತ್ರಣವನ್ನು ಚಿತ್ರಿಸಿದೆ. ಈ ಕಾದಂಬರಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಹೊಲೆಯರ ಜೀವನ ಚಿತ್ರಣವನ್ನು ಹಸಿಯಾಗಿ ಕಾರಂತರ ಮೂಸೆಯಲ್ಲಿ ಚಿತ್ರಿತವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಆರ್ಥಿಕ ಸಮೀಕ್ಷೆಯಲ್ಲಿ ಕಾರಂತರು ತೊಡಗಿದಾಗ ಕಾರಂತರ ಗಮನಕ್ಕೆ ಬಂದ ಪ್ರತ್ಯಕ್ಷ, ನೈಜ ಅನುಭವದ ಕಥೆ ಈ ಚೋಮನ

ದುಡಿ, ಈ ಕಾದಂಬರಿಗೆ ಕಾರಂತರ ನೈಜ ಅನುಭವದ ಜೊತೆಗೆ ಗಾಂಧಿಜೀಯವರ ಹರಿಜನೋದ್ಧಾರ, ಸಮತಾವಾದ, ವಾಸ್ತವವಾದ, ವಸಾಹತುಶಾಹಿ, ಪ್ರಾದೇಶಿಕ ದಲಿತರ ಜೀವನ ಸ್ಥಿತಿ, ಮುಲ್ಕ್‌ರಾಜ್ ಆನಂದರ 'ಅಸ್ಪೃಶ್ಯ' (Untouchable) ಕಾದಂಬರಿ ಮುಂತಾದವುಗಳ ಪ್ರೇರಣೆ - ಪ್ರಭಾವ ಇರುವುದನ್ನು ಕಾದಂಬರಿ ಓದಿದಾಗ ನಮ್ಮ ಅರಿವಿಗೆ ಬರುತ್ತದೆ.

ಭಾರತೀಯ ಸಮಾಜದ ಅತಿದೊಡ್ಡ ಸಾಮಾಜಿಕ ಪಿಡುಗಾದ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಮಹಾತ್ಮ ಗಾಂಧೀಜಿ ಮಾಡಿದ ಹೋರಾಟ ಮತ್ತು ಹರಿಜನೋದ್ಧಾರದ ಆದರ್ಶದಿಂದ ಕಾರಂತರೂ ಪ್ರೇರಿತರಾದಂತೆ ಕಾದಂಬರಿಯಲ್ಲಿ ಗುರುತಿಸಬಹುದು. ತಮ್ಮ ಸುತ್ತಮುತ್ತಲ ಹರಿಜನ ಜೀತದಾಳುಗಳ ಸಂಕಷ್ಟಗಳನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿದ್ದಲ್ಲದೆ, ಅದರ ವಿಷಮ ವಾಸ್ತವವನ್ನು ಆಳವಾಗಿ ಗ್ರಹಿಸಿದರು ಅದರ ಫಲವಾಗಿ ರೂಪತಳೆದದ್ದು "ಚೋಮನ ದುಡಿ" ಕಾದಂಬರಿ, "ಈ ಕೃತಿಯ ಒಡಲಲ್ಲಿ ಒಟ್ಟೊಟ್ಟಿಗೆ ಸಾಮಾಜಿಕ ಹಾಗೂ ಆರ್ಥಿಕ ಆಂದೋಲನವನ್ನು ಕಟ್ಟಿ ಕೊಡುತ್ತದೆ."[೧]

ಕಾರಂತರ ಕೃತಿಯಲ್ಲಿ ಅಸ್ಪೃಶ್ಯತೆಯ ಜೊತೆಗೆ ಮೇಲ್ವರ್ಗ ಮತ್ತು ಕೆಳವರ್ಗದವರು ಪರಸ್ಪರ ಹಕ್ಕನ್ನು ಸ್ಥಾಪಿಸಲು ಕಾದಂಬರಿಯ ಕೊನೆವರೆಗೂ ನಡೆಸುವ ವರ್ಗ ಸಂಘರ್ಷ, ಕಾರಂತರು ಕಾರ್ಲ್‌ಮಾರ್ಕ್ಸ್‌ನಿಂದ ಪ್ರಭಾವಿತವಾಗಿರುವುದನ್ನು ಕಾದಂಬರಿ ಓದುಗರಿಗೆ ಬಿಟ್ಟುಕೊಡದೆ ಇರುವುದಿಲ್ಲ. ಕಾದಂಬರಿಯಲ್ಲಿ ವರ್ಗ ಸಂಘರ್ಷವನ್ನು ಗುರುತಿಸಿದ ನಾವು ಅದರ ಜೊತೆ ಜೊತೆಗೆ ಬರುವ ಜಾತೀಯತೆ ಆಚರಣೆಯನ್ನು ಕಾದಂಬರಿಯಲ್ಲಿ ಗುರುತಿಸಬಹುದು. ಕಾದಂಬರಿಯ ಮುನ್ನುಡಿಯಲ್ಲಿ ಅವರೆ ಈ ರೀತಿ ಹೇಳಿದ್ದಾರೆ "ಇದರಲ್ಲಿ ಬಹಳವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಹೊಲೆಯರ ಜೀವನ ಚಿತ್ರವಿರುವುದರಿಂದ ಅದನ್ನು ಕುರಿತು ಒಂದೆರಡು ಮಾತುಗಳನ್ನಷ್ಟೇ ಹೇಳುತ್ತಾನೆ. ನಮ್ಮಲ್ಲಿ ಅಸ್ಪೃಶ್ಯರಾದ ಹೊಲೆಯರ ತಂಡದಲ್ಲಿ ಮೇರ, ಬೈರ, ಅಜಿಲ, ಮಾರಿ – ಎಂದು ನಾಲ್ಕಾರು ಬೇರೆ-ಬೇರೆ ವಿಭಾಗಗಳಿವೆ. ಅವರಲ್ಲಿ ಮೇರರು ಸಾಗುವಳಿಯನ್ನು ಮಾಡಿಕೊಂಡಿರಲು ಸಾಧ್ಯವಿದೆ. ಆದರೆ

---

೧. ಬಿದನಹಳ್ಳಿ ನರಸಿಂಹ ಮೂರ್ತಿ – ಭಾರತೀಯ ಸಮಾಜದ ಸಾಮಾಜಿಕ - ಆರ್ಥಿಕ ಸ್ಥಿತ್ಯಂತರಗಳು
ಶಿವರಾಮ ಕಾರಂತ: ಸಾಂಸ್ಕೃತಿಕ ಅನುಸಂಧಾನ
ಸಂ. ಗುರುಲಿಂಗ ಕಾಪಸೆ, ಪು.ಸಂ: ೨೭ – ೨೭

ಕೆಳವರ್ಗದವರೆಂದು ಎಣಿಸಲ್ಪಡುವ ಮಾರಿ ಹೊಲೆಯರಿಗೆ ಅಷ್ಟು ಅವಕಾಶವನ್ನು ಸಮಾಜ ಕೊಡುತ್ತಲಿಲ್ಲ. ಅವರ ನೆರಳಿನ ಸ್ಪರ್ಶವೂ ಕೂಡದೆನ್ನುವವರೂ ಇದ್ದಾರೆ. ಉಚ್ಚಷವನ್ನು ತಿಂದೋ, ಸತ್ತ ಜಾನುವಾರುಗನ್ನು ತಿಂದೋ ಇಲ್ಲವೇ, ನಿಂದನೀಯವಾದ ಇನ್ನಾವುದೋ ವೃತ್ತಿಯಿಂದಲೋ ಅವರ ಜೀವನ ಸಾಗಬೇಕು. ತಮ್ಮ ಜಿಲ್ಲೆಯ ಉತ್ತರ ಭಾಗದಲ್ಲಿ ಈ ಜನರನ್ನು ಇಂದಿಗೂ ಕೂಲಿಗೆ ಕರೆಯುವುದಿಲ್ಲ. ಆದರೆ ದಕ್ಷಿಣ ಭಾಗದಲ್ಲಿ ಹೊಲಗೆಲಸಗಳಿಗೇನೋ ಕರೆಯುತ್ತಾರೆ. ಅಂಥ ಬಳಗದ ಜೀವಿಯ, ಚೋಮ ಉಳಿದ ವಿಚಾರಗಳನ್ನು ಕಥೆಯೇ ಹೇಳುತ್ತದೆ"[೧]

ಅರವತ್ತರ ದಶಕದಲ್ಲಿ ಕಾದಂಬರಿಯನ್ನು ಓದಿದ ವಿಮರ್ಶಕ ಡಾ. ರಾಗೌ "ಕಾರಂತರ ಚೋಮನ ದುಡಿ ಕಾದಂಬರಿ ಇಂಗ್ಲೀಷಿಗೆ ಅನುವಾದವಾದರೆ ಕಾರಂತರು ತಮ್ಮ ಮನೆಯ ಮೇಲೆ ಚಿನ್ನದ ಕಳಸ ಹಾಕಿ ಕೊಳ್ಳಬಹುದು ಎಂದು, ಆ ಸಂದರ್ಭದಲ್ಲಿ ರಷ್ಯಾ ಕಮ್ಯೂನಿಸ್ಟ್ ರಾಷ್ಟ್ರವಾಗಿತ್ತು, ಹಾಗೆಯೇ ಭಾರತ ಹಾಗೂ ರಷ್ಯಾದ ಬಾಂಧವ್ಯ ಉತ್ತಮವಾಗಿತ್ತು ಈ ಕಾದಂಬರಿಯ ಮೂಲ ನೆಲೆ ಸಮತಾವಾದದ ನೆಲೆಯಾಗಿದೆ. ಹಾಗೆಯೇ ಕಮ್ಯೂನಿಸ್ಟ್ ಧೋರಣೆಯ ಈ ಕಾದಂಬರಿ ಇಟ್ಟುಕೊಂಡು ಹೇಳಿದ ಮಾತಾಗಿತ್ತು ಅದು."[೨]

ದುಡಿ ಕಾದಂಬರಿಯಲ್ಲಿ ಅಂಬೇಡ್ಕರರ ಸಾಮಾಜಿಕ ಸಮಸ್ಯೆಯ ಅಂಶಗಳನ್ನು ಗುರುತಿಸಬಹುದು. ಸಮಾಜದಲ್ಲಿ ಅಸ್ಪೃಶ್ಯರನ್ನು ಹೀನಾಯವಾಗಿ ನಡೆಸಿ ಕೊಳ್ಳುತ್ತಿದ್ದರೆ, ಅವರ ವಿರುದ್ಧ ಸಮಾನತೆಯನ್ನು ಸಾರಿದವರು ಅಂಬೇಡ್ಕರ್. ಸಮಾಜದಲ್ಲಿ ಮನುಷ್ಯ-ಮನುಷ್ಯರ ನಡುವೆ ಸಮಾನತೆ ಇರಬೇಕೆಂದು ಉಗ್ರವಾಗಿ ಪ್ರತಿಪಾದಿಸಿದವರು ಅಂಬೇಡ್ಕರ್ ಇಂತಹ ಅಸ್ಪೃಶ್ಯತೆಯ (ವಿರುದ್ಧ ಹೋರಾಡಿ) ಕೊಳಕು ಆಚರಣೆಯನ್ನು, ಕಾರಂತರು ಚೋಮನ ಮಗ ನೀಲ ನೀರಿನಲ್ಲಿ ಮುಳುಗಿ ಸತ್ತಾಗ ಅವನಿಂದ 'ಹೊಲೆಯನ ಬಾಳಿನ ಹುಣ್ಣು' ಎಂತಹದು ಎಂಬುವುದರ ಅರಿವನ್ನು ಮೂಡಿಸುವುದರ ಮೂಲಕ ಅಸ್ಪೃಶ್ಯತೆಯ ಆಚರಣೆ ಸಲ್ಲದೆಂಬುವುದನ್ನು ಕಾರಂತರು ಪ್ರತಿಪಾದಿಸುತ್ತಾರೆ.

ವಸಾಹತುಶಾಹಿಯ ಶೋಷಣೆಯನ್ನು ಕಣ್ಣಾರೆ ಕಂಡ ಕಾರಂತರು ಅದರ ಪ್ರಭಾವವನ್ನು ತಮ್ಮ ಕಾದಂಬರಿಯಲ್ಲಿ ತಂದಿದ್ದಾರೆ. ಚೋಮ ಮಿಂಗೇಲ ಸಾಹೇಬರಿಂದ ಪಡೆದ ೪-೫ ರೂಪಾಯಿ ಸಾಲ ಈಗ ೨೦ ರೂಪಾಯಿ ಆಗಿದೆ ಅದನ್ನು ತೀರಿಸುವಂತೆ ಅವನ ಕಡೆಯ ಮನ್ವೇಲ ತಾಕಿತು ಮಾಡಿದಾಗ, ಅವರು ಕೂಲಿಕಾರರನ್ನು ಹೇಗೆ ಶೋಷಣೆಗೆ ಗುರಿಪಡಿಸುತ್ತಿದ್ದರೆಂಬುವುದರ ಅರಿವಾಗುತ್ತದೆ. ಒಮ್ಮೆ ಸಾಲ ಮಾಡಿ ಕಾಫೀ ತೋಟಕ್ಕೆ ಕೂಲಿಯಾಗಿ ಹೋದ ಯಾರು ಸಾಲ ತೀರಿಸಿ ವಾಪಸಾದ ಮಾತಿಲ್ಲ. ಈ ರೀತಿಯಾಗಿತ್ತು. ಆ ಕ್ರಿಶ್ಚಿಯನ್ ಸಾಹೇಬರ ವ್ಯವಹಾರಿಕ ಜಾಣ್ಮೆ. ಇದನ್ನು ಕಾರಂತರು

---

೧. ಡಾ। ಶಿವರಾಮ ಕಾರಂತ – ಚೋಮನ ದುಡಿ, ಮುನ್ನುಡಿ

೨. ರಾಗೌ – ಪಕ್ಷಿ ಸಂಪದ – ಪು.ಸ. ೧೧೫

ಕಾದಂಬರಿಯಲ್ಲಿ ನೈಜವಾಗಿ ಚಿತ್ರಿಸಿದ್ದಾರೆ.

ಸಮತಾವಾದದ ಮೂಲ ಚಿತ್ರಣವೆಂದರೆ ಕೂಲಿಕಾರ, ಕಾರ್ಮಿಕ ಮತ್ತು ರೈತಾಪಿ ಜನ, ಈ ಮೂವರು ದುಡಿದು ಜೀವನ ಸಾಗಿಸುವವರು. ಇವರ ಜೀವನವನ್ನೊಳಗೊಂಡು ರೂಪಿತವಾಗಿರುವುದು ಸಮತಾವಾದಿ ಧೋರಣೆ, ಕಮ್ಯೂನಿಷ್ಟದ ಮುಖ್ಯ ಧೋರಣೆ ಸಮುದಾಯ ಸ್ವಾಮ್ಯವನ್ನು ಕುರಿತದ್ದು. ಈ ಸಮುದಾಯ ಸ್ವಾಮ್ಯದ ಆಳ್ವಿಕೆ ಬಂದರೆ ಚೋಮನಂತಹವರಿಗೆ ಭೂಮಿ ಸಿಗುತ್ತದೆ. ಆದರೆ ಏಕಸ್ವಾಮ್ಯ ಇದ್ದಾಗ ಚೋಮನಂತಹವರು ಬಾಳಲು ಸಾಧ್ಯವಿಲ್ಲ. ಆದ್ದರಿಂದ ಕಮ್ಯೂನಿಷ್ಟ್ ಧೋರಣೆಯು ಈ ಕೃತಿ ರಚನೆಯ ಹಿನ್ನೆಲೆಯಲ್ಲಿ ಕೆಲಸಮಾಡಿದೆ. ಈ ಕಾದಂಬರಿಯಲ್ಲಿ ಕಾರ್ಮಿಕ, ಕೂಲಿಕಾರ ಮತ್ತು ರೈತಾಪಿ ಜನರ ವಿಚಾರಗಳು ಮತ್ತು ಜೀವನ ವಿಧಾನಗಳು ಮುಖ್ಯವಾಗಿ ಚಿತ್ರಿತವಾಗಿರುವುದರಿಂದ ಕಮ್ಯೂನಿಷ್ಟ್ ಧೋರಣೆ ರಚನಾತ್ಮಕ ಮತ್ತು ಗುಣಾತ್ಮಕ ರೀತಿಯಲ್ಲಿ ಕೆಲಸ ಮಾಡಿದೆ.

"ಸಾಹಿತ್ಯದ ಜನಪ್ರಿಯ ಪ್ರಕಾರವಾದ ಕಾದಂಬರಿಯನ್ನು ತಮ್ಮ ಅಭಿವ್ಯಕ್ತಿಯ ಮುಖ್ಯ ಮಾಧ್ಯಮವಾಗಿ ಮಾಡಿಕೊಂಡ ಕಾರಂತರು 'ಚೋಮನ ದುಡಿ'ಯಲ್ಲಿ ಹಿಡಿದದ್ದು ವಾಸ್ತವವಾದಿ ಮಾರ್ಗವನ್ನು".[೧] ಕಾರಂತರು ದಕ್ಷಿಣ ಕನ್ನಡ ಜಿಲ್ಲೆಯ ಬಡ ಗೇಣಿದಾರರ ಬವಣೆಯ ಬದುಕನ್ನು ಕಂಡಿದ್ದ ಪ್ರತ್ಯಕ್ಷ ಅನುಭವ ಅವರನ್ನು ಬರಹಕ್ಕೆ ಪ್ರಚೋದಿಸಿತು. ಚೋಮ ಆ ಕಾಲದ ದಲಿತ. ಅವನನ್ನು ರೂಪಕವನ್ನಾಗಿಸಿ ಸಾಮಾಜಿಕ ಪರಿವರ್ತನೆಯ ಹಂಬಲವನಿಟ್ಟು ಕೊಂಡು ತಮ್ಮ ವಿಚಾರಗಳನ್ನು ಹೃದಯ ಸ್ಪರ್ಶಿಯಾದ ಕತೆ ಮಾಡಿ ಬರೆದರು. ಚೋಮನು ಸಾಮಾಜಿಕವಾಗಿ, ಆರ್ಥಿಕವಾಗಿ ಅನುಭವಿಸಿದ ಅವಮಾನ ಮತ್ತು ದೈನ್ಯದಿಂದ ಮುಕ್ತಗೊಳಿಸಲು ನಿಂದನೆಯಿಂದ ದೂರವಿರಿಸಲು ಏಕೆ ಆಗುತ್ತಿಲ್ಲ ಎಂಬ ಅಸಹಾಯಕತೆ ಮತ್ತು ನೋವನ್ನು ಕಾರಂತರು ಹೃದಯ ಸ್ಪರ್ಶಿಯಾಗಿ ನಿರೂಪಿಸಿದ್ದಾರೆ. ಈ ಕಾದಂಬರಿಯಲ್ಲಿ ಬಿಂಬಿತವಾಗಿರುವ ವಸಾಹತುಶಾಹಿ ಎಂಬುವುದು ಬ್ರಿಟಿಷರು ಭಾರತಕ್ಕೆ ಬಂದಾಗ ಯೂರೋಪಿನ ಜನ ಅಮೇರಿಕೆಯಲ್ಲಿ ನೆಲೆಸಿ ಬಿಳಿಯರನ್ನು ಕಟ್ಟಿಕೊಂಡು ರಾಜ್ಯವನ್ನು ಕಟ್ಟಿ ಮೂಲನಿವಾಸಿಗರನ್ನು ಬಲಿ ಹಾಕಿದಾಗ ಅಲ್ಲಿಯ ವಸಾಹತುಶಾಹಿ ಪ್ರಾರಂಭವಾಗುತ್ತದೆ. ಆದ್ದರಿಂದ ವಸಾಹತುಶಾಹಿ ಎಂಬುವುದು ಆಳುವವರ ಭಾಷೆ ಮತ್ತು ಧರ್ಮವನ್ನು ಪ್ರಸಾರ ಮಾಡುವ ಮೂಲಕ

---

೧. ಡಾ. ಶಾಮಸುಂದರ ಬಿದರ ಕುಂದಿ – ಶಿವರಾಮ ಕಾರಂತ: ವಿಮರ್ಶಾತ್ಮಕ ಪ್ರತಿಕ್ರಿಯೆ
ಶಿವರಾಮ ಕಾರಾಂತ: ಸಾಂಸ್ಕೃತಿಕ ಅನುಸಂಧಾನ.
ಸಂಪಾದಕ: ಗುರುಲಿಂಗ ಕಾಪಸೆ ಪು.ಸಂ: ೧೧೧

ನಮ್ಮನ್ನು ಶೋಷಣೆ ಮಾಡುವ ಪ್ರಯತ್ನ ಮಾಡಿದೆ. ಕ್ರಿಶ್ಚಿಯನ್ ಮತಾಂತರ ಎಂಬುವುದು ಇಲ್ಲಿನ ವಸಾಹತುಶಾಹಿಯಾದರೆ, ಸಂಕಪಯ್ಯ ಜಮೀನ್ದಾರ ಮತ್ತು ಯಜಮಾನ್ಯ ಅಥವಾ ಯಜಮಾನ ಸಂಸ್ಕೃತಿಯ ಪ್ರತೀಕವಾಗಿ ಕಂಡುಬರುತ್ತಾನೆ. ಚೋಮ ಇಂತಹ ವ್ಯವಸ್ಥೆಯನ್ನು ದಾಟುವ ಪ್ರಯತ್ನ ಮಾಡುತ್ತಾನೆ. ಈ ಹಿನ್ನೆಲೆಯಲ್ಲಿ ಚೋಮನ ಸಂಸಾರ ಒಂದು ಕಡೆ ಯಜಮಾನ್ಯದ ಕಪಿಮುಷ್ಠಿಗೆ ಮತ್ತೊಂದು ಕಡೆ ವಸಾಹತುಷಾಹಿ ಸಂಸ್ಕೃತಿಯ ಸಂಕೋಲೆಗೆ ಒಳಗಾಗಿರುವುದು ಕಾದಂಬರಿಯಲ್ಲಿ ಕಂಡುಬರುತ್ತವೆ.

ಭಾರತದ ಅಂತಾರಾಷ್ಟ್ರೀಯ ಖ್ಯಾತ ಲೇಖಕರಾದ ಮುಲ್ಕ್‌ರಾಜ್ ಆನಂದರ ಅಸ್ಪೃಶ್ಯ' (Untouchable) ಕಾದಂಬರಿ ಕಾರಂತರ ಚೋಮನ ದುಡಿ ಕಾದಂಬರಿಯ ಮೇಲೆ ಪ್ರಭಾವ ಬೀರಿದೆ. "ಆನಂದರ ಅಸ್ಪೃಶ್ಯ ಹಾಗೂ ಕಾರಂತರ ಚೋಮನ ದುಡಿ ಕಾದಂಬರಿಗಳು ಈ ಶತಮಾನದ ಮೂರನೆಯ ದಶಕದ ಕೃತಿಗಳು. ಪರಸ್ಪರ ಪ್ರಭಾವದ ಯಾವ ಸೂಚನೆಗಳು ಸಿಗುವುದಿಲ್ಲ ಎಂದರೂ ಅವುಗಳಲ್ಲಿ ಗಮನಾರ್ಹ ಹೋಲಿಕೆಗಳಿವೆ"[೧]

ಕಥನದ ರೀತಿಯಲ್ಲಿ ಸಾಂಪ್ರದಾಯಿಕವಾದ ಜಾತಿಬದ್ಧ ಸಮಾಜದ ವಿಮರ್ಶೆ ಮಾಡುವುದಕ್ಕೆ ಒಬ್ಬ ಅಸ್ಪೃಶ್ಯನ ದೃಷ್ಟಿಕೋನವನ್ನು ಆರಿಸಿಕೊಂಡಿರುವುದರಿಂದ ಅದರ ವಸ್ತುವನ್ನು ನೇರವಾಗಿ ಗ್ರಹಿಸುವುದು, ಈ ಇಬ್ಬರೂ ಲೇಖಕರಿಗೂ ಸಾಧ್ಯವಾಗಿದೆ. ಆದರೆ ಈ ಕಾದಂಬರಿಗಳ ನಾಯಕರಾದ 'ಬಾಬಾ' ಮತ್ತು 'ಚೋಮ' ಕೇವಲ ದೃಷ್ಟಿಕೋನಗಳಾಗಿ ಉಳಿಯದೆ ಸಂಪೂರ್ಣವಾಗಿ ಗ್ರಹಿಸಿರುವ ವ್ಯಕ್ತಿಗಳಾಗಿರುವುದರಿಂದ ಅವರ ಚರಿತ್ರೆ, ಅವರನ್ನೊಳಗೊಂಡ ಸಮಾಜದ ಚರಿತ್ರೆಯಷ್ಟೇ ಕುತೂಹಲಕರವಾಗಿದೆ. ಈ ಕಾದಂಬರಿಗಳ ಸಾಮಾಜಿಕ ವಸ್ತುವಾದ ಅಸ್ಪೃಶ್ಯತೆಯ ರೋಗವನ್ನು ವ್ಯಕ್ತಾತ್ಮಕ ವಸ್ತುವಾದ ನಾಯಕನ ಪ್ರಕ್ರೀಯತೆಯ ಅನುಭವದಿಂದ ಬೇರ್ಪಡಿಸುವುದು ಸಾಧ್ಯವಿಲ್ಲ. ಹಾಗೇಯೇ ಜಿ.ಎಸ್.ಆಮೂರರು "ಅಸ್ಪೃಶ್ಯತೆ ಮಾರ್ಕ್ಸ್‌ವಾದದಿಂದ ಪ್ರಭಾವಿತವಾದ ವಿಮರ್ಶಾತ್ಮಕ ವಾಸ್ತವವಾದದ ಕೃತಿ. ಚೋಮನದುಡಿ ಸಮಕಾಲೀನ ಸಾಮಾಜಿಕ ಚಿಂತನೆಯಿಂದ ಪ್ರೇರಣೆ ಪಡೆದಿರಬಹುದಾದರೂ, ಸ್ಪಷ್ಟವಾದ ವಿಚಾರಧಾರೆಯನ್ನು ಅದರಲ್ಲಿ ಗುರುತಿಸಲಾಗದು"[೧] ಎಂದಿದ್ದಾರೆ.

ಚೋಮನ ದುಡಿ ಕಾದಂಬರಿ ಕಾರಂತರ ಕಾದಂಬರಿಗಳಲ್ಲೆ ಜನಪ್ರಿಯತೆಯ ಉತ್ತುಂಗಕ್ಕೇರಿದ ಕಾದಂಬರಿ ಎಂದು ಸಹೃದಯ ಓದುಗರು ಸ್ವೀಕರಿಸಿಯಾಗಿದೆ. ಇದನ್ನು ರಚನೆ ಮಾಡಿದ್ದು ೧೯೩೩ರಲ್ಲಿ.

---

೧. ಜಿ.ಎಸ್. ಆಮೂರ– ಕನ್ನಡ ಕಥನ ಸಾಹಿತ್ಯ: ಕಾದಂಬರಿ ಪು.ಸಂ:೧೦೬

ಈ ಕಾದಂಬರಿಯ ಮೊದಲ ಹಸ್ತಪ್ರತಿ ಕಾರಂತರು ರಚಿಸಿದಾಗ ಹಸುವೊಂದರ ಬಾಯಿಗೆ ಆಹಾರವಾಗಿ ನಾಶವಾದದ್ದು, ವಿಚಿತ್ರವೆನಿಸಿದರೂ ವಾಸ್ತವಿಕ ವಿದ್ಯಮಾನ. "ಕಾರಂತರು ಸ್ನೇಹಿತರ ಮನೆಯ ಜಗುಲಿಯ ಮೇಲೆ ಕುಳಿತು ಬರೆದಿದ್ದ ಈ ಕಾದಂಬರಿ ಹಸ್ತಪ್ರತಿಯನ್ನು ಅಲ್ಲೇಬಿಟ್ಟು, ಯಾವುದೋ ಕೆಲಸಕ್ಕೆ ಮನೆಯೊಳಕ್ಕೆ ಹೋದರಂತೆ ಬಂದಾಗ ಬೀದಿಯಲ್ಲಿ ಮೇಯುತ್ತಿದ್ದ ದನವೊಂದರ ಕಣ್ಣಿಗೆ ಚೋಮನದುಡಿ ಕಾದಂಬರಿಯ ಹಸ್ತಪ್ರತಿ ಹುಲ್ಲಿನಂತೆ ಕಂಡಿರಬೇಕು, ಅವರು ಮನೆಯೊಳಗೆ ತೆರಳಿ ಬಂದಾಗ ಅದು ಹಸುವಿನ ಒಡಲನ್ನು ಹೊಕ್ಕಿತ್ತು! ತಿರುಗಿ ಅವರು ಬರೆದ ಈ ಕಾದಂಬರಿ ಇಂದಿಗೂ ತನ್ನ ಆವೇಶವನ್ನು ಉಳಿಸಿಕೊಳ್ಳುವಲ್ಲಿ ಸಫಲವಾಗಿದೆ"[೧] ಎಂದು ಚೋಮನ ದುಡಿಯ ಬಗ್ಗೆ ಹೇಳುವಾಗ 'ಶ್ರೀಮತಿ ಮಾಲಿನ ಮಲ್ಯ' ನೆನಪಿಸಿ ಕೊಳ್ಳುತ್ತಾರೆ.

ಇಲ್ಲಿಯವರೆಗೆ ಕಾರಂತರ ಚೋಮನ ದುಡಿಗೆ ಸೈದ್ಧಾಂತಿಕ ಹಿನ್ನೆಲೆಯಲ್ಲಿ, ಮಾರ್ಕ್ಸ್‌ವಾದ, ಗಾಂಧೀವಾದ, ಅಂಬೇಡ್ಕರ್‌ವಾದ ಸಮಾಜವಾದಗಳ ಪ್ರಭಾವಕ್ಕೆ ಕಾದಂಬರಿ ಒಳಗಾಗಿದೆ ಎಂದು ನೋಡಿದರೆ ಇಡೀ ಕಾದಂಬರಿಯನ್ನು ಓದಿದಾಗ ಕಾರಂತರು ಕೆಳವರ್ಗದ ಚೋಮನಂತಹ ವ್ಯಕ್ತಿಯ ಪಾತ್ರ ಚಿತ್ರಣವನ್ನು ಸಮಾಜದಲ್ಲಿ ಇಷ್ಟು ಸೂಕ್ಷ್ಮವಾಗಿ ಅವಲೋಕಿಸಿ ಅದನ್ನು ಚಿತ್ರಿಸಿರುವುದು ಗಮನಾರ್ಹವಾಗಿದೆ.

ಕಾದಂಬರಿಯಲ್ಲಿ ಚೋಮನ ಪಾತ್ರ ಒಂದಲ್ಲ ಒಂದು ಪೆಟ್ಟನ್ನು ಪ್ರತಿಬಾರಿಯ ಅನುಭವಿಸುತ್ತಿರುತ್ತದೆ. ಹೆಂಡತಿಯ ಸಾವು, ಸಂಕಪಯ್ಯನಿಂದ ನಿರಾಸೆ, ಚನಿಯನ ಸಾವು, ಗುರುವನ ಅಗಲಿಕೆ, ನೀಲ ನೀರಿನಲ್ಲಿ ಮುಳಗಿ ಪ್ರಾಣಬಿಟ್ಟದ್ದು, ಅಂತಿಮವಾಗಿ ತನ್ನ ಜೀವವೇ ಆಗಿದ್ದ ಬೆಳ್ಳಿಯು ಮನ್ವೇಲನ ಜೊತೆ ಅನೈತಿಕ ವ್ಯವಹಾರ ಇಟ್ಟುಕೊಳ್ಳುವುದು ಹೀಗೆ ಕಾದಂಬರಿಯ ಉದ್ದಕ್ಕೂ ಚೋಮನಿಗೆ ಕಷ್ಟಗಳು, ಸಮಸ್ಯೆಗಳು ಇದರ ಜೊತೆಗೆ ಚೋಮ ಹುಟ್ಟುವಾಗಲೇ ಜೊತೆಗೆ ಬಂದಿತೇನೋ ಎನ್ನುವಷ್ಟು ಕುಡಿತ! ಇವೆಲ್ಲವನ್ನು ಕಾದಂಬರಿಯಲ್ಲಿ ಕಾರಂತರ ತಂದಿರುವುದು ಕೆಳವರ್ಗದವರ ಬದುಕನ್ನು ತನ್ನ ಸೂಕ್ಷ್ಮ ಗ್ರಹಣಶಕ್ತಿಯಿಂದ ಹೇಗೆ ಗ್ರಹಿಸಿದರು ಎಂಬುವುದು ಕಾದಂಬರಿಯನ್ನು ಓದಿದ ಯಾರಿಗಾದರು ಅನಿಸಲೇಬೇಕು.

ಕಾರಂತರ ಕಾದಂಬರಿಯಲ್ಲಿ ಕಾದಂಬರಿಯ ನಾಯಕ ಚೋಮ ತನಗೆ ಕಷ್ಟ ಬರಲಿ, ಸುಖ ಬರಲಿ

---

೧. ಮಾಲಿಸಿ ಮಲ್ಯ – ಶಿವರಾಮಕಾರಂತ (ಕೇಂದ್ರ ಸಾಹಿತ್ಯ ಅಕಾಡೆಮಿ ಪಡೆದ ಕನ್ನಡ ಲೇಖಕರು)
ಸಂ: ಹಾ.ಮಾ.ನಾಯಕ ಮತ್ತು ಪ್ರಧಾನ ಗುರುಪತ್ತ ಪು.ಸಂ ೩೩

ಅದನ್ನು ಅಭಿವ್ಯಕ್ತಿಸುವುದು ದುಡಿಯ ಮೂಲಕವೆ, ದುಡಿ ಕಾದಂಬರಿಯ ಅವಿಭಾಜ್ಯ ಅಂಗವೆ ಆಗಿದೆ, ಇದನ್ನು ಗಮನಿಸಿದಾಗ 'ಸಂಗೀತ ಮನುಷ್ಯನ ಒತ್ತಡವನ್ನು ನಿವಾರಿಸಲು ದಿವ್ಯೌಷಧ' ಎಂದು ಇವತ್ತು ನಾವು ಒತ್ತಡ ನಿವಾರಣೆಗೆ ಸಂಗೀತದ ಮೊರೆಹೋಗಿ ನೆಮ್ಮದಿಯನ್ನು ಕಂಡರೆ ಕಾರಂತರು ಚೋಮನ ದುಡಿಯ ಮೂಲಕ ಅದನ್ನು ಓದುಗರಿಗೆ ಬಿಟ್ಟುಕೊಡುತ್ತಾರೆ. 'ಕಾರಂತರೆ ಹೇಳುವಂತೆ "ಶಿವನ ಕೈಯಲ್ಲಿ ಡಮರು ಇದ್ದಂತೆ, ಚೋಮನ ಕೈಯ್ಯ ಈ ದುಡಿ"[೧] ಇಲ್ಲಿನ ವ್ಯಂಗ್ಯ ಎಂದರೆ ಶಿವ ತನ್ನ ತಾಂಡವಕ್ಕೆ ಕಾರಣವಾದದ್ದನ್ನು ಗೆಲ್ಲುತ್ತಾನೆ. ಚೋಮ ಅದನ್ನು ಮರೆಯಲು ದುಡಿ ಬಳಸುತ್ತಾನೆ. ದುಡಿಯಿಲ್ಲದಿದ್ದರೆ ವಾಸ್ತವ ಸ್ಥಿತಿಯ ಪರಿಚಯವಾಗಿ ತನ್ನ ಬದುಕಿಗೆ ಇರುವ ಅವಕಾಶವನ್ನು ಸುಂದರವಾಗಿ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದನೇನೋ ಎಂಬ ಆಶಯವು ವ್ಯಕ್ತವಾಗುತ್ತದೆ. ಕಾರಂತರ ಕಾದಂಬರಿಯಲ್ಲಿ ದುಡಿಯನ್ನು ಇಷ್ಟು ಸರಾಗವಾಗಿ ಬಳಸಿಕೊಂಡಿರುವುದು ಬಹುಶಃ ಅದು ಅವರ ಯಕ್ಷಗಾನದ ಪ್ರಭಾವದಿಂದ ಎಂದು ಕಾದಂಬರಿಯನ್ನು ಓದಿದಾದ ಯಾರಿಗಾದರು ಅನಿಸದೆ ಇರದು. ಯಕ್ಷಗಾನದಲ್ಲಿ ಪಾತ್ರಗಳು ಒತ್ತಡದ ನಿವಾರಣೆಗಾಗಿ ಮನಸೋ ಇಚ್ಛೇ ಕುಣಿಯುವಂತೆ ಇಲ್ಲಿ ಕಾದಂಬರಿಯಲ್ಲಿ ಚೋಮ ಯಾರು ಕೇಳಲಿ ಬಿಡಲಿ ದುಡಿಯನ್ನು ಬಾರಿಸುತ್ತಲೇ ಇರುತ್ತಾನೆ. ಅದು ನಿದ್ರೆಯಲ್ಲಿ ಎಚ್ಚರದಲ್ಲಿ ಕಷ್ಟದಲ್ಲಿ, ಸುಖದಲ್ಲಿ ಹೀಗೆ ದುಡಿ ನಿರಂತರವಾಗಿ ಮೊಳಗುತ್ತಲೇ ಇರುತ್ತದೆ. ಚೋಮನ ಪ್ರಾಣಪಕ್ಷಿ ವಿರಮಿಸಿದಾಗಲೇ ಅದಕ್ಕೆ ವಿರಾಮ.

ಚೋಮನ ದುಡಿ ಕಾದಂಬರಿ ಇಷ್ಟೆಲ್ಲಾ ಪ್ರೇರಣೆ -ಪ್ರಭಾವಗಳನ್ನು ಒಳಗೊಂಡು ಮೈ ತಳೆದಿರುವ ಒಂದು ಅದ್ಭುತ ಸಾಮಾಜಿಕ ಕೃತಿಯಾಗಿದೆ. ಈ ಕೃತಿಗೆ ಇಷ್ಟೆಲ್ಲಾ ಪ್ರೇರಣೆ ಪ್ರಭಾವವಿರುವ ಹಾಗೆಯೇ ಈ ಕೃತಿಯು ತನ್ನ ಮುಂದಿನ ಕಾಲ ಘಟ್ಟದ ಲೇಖಕರಿಗೂ, ಅವರ ಕೃತಿಗಳ ಮೇಲೂ ಪ್ರಭಾವ ಬೀರಿರುವುದನ್ನು ಕಾಣಬಹುದು. ಈ ಕಾದಂಬರಿಯಿಂದ ಪ್ರೇರಿತರಾದ ದಲಿತ ಕವಿ ಸಿದ್ದಲಿಂಗಯ್ಯನವರು "ಚೋಮನ ಮಕ್ಕಳ ಹಾಡು" ಎಂಬ ಕವನವನ್ನು ಬರೆದಿದ್ದಾರೆ. ಹಾಗೆಯೇ ಇತ್ತೀಚಿನ ದಲಿತ ಮತ್ತು ಬಂಡಾಯ ಸಾಹಿತಿಗಳಾದ ಸಿದ್ದಲಿಂಗಯ್ಯ, ದೇವಯ್ಯ ಹರವೆ, ದೇವನೂರು ಮಹದೇವ ಅವರ ಸಾಹಿತ್ಯ ರಚನೆಗೆ ಕಾದಂಬರಿ ಪ್ರೇರಣೆ ನೀಡಿರುವುದು ಮತ್ತು ಬಿ.ವಿ. ಕಾರಂತರು ಈ ಕಾದಂಬರಿಯನ್ನೆ 'ಚೋಮ' ಹೆಸರಿನಲ್ಲಿ ನಿರ್ದೇಶಿಸಿ ಸಿನಿಮಾ ಸಹ ಮಾಡಿರುವುದು,

೧. ಶಿವರಾಮಕಾರಂತ-ಚೋಮನದುಡಿ ಪು.ಸಂ ೭

‘ಚೋಮ’ ಹೆಸರಿನಲ್ಲಿ ‘ಎಸ್. ದಿವಾಕರ್’ ಅವರ ಲೇಖನ ಪ್ರಜಾವಾಣಿ ಸಾಪ್ತಾಹಿಕದಲ್ಲಿ ಪ್ರಕಟವಾಗಿದೆ. ಹೀಗೆ ಕಾರಂತರ ಚೋಮನ ದುಡಿ ಹಲವಾರು ಸಾಹಿತ್ಯ ಪ್ರಕಾರಗಳಿಗೆ ಪ್ರೇರಣೆ ಸಹ ಆಗಿರುವುದು ಈ ಮೇಲಿನ ಅಂಶಗಳಿಂದ ಗಮನಿಸಬಹುದು.

ಹೀಗೆ ಚೋಮನ ದುಡಿಯಂತಹ ಒಂದು ಉತ್ತಮ ಕಾದಂಬರಿ ರಚನೆಯಾಗಲು ಮಾರ್ಕ್ಸ್‌ವಾದ, ಕಮ್ಯೂನಿಸ್ಟ್‌ವಾದ, ಗಾಂಧೀವಾದ, ಸಮಾಜವಾದ, ವಸಾಹತುಶಾಹಿತ್ವ, ಲೇಖಕನ ಸಮಕಾಲಿನ ಸಂವೇದನೆ, ವಾಸ್ತವವಾದ ಹೀಗೆ ಇನ್ನೂ ಹಲವಾರು ಪ್ರಮುಖ ಅಂಶಗಳು ಕೃತಿಕಾರನಿಗೆ ಪ್ರೇರಣೆ ಮತ್ತು ಪ್ರಭಾವ ಬೀರಿವೆ ಎಂದು ನನ್ನ ಅಧ್ಯಯನದ ಮಟ್ಟಕ್ಕೆ ಗುರುತಿಸಲು ಸಾಧ್ಯವಾಗಿದೆ.

ಯು.ಆರ್. ಅನಂತಮೂರ್ತಿಯವರಿಂದ ೧೯೭೩ರಲ್ಲಿ ರಚಿತವಾದ ಕಾದಂಬರಿ ‘ಭಾರತೀಪುರ’. ಇದು ನವ್ಯ ಕಾಲಘಟ್ಟದ ಕೃತಿ, ನವ್ಯಕಾಲಘಟ್ಟದ ಲಕ್ಷಣಗಳಾದ ಏಕಾಂಗಿತನ, ವ್ಯಕ್ತಿಕೇಂದ್ರಿತ ನೆಲೆ, ಅಸಂಗತವಾದ, ಅಸ್ತಿತ್ವವಾದ, ಕಾಮಕೇಂದ್ರಿತ, ನಗರೀಕರಣದಿಂದ ನಾಶವಾಗುವ ಮನುಷ್ಯ ಸಂಬಂಧ, ಸಾವು, ಇವೇ ಮೊದಲಾದ ಅಂಶಗಳು ಈ ಕಾಲಘಟ್ಟದ ಕೃತಿಗಳಲ್ಲಿ ವಸ್ತುಗಳಾಗಿರುತ್ತಿದ್ದವು, ಈ ಕಾಲ ಘಟ್ಟದ ಸಾಹಿತಿಗಳು ಅನ್ಯಭಾಷೆಯ ಮುಖ್ಯವಾಗಿ ಇಂಗ್ಲೀಷ್, ಫ್ರೆಂಚ್, ಮೊದಲಾದ ಭಾಷೆಗಳ ಪ್ರೇರಣೆ ಮತ್ತು ಪ್ರಭಾವಕ್ಕೆ ಒಳಗಾಗಿರುವುದನ್ನು ಗಮನಿಸುವುದು ಈ ಕಾಲಘಟ್ಟದಲ್ಲಿ ಅವಶ್ಯ.

ಪ್ರಸ್ತುತ ಅಧ್ಯಯನದ ಕೃತಿಯಾದ ಭಾರತೀಪುರ ಕಾದಂಬರಿ ಇವನ್ನೂ ಮೀರಿ ಹಲವು ವಿಚಾರಗಳು ಈ ಕಾದಂಬರಿಯ ಮೇಲೆ ಪ್ರೇರಣೆ – ಪ್ರಭಾವ ಬೀರಿರುವುದು ಕಂಡುಬರುತ್ತದೆ. ಏಕೆಂದರೆ ಪ್ರಸ್ತುತ ಕಾದಂಬರಿಯಲ್ಲಿ ನವ್ಯಧವರ ನೆಲೆಗಟ್ಟಿನಲ್ಲೇ ನಿಂತು ಆಲೋಚಿಸದ ಅನಂತಮೂರ್ತಿಯವರು ಸಾಮಾನ್ಯ ವ್ಯಕ್ತಿಗಳ ಅಂದರೆ ದಲಿತರ ಕಡೆ ಗಮನ ಹರಿಸಿದ್ದಾರೆ. ಅನಂತಮೂರ್ತಿಯವರ ಕಾದಂಬರಿಯನ್ನು ಓದಿದಾಗ ನನ್ನ ಅರಿವಿನ ವಿಸ್ತಾರಕ್ಕೆ ದಕ್ಕಿದ ಕೆಲವು ಪ್ರೇರಣೆ ಮತ್ತು ಪ್ರಭಾವಗಳನ್ನು ಈ ಕೆಳಗಿನಂತೆ ವಿಶ್ಲೇಷಣೆ ಮಾಡಿದ್ದೇನೆ.

ಚೋಮನ ಪಾತ್ರ ಸೃಷ್ಟಿಯ ಬಗ್ಗೆ ಬರೆಯುತ್ತಾ ಮೂರ್ತಿಯವರು “ಕಾರಂತರು ಈ ಪಾತ್ರ ರಚನೆಯಲ್ಲಿ ಬಳಸುವ ಕೃತಿ ನಿರ್ಮಾಣದ ಬಗೆ– ಅಂದರೆ ಪ್ರಕಟವಾಗಬೇಕಾದ ಸತ್ಯಕ್ಕಾಗಿ ವಾಸ್ತವದ ಮೂಲಾಂಶಗಳನ್ನು ಮಾತ್ರ ಹಿಡಿದು ಉತ್ಕಟಗೊಳ್ಳುವ ಬಗೆ– ನನ್ನ ಬರವಣಿಗೆಗೆ ಮುಖ್ಯ ಪ್ರೇರಣೆ ಕೊಟ್ಟ ಕೃತಿಯಾಗಿರಬಹುದು.”[೧] ಎಂದು ಹೇಳಿರುವುದನ್ನು ಜಿ.ಎಸ್. ಆಮೂರ ಅವರು ದಾಖಲಿಸಿದ್ದಾರೆ. ಅಂದರೆ ಮೂರ್ತಿಯವರ ಬರವಣಿಗೆಗೆ ಕಾರಂತರ ಬರವಣಿಗೆ ಮಾರ್ಗತೋರಿಸಿರುವುದನ್ನು ಕಾಣಬಹುದು.

೧. ಜಿ.ಎಸ್. ಆಮೂರ – ಕನ್ನಡ ಕಥನ ಸಾಹಿತ್ಯ: ಕಾದಂಬರಿ ಪು.ಸಂ ೧೦೫

ಅನಂತಮೂರ್ತಿಯವರ ಭಾರತೀಪುರ ಕಾದಂಬರಿಗೆ ನೆಹರೂ ಯುಗದ ಮತ್ತು ಗಾಂಧೀ ಯುಗದ ಕಾಲಮಾನಗಳ ಪ್ರೇರಣೆ ಕಂಡು ಬರುತ್ತದೆ. ಕಥೆಯ ನಾಯಕ ಜಗನ್ನಾಥ ಹೇಳುವ ಮಾತುಗಳಿಂದಲೇ ಅದು ತಿಳಿಯುತ್ತದೆ. ಮಾರ್ಗರೇಟ್ ಚಂದ್ರಶೇಖರನ ಜೊತೆ ಸಂಭಾಷಣೆಯಲ್ಲಿ ತೊಡಗಿದಾಗ ಜಗನ್ನಾಥನ ನೆಹರೂ ಪರವಾದ ವಿಚಾರಗಳಿಂದ ಬೆಸತ್ತ ಚಂದ್ರಶೇಖರ್ "ಹೀಗೆ ಮಾತಾಡ್ತಾ ಇದ್ದರೆ ನೆಹರೂ ಸರ್ಕಾರದಲ್ಲಿ ಅಂಬಾಸಿಡರ್ ಆಗ್ತಾನೆ"[೧] ಎಂದು ಅಣುಕಿಸುವುದರಿಂದ ತಿಳಿಯುತ್ತದೆ

ಹಾಗೇಯೇ ಗಾಂಧೀಯುಗದ ಪ್ರೇರಣೆಯನ್ನು ಕಾಣಬಹುದು ಗಾಂಧೀಜಿಯವರ ಅಸ್ಪೃಶ್ಯತಾ ನಿವಾರಣಾ ಚಳುವಳಿ ಇಲ್ಲಿ ಪ್ರಭಾವ ಬೀರಿರುವುದು ಕಂಡುಬರುತ್ತವೆ. ಕಾದಂಬರಿಯಲ್ಲಿ ಹೊಲೆಯರು ಮತ್ತು ಬ್ರಾಹ್ಮಣರ ನಡುವಿನ ಕಂದಕವನ್ನು ತೊಡೆದು ಹಾಕಬೇಕು. ಅವರು ನಮ್ಮಂತೆಯೇ ಸಮಾಜದಲ್ಲಿ ಗೌರವಯುತವಾದ ಬಾಳನ್ನು ಬಡೆಸಬೇಕೆಂಬ ಗಾಂಧಿಯವರ ಪ್ರೇರಣೆ ಕಾದಂಬರಿಯಲ್ಲಿ ಬಿಂಬಿತವಾಗಿದೆ.

ಭಾರತೀಪುರ ಕಾದಂಬರಿ ರಚಿತವಾಗಿರುವುದು ಹೆಗ್ಗೋಡಿನಲ್ಲಿ. ಹೆಗ್ಗೋಡು ಕರ್ನಾಟಕದ ಮಲೆನಾಡಿನ ಗುಡ್ಡಗಾಡು ಪ್ರದೇಶದ ಒಂದು ಪುಟ್ಟ ಹಳ್ಳಿ. ಈ ಹಳ್ಳಿಯ ಸಣ್ಣ ವಿವರ ಕಾದಂಬರಿಯ ಕಥಾವಸ್ತುವನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಗಿದೆ. ಏಕೆಂದರೆ ದೇಶದ ಈ ಭಾಗದ ಐತಿಹಾಸಿಕ ಅನುಭವಗಳನ್ನು 'ಭಾರತೀಪುರ' ತನ್ನ ಕಥಾವಸ್ತುವನ್ನಾಗಿಸಿಕೊಂಡಿದೆ. ಅನಂತಮೂರ್ತಿಯವರು "ನಾಗರಾಜ ಓ ಆ ಮನೆಯಲ್ಲಿರುವ ಒಂದು ಫೋಟೋವನ್ನು ನೋಡಿ ನನ್ನ 'ಭಾರತೀಪುರ' ಕಾದಂಬರಿ ಹುಟ್ಟಿತು. ಅದರ ವಿಧವೆಯೊಬ್ಬರ ಪುನರ್ವಿವಾಹದ ಫೋಟೋ. ಆ ಫೋಟೋದಲ್ಲಿರುವ ವಿಧವೆ ಮಧುಮಗಳ ಮುಖದಲ್ಲಿರುವ ಆತ್ಮ ವಿಶ್ವಾಸವನ್ನು ನೀನು ನೋಡಬೇಕು! ಕೈಯಲ್ಲೊಂದು ಪುಸ್ತಕ ಹಿಡಿದುಕೊಂಡು ಹೆಮ್ಮೆಯಿಂದ ಅವಳು ಫೋಟೋಗೆ ಫೋಸ್ ಕೊಟ್ಟಿದ್ದಳು"[೨] ಎಂದು ಹೇಳಿರುವುದನ್ನು ಡಿ.ಆರ್. ನಾಗರಾಜ್ ಅವರು ಗುರುತಿಸಿದ್ದಾರೆ. ಈ ಮುಖಾಂತರ ಈ ಕಾದಂಬರಿಗೆ ಪ್ರೇರಕವಾದ ಅಂಶವನ್ನು ಅನಂತಮೂರ್ತಿಯವರೇ ತಿಳಿಸಿರುವುದು ಕಾಣಬಹುದು.

---

೧. ಯು.ಆರ್. ಅನಂತಮೂರ್ತಿ – ಭಾರತೀಪುರ, ಪು.ಸಂ ೩೦

೨. ಡಿ.ಆರ್. ನಾಗರಾಜ್–ಸಂಸ್ಕೃತಿ ಕಥನ ಸಂ. ಅಗ್ರಹಾರ ಕೃಷ್ಣಮೂರ್ತಿ

“ಭಾರತೀಪುರ ಕಾದಂಬರಿ ಹೆಚ್ಚು ಕಡಿಮೆ ‘ಆಂದ್ರೆ ಮಾಲ್ರೊ’ನ Man’s Fate ಕಾದಂಬರಿಯ ವಿನ್ಯಾಸವನ್ನು ಹೋಲುತ್ತದೆ”[೧], ಆ ಕಾದಂಬರಿಯ ಕ್ರಿಯೆ ಚೀನಾದ ೧೯೨೭ರ ಕ್ರಾಂತಿಯ ಸಂದರ್ಭದಲ್ಲಿ ಆ ಕಾದಂಬರಿಯ ನಾಯಕ kyo ತನ್ನ ವ್ಯಕ್ತಿಗತ ವಿಷಯ ಮತ್ತು ತಾನು ಆಯ್ಕೆ ಮಾಡಿಕೊಂಡ ಕ್ರಾಂತಿ ಎರಡನ್ನು ಸೂಕ್ಷ್ಮವಾಗಿ ಕಾಣಬಲ್ಲನು. ಒಂದರ್ಥದಲ್ಲಿ kyo ದುರಂತ ನಾಯಕನಂತೆ ಕಂಡುಬರುತ್ತಾನೆ. ಬಂಡಾಯದ ಪರಿಣಾಮದಿಂದ ಬರುವ ಸಾವು ವಿರೋಚಿತವಾದದ್ದು; ಏಕೆಂದರೆ ಬಂಡಾಯ ಮಾತ್ರ ಮನುಷ್ಯರನ್ನು ವ್ಯಕ್ತಿಗಳನ್ನಾಗಿ ಮತ್ತು ಒಂದು ಸಮುದಾಯವಾಗಿ ಬದುಕಲು ಸಾಧ್ಯಮಾಡುತ್ತದೆ. ಕೊನೆಗೆ kyo ಹಾಗೆ ಸಾವನ್ನಪ್ಪುತ್ತಾನೆ. ಜೈಲಿನಲ್ಲಿ katowನಿಂದ ವಿಷಯವನ್ನು ಪಡೆದು ಅವನಿಗೆ ಅರ್ಥಪೂರ್ಣವಾಗುವುದು. ಅದು ಬದುಕಿನ ತೀವ್ರ ಆಸಕ್ತಿಯಿಂದ ಬರುವಂತ್ತಾದ್ದಾರಿಂದ,

ಜಗನ್ನಾಥನಿಗೆ ಹೊಲೆಯರನ್ನು ದೇವಸ್ಥಾನ ಪ್ರವೇಶ ಮಾಡುವುದಕ್ಕಿಂತ ಸ್ವಲ್ಪ ಮುಂಚೆ ಮಾರ್ಗರೇಟ್‌ಳಿಂದ, ಅವಳ ಮತ್ತು ಚಂದ್ರುನ ಸಂಬಂಧ ತಿಳಿಸುವ ಪತ್ರ ಯಾರಿಂದಲೋ ಬಂದ ತಾನು ತನ್ನ ಅಪ್ಪನಿಂದ ಹುಟ್ಟಿದವನಲ್ಲ ಎನ್ನುವ ಪತ್ರ. ಅದಕ್ಕೆ ಜಗನ್ನಾಥ ತೋರಿಸುವ ಪ್ರತಿಕ್ರಿಯೆ- ಇವಕ್ಕೂ ಕಾರ್ಮಿಕರ ಬಂಡಾಯದ ದಿನ kyoನಿಗೆ ಅವನ ಹೆಂಡತಿ ಇನ್ನೊಬ್ಬನೊಂದಿಗೆ ಮಲಗಿದ ವಿಷಯ ತಿಳಿದಾಗ ಅವನು ತೋರಿಸುವ ಪ್ರತಿಕ್ರಿಯೆಗೂ ಸಾಮ್ಯ ಇದೆ. Kyo ಅದಕ್ಕೆ ಪ್ರಾಮುಖ್ಯತೆ ನೀಡುವಂತವನಲ್ಲ, ಎನ್ನುವಂತೆ ನಡೆದುಕೊಂಡರು ಮಾನಸಿಕವಾಗಿ ವ್ಯದಿತನಾಗುತ್ತಾನೆ. ಹಾಗೆ ಜಗನ್ನಾಥ ಕೂಡ, ಭಾರತೀಪುರ ಕಾದಂಬರಿಯ ಉದ್ದಕ್ಕೂ ಅಸ್ಥಿತ್ವವಾದ ಛಾಯೆ ದಟ್ಟ ವಾಗಿರುವುದನ್ನು ಕಾಣಬಹುದು. ಕಥೆಯನಾಯಕ ಜಗನ್ನಾಥ ಮಾರ್ಗರೇಟ್‌ಳಿಗೆ ಬರೆಯುವ ಪತ್ರದಲ್ಲಿ “ಇಲ್ಲಿಯವರೆಗೂ ಕನ್ನಡಿಯೆದುರೇ ನಿಂತು ನನ್ನನ್ನು ನಾನು ರಮಿಸಿಕೊಳ್ಳುತ್ತ ಹೋದೆ, ಕನ್ನಡಿಯಿಲ್ಲದೇ ನನಗೆ ನಾನು ನಿಜವಾಗಿರಲಾರೆ....ನನ್ನ ಎತ್ತರ, ನನ್ನ ಕ್ರಮ, ನನ್ನ ಗತ್ತು, ನನ್ನ ಭಂಗಿ,

೧. ಎಚ್. ಎಂ. ಚನ್ನಯ್ಯ–ಜಿಸೆ ಪು.ಸಂ ೧೨೬

ಎಲ್ಲ ಆಕರ್ಷಕವಾಗಿ ಕಾಣುವ ಉಪಾಯಗಳಾಯ್ತು, ಆತ್ಮ ಪರೀಕ್ಷೆಯ ಗೀಳು ಕನ್ನಡಿಯ ಮುಂದೆ ನನ್ನ ರೂಪವನ್ನು ನಿರಂತರವಾಗೆ ಸೃಷ್ಟಿಸಿದವು. ನನ್ನ ಎತ್ತರ, ನನ್ನ ಉದ್ದನೆಯ ನುಣುಪು ಕೂದಲು, ನನ್ನ ವಿಶಾಲವಾದ ಕಣ್ಣುಗಳು, ಎಲ್ಲರನ್ನೂ ಒಲಿಸಿಕೊಳ್ಳಬಲ್ಲ ನನ್ನ ಮಾತು. ತತ್ಪರವಾಗುವ ನನ್ನ ಸ್ವಭಾವ, ಎಲ್ಲ ಕೂಡಿ ನಾನು ಸುಳ್ಳಾಗುತ್ತ, ಜಳ್ಳಾಗುತ್ತ î®±³u®±î¯ S®±q®Ù œµ² °uµ".[೧] ಎಂದು ಹೇಳುತ್ತಾ ಜಗನಾಥ ತನ್ನ ಹುಡುಕಾಟವನ್ನು ಆರಂಭಿಸುತಾನೆ. "ನನ್ನನ್ನು ಉಜ್ಜಿ ಬಿಗಿದು ಜಿಡ್ಡನೆಲ್ಲ ಕರಗಿಸಿ, ಹೊತ್ತಿಸಿ, ಉರಿಸಬಲ್ಲ ಕ್ರಿಯೆಯಲ್ಲಿ ಈ ತನಕ ನಾನು ತೊಡಗಿಯೇ ಇಲ್ಲ ಮಾರ್ಗರೇಟ್" ಎಂದು ಆತ್ಮವಿಮರ್ಶೆಯನ್ನು ಜಗನ್ನಾಥ ಮಾಡಿಕೊಳ್ಳುತ್ತನೆ.

ಜಗನ್ನಾಥ ಕೇವಲ ತಾನೊಬ್ಬ ಜಮೀನ್ದಾರನ ಮಗ ಎಂದಷ್ಟೆ, ಜನ ಗುರುತಿಸುವಂತಾಗಬಾರದು. ತನ್ನ ಸ್ವತಂತ್ರವಾದ ಅಸ್ಥಿತ್ವಕ್ಕೆ ಕೃತಿಯ ತುಂಬಾ ಹೋರಾಟ ಮಾಡುವುದು ಕಾಣಿಸುತ್ತವೆ. ಜಗನ್ನಾಥನೆ ಹೇಳುತ್ತಾ "ತಾನು ಯಾವತ್ತು ಒರಿಜಿನಲ್ ಆಗಲಾರೆ, ತಾನೊಂದು ಬರಿ ನಕಲು ಪ್ರತಿ ಎನಿಸಿತ್ತು. ಆಡುವ ಮಾತು ಎಂಜಲು, ವಿಚಾರ ಎಂಜಲು ಒಟ್ಟಿನಲ್ಲಿ ಸದಾ ವೇಷಧಾರಿಯಾದ ಮಿಂಡನ ಬದುಕು ವಿಚಾರದಲ್ಲಿ ಮುಳ್ಳುಹಂದಿಯಾಗಿ ಆಚಾರದಲ್ಲಿ ಬೆಚ್ಚಗಿರುವ ಮೂಲೆ ಹುಡುಕುವ ಬೆಕ್ಕಾಗಿ ಏರುತ್ತ, ಬಾಳಿಗೇನು ಸತ್ವವಿಲ್ಲದಿದ್ದರೂ ಮೇಲಕ್ಕೇರುತ್ತ ಥತ್ ನನ್ನ, ನಾನಿದ್ದೇನೆ ಎಂಬುವುದನ್ನು ಗುರುತಿಸಿಕೊಳ್ಳಲು ಈ ಬಂಡಾಯ, ಈ ಕ್ರಾಂತಿ ಈ ಸಾಹಿತ್ಯದ ಜಾಣ ಚರ್ಚೆ, ಈ ಬಗೆ ಬಗೆಯ ಕನ್ನಡಿಗಳೊಳಗೆ ಮಾತ್ರ ಯಾವ ನಂಬಿಕೆಯು ಇಲ್ಲ. ನನ್ನ ಮಾತು ನನಗೆ ನಿಜವೆನಿಸಲು ಆಡಿಯನ್ಸ್ ಹುಡುಕುತ್ತಿರುವುದೇ ನನ್ನ ಪಾಲಿನ ಸತ್ಯ".೨ ಹೀಗೆ ಕಥೆಯ ನಾಯಕ ಪ್ರತಿಕ್ಷಣದಲ್ಲೂ ತನ್ನ ಅಸ್ಥಿತ್ವವನ್ನು ಹುಡುಕುತ್ತಿದ್ದೇನೆ.

ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಕಾದಂಬರಿಯ ದಟ್ಟವಾದ ಅಸ್ತಿತ್ವವಾದ ನೆಲೆಯಲ್ಲಿ ರಚನೆಯಾಗಿರುವುದು ಕಂಡುಬರುತ್ತದೆ. ಅಸ್ತಿತ್ವವಾದ ಮೂಲಭೂತ ಪ್ರಶ್ನೆಗಳಾದ ನಾನು ಯಾರು? ಯಾಕೆ ನಾನು ಹೀಗೆ? ಏತಕ್ಕಾಗಿ ನಾನು ಈ ಕ್ರಿಯೆ ಮಾಡುತ್ತಿದ್ದೇನೆ? ಹೀಗೆ ವ್ಯಕ್ತಿಯು ಇಡೀ ಕಾದಂಬರಿಯ ಉದ್ದಕ್ಕೂ ಇಂತದ್ದೆ ಪ್ರಶ್ನೆಗಳನ್ನು ಹಾಕಿಕೊಳ್ಳುತ್ತಾ ಅವುಗಳಿಗೆ ಉತ್ತರ ಹುಡುಕುತ್ತಿರುವುದನ್ನು ಕಾಣಬಹುದು.

---

೧. ಯು. ಆರ್. ಅನಂತಮೂರ್ತಿ–ಭಾರತೀಪುರ. ಪು.ಸಂ.೨೬

೨. ಅದೇ ಕಾದಂಬರಿ ಪು.ಸಂ. ೨೬

ಭಾರತೀಪುರ ಕಾದಂಬರಿ ರಚನೆಯಾದದ್ದು ೭೦ರ ದಶಕದಲ್ಲಿ ಆ ವೇಳೆಗಾಗಲೆ ಭಾರತ ಸ್ವಾತಂತ್ರ್ಯಗಳಿಸಿ ಎರಡು ಮೂರು ದಶಕಗಳು ಕಳೆದಿದ್ದರು ಭಾರತೀಯ ಸಾಮಾಜಿಕ ವ್ಯವಸ್ಥೆ ಮತ್ತು ಧಾರ್ಮಿಕ ವ್ಯವಸ್ಥೆಗಳು ಹೇಗೆ ಇನ್ನು ಸನಾತನ ಕಾಲದ ಗೊಡ್ಡು ಸಂಪ್ರದಾಯಕ್ಕೆ ಶರಣಾಗಿದ್ದವು ಎಂಬುದನ್ನು ಭಾರತೀಪುರ ಕಾದಂಬರಿಯಲ್ಲಿ ಅನಂತಮೂರ್ತಿಯವರು ನೈಜವಾಗಿ ಚಿತ್ರಿಸಿದ್ದಾರೆ. ಕಥೆಯ ನಾಯಕ ಜಗನ್ನಾಥನ ಮಾರ್ಗರೆಟರಿಗೆ ಪತ್ರಬರೆಯುತ್ತಾ "life has ceased to be creative here" ಮಂಜುನಾಥ ಸ್ವಾಮಿ ಈ ಜೀವನ ಕ್ರಮದ ಕ್ಯಾನ್ಸರ್, ಈ ಪೇಟೆಯೊಂದು ಅವನಿಗಾಗಿ ಬೆಳೆದ ಕ್ಯಾನ್ಸರ್",೧ " god hadmade life sterile" ಹೇಗೆ ಧಾರ್ಮಿಕ ಅಂಶಗಳು ಭಾರತೀಪುರವನ್ನು ತನ್ನ ಆಕ್ಟೋಪಸ್ ಹಿಡಿತಕ್ಕೆ ಒಳಪಡಿಸಿತು ಎಂಬುದನ್ನು ಕಾದಂಬರಿಯಲ್ಲಿ ಗಮನಿಸಬಹುದು.

ಈ ಕಾದಂಬರಿಯಲ್ಲಿ ಮಂಜುನಾಥ ಮತ್ತು ಭೂತರಾಯ ಇಬ್ಬರು ವ್ಯವಸ್ಥೆಯನ್ನು ಆಳುವ ನಿಯಂತ್ರಿಸುವ ಕೆಲಸವನ್ನು ಗುತ್ತಿಗೆ ಪಡೆದ ಧಾರ್ಮಿಕ ನಾಯಕರು ಅವರ ವಿರುದ್ಧ ಹೋದವರು ರಕ್ತ ಕಾರಿ ಸಾಯುತ್ತಾರೆ ಎಂಬ ಮಾತು ಭಾರತೀಪುರದಲ್ಲಿ ಜನನಿತ. ಇಲ್ಲಿಯ ಜನರ ನ್ಯಾಯ ತೀರ್ಮಾನ ಮಾಡುವ ಹಕ್ಕು ಭೂತರಾಯನದೇ.

"ಈ ಪ್ರಾಂತದಲ್ಲೆಲ್ಲ ಭೂತರಾಯನಿಗೆ ಹುಯ್ಲ ಕೊಡೋದಲ್ವ, ಲಾಯರ್‌ಗೆ ಪ್ರಾಕ್ಟೀಸ್ ಎಲ್ಲಿಂದಾಗಬೇಕು"೨ ಎಂದು ದೂರುವ ನಾಗರಾಜ ಜೊಯಿಸರು ಹೇಳು ಮಾತಿನಲ್ಲಿ ಇಡೀ ವ್ಯವಸ್ಥೆಯನ್ನು ಆಳುವವನು ಭೂತರಾಯ ಮತ್ತು ಮಂಜುನಾಥಸ್ವಾಮಿ ಎಂಬುವುದು ಕಾದಂಬರಿಯನ್ನು ಓದಿದ ಯಾರಿಗಾದರು ಅನಿಸದೆ ಇರದು.

ಭಾರತೀಪುರ ಕಾದಂಬರಿಯಲ್ಲಿ ಸಮಕಾಲಿನ ಸಂವೇದನೆ ಹೆಚ್ಚು ಜೀವಂತವಾಗಿ ಚಿತ್ರಿತವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೇಲ್ವರ್ಗದ ಬ್ರಾಹ್ಮಣರು ಕೆಳವರ್ಗದ ಅಸ್ಪೃಶ್ಯರನ್ನು ದುಡಿಸಿಕೊಳ್ಳುತ್ತಿದ್ದ ಅಮಾನವೀಯ ಚಿತ್ರ ಹೇಗೆ ಕಾದಂಬರಿಕಾರನ ಮೇಲೆ ಪ್ರಭಾವ ಬೀರಿದೆ ಎಂಬುದನ್ನು ಗಮನಿಸಬಹುದು. ಜಗನ್ನಾಥ ಶ್ರೀಪತಿರಾಯರ ಜೊತೆ ಚರ್ಚಿಸುತ್ತಾ ಈ ಮೇಲ್ವರ್ಗದ ಜನ ಅವರ

---

೧. ಯು. ಆರ್. ಅನಂತಮೂರ್ತಿ–ಭಾರತೀಪುರ. ಪು.ಸಂ.೮

೨. ಅದೇ ಕಾದಂಬರಿ– ಪು.ಸ. ೧೨

ಅಂಡನ್ನು ಅವರೆ ತೊಳೆದುಕೊಳ್ಳುವಂತೆ ಮೊದಲು ಒಂದು ಕಾಲುವೆಯ ವ್ಯವಸ್ಥೆಯಾಗಬೇಕು. ಕುಕ್ಕೆಗಳಲ್ಲಿ ತುಂಬಿ ಹಿತ್ತಲಿಂದ ಹಿತ್ತಲಿಗೆ ತಲೆ ಮರೆಸಿಕೊಂಡು ಬಿಸಾಡುತ್ತಾ ಬ್ರಾಹ್ಮಣರ ಮಲವನ್ನು ತಲೆಯ ಮೇಲೆ ಹೊರುವ ಪದ್ದತಿಯನ್ನು ಮೊದಲು ನಿಲ್ಲಿಸಬೇಕೆಂದು ಯೋಚಿಸುವ ಜಗನ್ನಾಥನ ಚಿಂತನೆಯಲ್ಲಿ ಮಲ ಹೊರುವ ಪದ್ದತಿ'ಯನ್ನು ಬ್ರಾಹ್ಮಣರು ಹೇಗೆ ನೀರು ಹಾಕಿ ಪೋಷಿಸಿದರೆಂಬುವುದು ಅರಿವಾಗುತ್ತದೆ.

ಕಾದಂಬರಿಯ ಪ್ರೇರಣೆಗೆ ಮತ್ತೊಂದು ಪ್ರಮುಖ ಅಂಶವನ್ನು ಇಲ್ಲಿ ಗಮನಿಸಬಹುದು ಅದೆನೆಂದರೆ ಅನಂತಮೂರ್ತಿ ಮೂಲತಃ ಮೇಲ್ವರ್ಗಕ್ಕೆ ಸೇರಿದ ಬ್ರಾಹ್ಮಣರು. ಆ ವ್ಯವಸ್ಥೆ ಒಳಗಿದ್ದೆ ವ್ಯವಸ್ಥೆಯ ವಿರುದ್ದ ಬರೆಯಲು ಕಾರಣ ಏನು ಎಂಬುವುದು ಪ್ರತಿಯೊಬ್ಬ ಓದುಗರಿಗೂ ಎದುರಾಗುವ ಸಾಮಾನ್ಯ ಪ್ರಶ್ನೆ. ಅದಕ್ಕೆ ಉತ್ತರವನ್ನು ನಾವೇ ಕಾದಂಬರಿಯನ್ನು ಓದುವಾಗ ಗುರುತಿಸಬಹುದು. ವ್ಯವಸ್ಥೆಯಲ್ಲಿ ಕೊಳೆತು ನಾರುತ್ತಿರುವ ಸಂಪ್ರದಾಯ, ಕಟ್ಟುಪಾಡುಗಳು, ಜಾತಿವ್ಯವಸ್ಥೆ ಅದನ್ನು ಮೀರುವುದು ಕಾದಂಬರಿಕಾರನಿಗೆ ಅತ್ಯಾವಶ್ಯಕ.

ವ್ಯವಸ್ಥೆಯ ಅನ್ಯಾಯಗಳನ್ನೂ ಕಣ್ಣಾರೆ ಕಂಡು ಮೂರ್ತಿಯವರು ಅದರಿಂದ ಬೇಸತ್ತು ಅದರ ವಿರುದ್ದ ಸಿಡಿದು ನಿಲ್ಲುವುದು ಅವರ ಕಾದಂಬರಿಯಲ್ಲಿ ಕಾಣುತ್ತದೆ. ತಾನು ಅದಲ್ಲ ಅದರಿಂದ ಹೊರಬಂದವನು ಎಂದು ಸಮಾಜಕ್ಕೆ ತೋರಿಸಬೇಕು. ಅದಕ್ಕಾಗಿ ಅವರು ತಮ್ಮ ಕಾದಂಬರಿಯಲ್ಲಿ ವರ್ಗಸಂಘರ್ಷದ ಚಿತ್ರಣಗಳು, ಜಾತಿವ್ಯವಸ್ಥೆಯ ವಿರುದ್ದದ ಬಂಡಾಯವನ್ನು ಚಿತ್ರಿಸುತ್ತಾರೆ.

ಅನಂತ ಮೂರ್ತಿಯವರೆ ಹೇಳುವಂತೆ "ಬ್ರಾಹ್ಮಣನಾಗಿ ಹುಟ್ಟಿಬೆಳೆದ ನನಗೆ ಬ್ರಾಹ್ಮಣರ ಮನಸ್ಸನ್ನು ನೋಯಿಸುವುದು ಅನಿವಾರ್ಯವೇ ಹೊರತು ಇಷ್ಟವಾದ ಸಂಗತಿಯಲ್ಲ. ನಾನು ಬರೆದ ಸಂಸ್ಕಾರ, ಘಟಶ್ರಾದ್ದ, 'ಭಾರತೀಪುರ' ಕಥೆಗಳು ಬ್ರಾಹ್ಮಣರನ್ನೂ ತುಂಬಾ ನೋಯಿಸಿವೆ".೧ ಯಾರೊ ಒಬ್ಬಳು ಮಹಿಳೆ ಅನಂತಮೂರ್ತಿಯವರನ್ನು ನೇರವಾಗಿ ಕೇಳಿದಳಂತೆ "ನಮ್ಮನ್ನು ಕಂಡರೆ ಈಗ ಯಾರಿಗೂ ಆಗುವುದಿಲ್ಲ. ನಮ್ಮನ್ನೆ ಯಾಕೆ ನೀವು ಹೀಗೆ ಹಾಸ್ಯ ಮಾಡಬೇಕು? „µ"Ü b¯ r 3®¡®w®±ÝŸ °Sµ œ¯ š®ã î®¼ m … u®±O E ¢ ‡ ®±±î®a®± š¯ uÂã µ?"೨ ಎಂದಾಗ ಅನಂತ ಮೂರ್ತಿಯವರೆ ತಬ್ಬಿಬ್ಬಾದರಂತೆ.

೧. ಯು. ಆರ್. ಅನಂತಮೂರ್ತಿ-ಪೂರ್ವಪರ ಪು.ಸಂ. ೯

೨. ಯು. ಆರ್. ಅನಂತಮೂರ್ತಿ-ಪೂರ್ವಪರ ಪು.ಸಂ. ೨೮೯

ಕಾದಂಬರಿಯಲ್ಲಿ ಆ ಕಾಲದ ಕಾಂಗ್ರೇಸ್‌ನಾಯಕರ ಸೋಗಲಾಡಿತನ, ಸಿನಿಕತನಗಳು ಸಹ ಕಾದಂಬರಿಯ ಪ್ರೇರಣೆಗಳಾಗಿರುವುದನ್ನು ಗಮನಿಸಬಹುದು. ಕಾದಂಬರಿಯಲ್ಲಿ ಬರುವ ಎಂ.ಎಲ್.ಎ. ಗುರಪ್ಪಗೌಡರು ಇದಕ್ಕೆ ಸ್ಪಸ್ಟ ನಿದರ್ಶನ ಕೇವಲ ಅವರು ಮತ ಗಳಿಸಿಕೊಳ್ಳುವ ಮತ ಆಕಾಂಕ್ಷಿಗಳೇ ಹೊರತು, ಸಮಾಜದ ಸಮಸ್ಯೆಗಳನ್ನು ತಲಸ್ಪರ್ಶಿಯಾದ ಸ್ಪಂದನೆ ಅವರಲಿಲ್ಲವೆಂಬುವುದನ್ನೂ ಅನಂತ ಮೂರ್ತಿಯವರು ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಅದನ್ನು ಶ್ರೀಪತಿರಾಯರ ಈ ರೀತಿ ಹೇಳುತ್ತಾರೆ "ಅಲ್ಲ ಜಗಣ್ಣ, ಗುರಪ್ಪಗೌಡ ಏನಾದರೂ ಸ್ಟೇಟ್‌ಮೆಂಟ್ ಕೊಟ್ಟಿದಾನ ನೋಡು ಖದೀಮ! ಹರಿಜನರು ದೇವಸ್ಥಾನದ ಒಳಗೆ ಬರಬಾರ್ದು ಅನ್ನಲಾರ – ಕಾಂಗ್ರೆಸ್ ಮೆನ್ ಅಲ್ವಾ? ಬರಬೇಕು ಅನ್ನಲಾರ, ಯಾಕಂದ್ರೆ ಓಟು ಸಿಗಲ್ಲ wµ² °1®± î®±qµÚ"[೧] ಎಂದು ಹೇಳಿಸುವ ಮೂಲಕ ಕಾಂಗ್ರೆಸ್ ನಾಯಕನ ಬೂಟಾಟಿಕೆಯನ್ನು ಮೂರ್ತಿ ಚಿತ್ರಿಸಿದ್ದಾರೆ.

ಒಟ್ಟಿನಲ್ಲಿ ಈ ಮೇಲಿನ ಕೆಲವು ಅಂಶಗಳು ನನ್ನ ಓದಿನ ಹರವಿಗೆ ಸಿಕ್ಕ ಕಾದಂಬರಿಗೆ ಪ್ರೇರಣೆ–ಮತ್ತು ಪ್ರಭಾವಗಳೆಂದು ಗುರುತಿಸಲು ಸಾಧ್ಯವಾಗಿದೆ.

---

೧. ಯು.ಆರ್. ಅನಂತಮೂರ್ತಿ – ಭಾರತೀಪುರ – ಪು.ಸ: ೧೧೯

೩. ಚೋಮನದುಡಿ ಮತ್ತು ಭಾರತೀಪುರದಲ್ಲಿ ಜಾತಿಸಂಘರ್ಷ

ಮನುಷ್ಯ ನಾಗರೀಕನಾದರೂ, ಸುಶಿಕ್ಷಿತನಾದರೂ ಸಹ ಜಾತಿಯ ಕಪಿಮುಷ್ಠಿಯಿಂದ ಬಿಡುಗಡೆಯನ್ನು ಪಡೆಯಲು ೨೧ನೇ ಶತಮಾನದಲ್ಲಿ ಮನುಷ್ಯನಿಗೆ ಸಾಧ್ಯವಾಗಿಲ್ಲ. ಇಂದು ಜಾತಿಯ ಆಚರಣೆ ಹಿಂದಿನಷ್ಟು ಜಟಿಲವಾಗಿಲ್ಲದಿದ್ದರೂ, ಸಹ ಅದರ ಅಸ್ತಿತ್ವ ಸಮಾಜದಲ್ಲಿ ಬೇರೂರಿದೆ. ಪ್ರಾಚೀನ ಕಾಲದಲ್ಲಿ ಸಮಾಜದ ವ್ಯವಸ್ಥೆ, ಆಳುವ ವರ್ಗ ಅದನ್ನು ಪೋಷಿಸಿ ನೀರೆರೆದರೆ ಇಂದು ಸರ್ಕಾರ ಆಯಾ ಜಾತಿಗೆ ಸೇರಿದ ಮಠ-ಮಂದಿರಗಳು ಜಾತಿಯನ್ನು ಜೀವಂತವಾಗಿ ಉಳಿಯಲು ಅಮೂಲಕ ಅವುಗಳ ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಸಾಧ್ಯವಾಗಿದೆ.

ಜಾತಿಯ ಅಸ್ತಿತ್ವ ಸಮಾಜದಲ್ಲಿ ಯಾವಾಗ ಆಗಿರಬಹುದೆಂದು ಇತಿಹಾಸವನ್ನು, ಚರಿತ್ರೆಯನ್ನು, ಅವಲೋಕಿಸಿದಾಗ ವೇದಗಳ ಆರಂಭ ಕಾಲದಲ್ಲಿ ಅಂದರೆ ಋಗ್ವೇದದ ಕಾಲದಲ್ಲಿ ಯಾವುದೇ ಜಾತಿಯ ಆಚರಣೆಯಾಗಲಿ, ಲಿಂಗ ತಾರತಮ್ಯವಾಗಲಿ ಇಲ್ಲದಿರುವುದು ಕಂಡುಬರುತ್ತವೆ. ಆದರೆ ನಂತರದ ವೇದಗಳ ವೇಳೆಗಾಗಲೇ ಜಾತಿ, ಲಿಂಗ ತಾರತಮ್ಯ ಸಮಾಜದಲ್ಲಿ ಉಗಮ ವಾಗಿದ್ದನ್ನು ಕಾಣಬಹುದು. ಹೀಗೆ ಬುದ್ಧಿವಂತನಾದ ಮನುಷ್ಯ ತನ್ನ ಅನುಕೂಲಕ್ಕೆ ತಕ್ಕಂತೆ ಧರ್ಮ ಶಾಸ್ತ್ರಗಳನ್ನು, ಇನ್ನಿತರ ಶಾಸ್ತ್ರಗ್ರಂಥಗಳನ್ನು ರಚಿಸಿಕೊಂಡು ಅದರಲ್ಲಿ ಇಂತಹ ಜಾತಿಯವರೆಲ್ಲ ಶ್ರೇಷ್ಠರು ಇಂಥವರು ಕನಿಷ್ಟರು, ಈ ಕನಿಷ್ಟರು ಶ್ರೇಷ್ಠರ ಸೇವೆಯನ್ನು ಮಾಡುತ್ತಾ ಅದರ ಅಧೀನರಾಗಿ ಇರಬೇಕೆಂದು, ಇಲ್ಲವಾದರೆ ಅವರಿಗೆ ನರಕದ ಭಯವನ್ನು, ದೈವದ ಭಯವನ್ನು ಹುಟ್ಟಿಸಿ ಕೆಳಜಾತಿಯವರಿಂದ ತಮಗೆ ಅಗತ್ಯವಾದ ಎಲ್ಲಾ ಕೆಲಸವನ್ನು ಮಾಡಿಸಿ ಕೊಳ್ಳುತ್ತಾ ಮತ್ತು ಅವರನ್ನು ಶೋಷಣೆ ಮಾಡುತ್ತಾ ತನ್ನ ಅಕ್ಟೋಪಸ್ ಹಿಡಿತದಲ್ಲೆ ಸಹಸ್ರಾರು ವರ್ಷಗಳು ಉಳಿಸಿಕೊಂಡಿರುವುದು ಇತಿಹಾಸದ ಪುಟಗಳಲ್ಲಿ ಅವಲೋಕಿಸಬಹುದು.

ಹೀಗೆ ಜಾತಿಯ ಇತಿಹಾಸವನ್ನು ಅವಲೋಕಿಸಿದಾಗ ಸ್ವಾರ್ಥವನ್ನು ತನ್ನ ಆಚರಣೆಯಲ್ಲಿ ಅಡಗಿಸಿಕೊಂಡಿರುವುದು ತಿಳಿಯುತ್ತದೆ. ಕೇವಲ ಮೇಲ್ವರ್ಗದವರ ಸ್ವಾರ್ಥಕ್ಕಾಗಿ ಉಳಿದ ಜನರ ಶೋಷಣೆ ನಿರಂತರವಾಗಿ ಸಾಗಿತ್ತು. ಶ್ರೇಣಿಕೃತ ವ್ಯವಸ್ಥೆಯ ಸಮಾಜದಲ್ಲಿ ಚಾತುರ್ವರ್ಣದ ಆಚರಣೆಯನ್ನು ತಂದು ಅವರಲ್ಲಿ ಬ್ರಾಹ್ಮಣ, ಕ್ಷತ್ರಿಯ , ವೈಶ್ಯ, ಶೂದ್ರ ಎಂದು ನಾಲ್ಕು ವರ್ಣಗಳಾಗಿ ವಿಭಾಗಿಸಿಕೊಂಡು ಬ್ರಾಹ್ಮಣ ಬ್ರಹ್ಮನ ಮುಖದಿಂದ, ಕ್ಷತ್ರಿಯ ಭುಜಗಳಿಂದಲು, ವೈಶ್ಯ ಉದರದಿಂದಲೂ ಮತ್ತು ಕೊನೆಯ

ಶೂದ್ರ ಬ್ರಹ್ಮನ ಪಾದಗಳಿಂದಲು ಜನಿಸಿದ್ದಾರೆ ಎಂದು ಕಥೆ ಕಟ್ಟಿ, ಪಾದಗಳಿಂದ ಜನಿಸಿದ ಶೂದ್ರ ಉಳಿದ ಮೂರು ಜಾತಿಯವರ ಸೇವೆಯನ್ನು ಮಾಡಿಕೊಂಡಿರಬೇಕು, ಎಂದು ಶಾಸ್ತ್ರಗಳು ಬಾಯಿಂದ ಒದರಿಸಿ ಶತಮಾನಗಳ ಕಾಲ ಶೂದ್ರ ವರ್ಗವನ್ನು ತಮ್ಮ ಚಾಕರಿ ಮಾಡಲು ಉಳಿಸಿಕೊಂಡಿರುವುದು ಇತಿಹಾಸದ ಹೀನ ಹೇಯ ಕೃತ್ಯಗಳಲ್ಲಿ ಒಂದು, ಇಷ್ಟೆಲ್ಲಾ ಕರ್ಮಠಗಳು ಕ್ರಿ.ಪೂ.ಕ್ಕೆ ಸಂಬಂಧಿಸಿದ್ದರೆ ಕ್ರಿ.ಶ.ದ ನಂತರದಲ್ಲೂ ಅದು ಮುಂದುವರೆದು ಬಂದಿರುವುದನ್ನು ಶಾಸನಗಳಲ್ಲಿ, ಕಾವ್ಯ ಕೃತಿಗಳಲ್ಲಿ ಉಲ್ಲೇಖವಾಗಿರುವುದನ್ನು ಗಮನಿಸಬಹುದು. ಕನ್ನಡದ ಆದಿಕವಿ ಪಂಪನ ಕಾಲದ ಸಾಮಾಜಿಕ ವ್ಯವಸ್ಥೆಯ ಚಿತ್ರಣವನ್ನು ಅವನ ಎರಡು ಮಹಾಕಾವ್ಯಗಳಲ್ಲಿ ನೀಡುತ್ತಾನೆ. ಅದರಲ್ಲಿ ಪಂಪಭಾರತ ಕೃತಿಯೊಳಗೆ ಬರುವ ಕರ್ಣ, ವಿಧುರ, ಏಕಲವ್ಯ, ಇವರೆಲ್ಲರ ಮೂಲಕ ಪಂಪ ಅಂದಿನ ಸಾಮಾಜಿಕ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ಕಟ್ಟಿಕೊಡುತ್ತಾನೆ. ಇವರೆಲ್ಲರು ಸಮಾಜದ ದೃಷ್ಟಿಯಲ್ಲಿ ಕೀಳು ಜಾತಿಯಲ್ಲಿ ಜನಿಸಿದವರು ಇವರಿಗೆ ನಿಜವಾದ ಸಾಮರ್ಥ್ಯ ಯೋಗ್ಯತೆ ಇದ್ದರೂ ಅವರು ವ್ಯವಸ್ಥೆಯಿಂದ, ಅವಕಾಶದಿಂದ ಹೊರದೂಡಲ್ಪಡುವುದನ್ನು ಈ ಪಾತ್ರಗಳ ಮೂಲಕ ಪಂಪ ಹೇಳಿಸುತ್ತಾನೆ, ಕರ್ಣನ ಮೂಲಕ ಪಂಪ ಹೇಳಿಸುವ,

ಕುಲಂ ಕುಲಂಮಲ್ತು ಛಲಂಕುಲಂ, ಗುಣಂಕುಲಂ,
ಅಣ್ಮುಂ ಕುಲಂ, ಅಭಿಮಾನವೊಂದೆ ಕುಲಂ [೧]

ಎಂದು ಹೇಳುವುದರ ಮೂಲಕ ಅದುವರೆಗೆ ಜಾತಿ ವ್ಯವಸ್ಥೆಯಲ್ಲಿ ಬೆಂದು ಬೆಂಡಾದ ಕೆಳಜಾತಿಯ ಪ್ರತಿನಿಧಿಯಾಗಿ ಕರ್ಣ ನಿಲ್ಲುತ್ತಾನೆ.

ನಂತರ ಬಂದ ವಚನಕಾರರು ಪಂಪನ ಸೌಮ್ಯನೆಲೆಯಿಂದ ಕೊಂಚ ಮುಂದೆ ಬಂದು ಸಾಮಾಜಿಕ ಸಮಾನತೆಗಳಿಂದ ಎಲ್ಲಾ ವಚನಕಾರರು ಶ್ರಮಿಸಿರುವುದು ಅವರ ಮಹಾಮನೆಯ ಸ್ಥಾಪನೆಯಲ್ಲಿ ಮತ್ತು ಅಂತರ್ಜಾತಿಯ ವಿವಾಹ ಮಾಡುವುದು. ದಿಟ್ಟತನದಲ್ಲಿ ಲಿಂಗತಾರತಮ್ಯವಿಲ್ಲದೆ ಎಲ್ಲರು ಒಟ್ಟಾಗಿ ಕುಳಿತು ವಚನಗಳನ್ನು ರಚಿಸಿರುವುದು ಇವೆಲ್ಲವನ್ನು ಗಮನಿಸಿದಾಗ ಬಸವಣ್ಣನೆ ಮೊದಲಾಗಿ ಎಲ್ಲಾ ವಚನಕಾರರು, ಸಹ ಸಾಮಾಜಿಕ ಸಮಾನತೆಗಾಗಿ ಹೋರಾಡಿರುವುದನ್ನು ಅವರ ವಚನಗಳ ಮೂಲಕ ಕಾಣಬಹುದು

ಸರ್ವಜ್ಞನ ಕವಿಯು ಸಹ ಜಾತಿಯತೆಯ ಆಚರಣೆಯನ್ನು ತೀವ್ರವಾಗಿ ಖಂಡಿಸಿರುವುದನ್ನು ಆತನ ತ್ರಿಪದಿಯಲ್ಲಿ

ಜಾತಿ ಹೀನನ ಮನೆಯ
ಜೋತಿ ತಾ ಹೀನವೆ ಜಾತಿ
ವಿಜಾತಿ ಎನಬೇಡ ದೇವನೊಲಿದಾತನೆ ಜಾತ ಸರ್ವಜ್ಞ

---

೧. ಪಂಪಂ – ವಿಕ್ರಮಾರ್ಜುನ ವಿಜಯಂ , ಭೀಷ್ಮ ಪರ್ವ

ಎಂದು ಹೇಳುವ ಮೂಲಕ ನಿಜವಾದದ್ದು ಜಾತಿಯಲ್ಲ ಮನುಷ್ಯನ ಯೋಗ್ಯತೆ ಎಂದು ಹೇಳುತ್ತಾರೆ.

ನಂತರದ ದಿನಗಳಲ್ಲಿ ಬಂದಂತಹ ದಾಸರು, ಕೀರ್ತನಕಾರರು ಸಹ ಜಾತಿವ್ಯವಸ್ಥೆಯನ್ನು ಖಂಡಿಸಿದ್ದಾರೆ, ಕೆಳ ಜಾತಿಯಲ್ಲಿ ಜನಿಸಿ ನೊಂದ ಕನಕದಾಸರು ಈ ರೀತಿ ಹೇಳುತ್ತಾರೆ

ಕುಲ ಕುಲ ಕುಲವೆಂದು ಹೊಡೆದಾಡದಿರಿ
ನಿಮ್ಮ ಕುಲದ ನೆಲೆಯನೆನಾದರು ಬಲ್ಲಿರಾ

ಎಂದು ಇಡೀ ವ್ಯವಸ್ಥೆಯನ್ನು ಪ್ರಶ್ನಿಸುವ ಮೂಲಕ ಕನಕದಾಸರು ಜಾತಿಯತೇಯ ಆಚರಣೆಯನ್ನು ತಿರಸ್ಕರಿಸುತ್ತಾರೆ.

ಇದುವರೆಗೂ ಮಾತನಾಡಿದ್ದೆಲ್ಲವೂ ಪ್ರಾಚೀನ ಕಾಲಕ್ಕೆ ಸಂಬಂಧಿಸಿದಂತೆ ಆದರೆ ಆರ್ವಾಚೀನ ಕಾಲದಲ್ಲಿ ಜಾತಿಯ ಆಚರಣೆ ಹೇಗಿದೆ, ಸಾಹಿತ್ಯ ಕೃತಿಗಳು ಅದರ ಬಗ್ಗೆ ಏನು ಹೇಳುತ್ತವೆ ಎಂಬುವುದನ್ನು ಗಮನಿಸಿದಾಗ ಆಧುನಿಕ ಕಾಲದ ನವೋದಯ, ಪ್ರಗತಿಶೀಲ, ನವ್ಯ, ದಲಿತ ಮತ್ತು ಬಂಡಾಯ ಸಾಹಿತ್ಯದ ವಿವಿಧ ಘಟ್ಟಗಳಲ್ಲಿಯು ಜಾತಿಯದೆ ಕಾರು–ಬಾರು, ಅದು ಆ ವ್ಯವಸ್ಥೆ ಒಳಗಿದ್ದು ಅದರಿಂದ ನೊಂದು ಬೆಸತ್ತು ಹುಟ್ಟಿದ ವ್ಯಕ್ತಿಯಿಂದ ಇರಬಹುದು, ಅಥವಾ ದೂರದಿಂದ ನಿಂತು ನೋಡಿ ಅದರಿಂದ ಪ್ರಭಾವಿತರಾದ ವ್ಯಕ್ತಿ ಇರಬಹುದು ಇಬ್ಬರು ಸಹ ಸಾಹಿತ್ಯದಲ್ಲಿ ಜಾತಿಯತೆಯ ಪ್ರಸ್ತಾಪ ಮಾಡಿರುವುದೆಲ್ಲ ಗಮನಿಸಬಹುದು.

ನವೋದಯ ಕಾಲದಲ್ಲಿ ಬಂದ ಕವಿಗಳೆಲ್ಲರೂ ಬ್ರಾಹ್ಮಣ ವರ್ಗಕ್ಕೆ ಸೇರಿದವರಾದ್ದರಿಂದ ಅವರು ಜಾತಿಯತೆ ವಿರುದ್ಧ ತಿರುಗಿದವರು ಕಡಿಮೆಯೇ, ಆಗಾಗಿ ನಾವು ಆ ಕಾಲ ಘಟ್ಟದಲ್ಲಿ ಕುವೆಂಪು ಅವರ ಬರವಣಿಗೆ ಅದರಲ್ಲಿ ಅವರ ಎರಡು ಬೃಹತ್ ಕಾದಂಬರಿಗಳಲ್ಲೂ ಈ ಜಾತಿಯತೆಯ ಚಿತ್ರಣವನ್ನು ನೈಜವಾಗಿ ಕಟ್ಟಿ ಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಕುವೆಂಪು ನಂತರದ ಕಾದಂಬರಿಕಾರ ಶಿವರಾಮ ಕಾರಂತರು ತಮ್ಮ ಕಾದಂಬರಿಗಳಲ್ಲಿ ಸಾಮಾಜಿಕ ಅನ್ಯಾಯಗಳ ವಿರುದ್ಧ ಭಾರತದಲ್ಲೆ ಮೊಟ್ಟ ಮೊದಲ ದನಿ ಎತ್ತಿದ ಕಾದಂಬರಿ ಎಂದರೆ ಚೋಮನ ದುಡಿ, ಬರೆದು ಆರು ದಶಕಗಳು ಕಳೆದರೂ ಇಂದಿಗೂ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿರುವ ಕಾದಂಬರಿ [೧] ಎಂಬ ಹೆಗ್ಗಳಿಕೆಗೆ ಪಾತ್ರವಾದ ಕಾದಂಬರಿ ಕನ್ನಡ ಸಾಹಿತ್ಯದಲ್ಲಿ ಒಂದು ರೀತಿ 'ಚೋಮ ಕಾಂಪ್ಲೇಕ್ಸ್ ಸೃಷ್ಟಿ ಮಾಡಿದ ಕಾದಂಬರಿ.

೧. ಶಿವರಾಮ ಕಾರಂತ ವಾಙ್ಮಯ ವೃತ್ತಾಂತ : ಸಂಪಾದಕಿ ಬಿ. ಮಾಲಿನಿ ಮಲ್ಯ, ಮುದ್ರಣ ೧೯೯೨.

ಇದೇ ರೀತಿ ಪಾಶ್ಚಾತ್ಯರ ವಿಚಾರಧಾರೆಯಿಂದ ಪ್ರಭಾವಿತರಾದ ನವ್ಯರು ಪಾಶ್ಚಾತ್ಯ ಶಿಕ್ಷಣ ಪಡೆದು ಭಾರತಕ್ಕೆ ಬಂದ ವಿಚಾರವಂತರು, ಆಧುನೀಕರು ಭಾರತೀಯ ಸಮಾಜದಲ್ಲಿ ಜಡ್ಡುಗಟ್ಟಿ ನಾರುತ್ತಿರುವ ಸಾಮಾಜಿಕ ಪಿಡುಗಾದ ಜಾತಿಯ ವ್ಯವಸ್ಥೆಯ ವಿರುದ್ಧ ಉಗ್ರವಾದ ಹೋರಾಟಕ್ಕೆ ಇಳಿದವರು ನವ್ಯರು. ಅದರಲ್ಲೂ ಅನಂತಮೂರ್ತಿಯವರು ಬ್ರಾಹ್ಮಣ ವರ್ಗದಲ್ಲಿ ಜನಿಸಿದರು. ಅಲ್ಲಿ ಜೀವ ವಿರೋಧಿಯಂದ ಬ್ರಾಹ್ಮಣ್ಯವನ್ನು ವಿರೋಧಿಸತೊಡಗಿದರು. ಬ್ರಾಹ್ಮಣರಲ್ಲಿ ಮಡಿ ಮೈಲಿಗೆಯ ಪರಿಕಲ್ಪನೆ, ಶ್ರಾದ್ಧ, ಮದುವೆ, ಮೊದಲಾದ ಸಂಸ್ಕಾರಗಳನ್ನು ಸ್ಪೃಶ್ಯ, ಅಸ್ಪೃಶ್ಯವನ್ನು ಧಿಕ್ಕರಿಸುವ, ಪರಂಪರೆಯನ್ನು ವಿರೋಧಿಸುವ, ಅಂತರ್ಜಾತಿ ವಿವಾಹವನ್ನು ಬೆಂಬಲಿಸುವ ಕತೆ, ಕಾದಂಬರಿಗಳನ್ನೂ ಬರೆಯತೊಡಗಿದರು. ಅಂತಹ ಅವರ ಕಾದಂಬರಿಯಲ್ಲಿ ಭಾರತೀಪುರ ಕಾದಂಬರಿ ಜಾತಿಯ ಸಂಘರ್ಷವನ್ನು ಒಳಗೊಂಡ ಪ್ರಮುಖ ಕಾದಂಬರಿ

ಇಲ್ಲಿ ಒಂದು ವಿಷಯವನ್ನು ಸ್ಪಷ್ಟಪಡಿಸಬೇಕಾಗುತ್ತದೆ. ಅದೆಂದರೆ ಜಾತಿ ಸಂಘರ್ಷ ಎಂದರೇ ಕೇವಲ ಕೆಳ ಜಾತಿಯ ಜನರು ಅನುಭವಿಸಿದ ನೋವು ಸಂಕಟ, ಅವರ ವೇದನೆಗಳೆಂದಷ್ಟೇ ಭಾವಿಸಿದರೆ ಬಹುಶಃ ನನ್ನ ವಿಷಯದ ವಿಶ್ಲೇಷಣೆ ಹಾದಿ ತಪ್ಪುತ್ತದೆ. ಆದ್ದರಿಂದ ಅದನ್ನು ಇಲ್ಲಿ ಸ್ಪಷ್ಟಪಡಿಸಬೇಕಾಗಿದೆ. ಇಲ್ಲಿ ಜಾತಿ ಎಂದರೆ ಮೇಲ್ವರ್ಗದ ಬ್ರಾಹ್ಮಣರಿಂದ ಹಿಡಿದು ಅತ್ಯಂತ ಕೆಳವರ್ಗದ ಹೊಲೆಯರವರೆಗೆ ಬರುವ ಎಲ್ಲಾ ಜಾತಿಗಳು ತಮ್ಮ ತಮ್ಮ ಅಸ್ತಿತ್ವಕ್ಕಾಗಿ, ತಮ್ಮ ಉಳಿವಿಗಾಗಿ ಮೇಲ್ಜಾತಿಯ ಅಥವಾ ಕೆಳಜಾತಿಯೊಡನೆ ಈ ಎರಡು ಕಾದಂಬರಿಯಲ್ಲಿ ಹೋರಾಟಕ್ಕೆ, ಸಂಘರ್ಷಕ್ಕೆ ಇಳಿದಿವೆ ಎಂಬುವುದಾಗಿ ವಿಶ್ಲೇಷಣೆ ಮಾಡುವುದು ನನ್ನ ನಿಬಂಧದ ವಿಷಯವಾಗಿರುವುದರಿಂದ ಅದನ್ನು ಈ ಮೇಲಿನಂತೆ ಅರ್ಥೈಸಿಕೊಳ್ಳುವುದು ಸರಿಯಾದುದೆಂದು ತಿಳಿಸುವ ಮೂಲಕ ಚೋಮನ ದುಡಿ ಮತ್ತು ಭಾರತೀಪುರ ಕಾದಂಬರಿಯಲ್ಲಿ ಹೇಗೆ ಜಾತಿ ಸಂಘರ್ಷ ಅಸ್ತಿತ್ವವನ್ನು, ತನ್ನ ಇರುವಿಕೆಯನ್ನು ಉಳಿಸಿಕೊಂಡಿದೆ ಎಂಬುವುದನ್ನು ಈ ಮುಂದಿನಂತೆ ವಿಶ್ಲೇಷಣೆ ಮಾಡಲಾಗಿದೆ,

ಮೊದಲಿಗೆ ಚೋಮನ ದುಡಿ ಕಾದಂಬರಿಯಲ್ಲಿ ಜಾತಿ ಸಂಘರ್ಷದ ವಿಷಯವನ್ನು ಸ್ವತಃ ಬ್ರಾಹ್ಮಣ ಜಾತಿಯಲ್ಲೇ ಜನಿಸಿದ ಶಿವರಾಮಕಾರಂತರು ಹೇಗೆ ಚಿತ್ರಿಸಿದ್ದಾರೆ ಎಂಬುವುದನ್ನು ಗಮನಿಸೋಣ.

ಕಾದಂಬರಿಯ ಆರಂಭವು ದಟ್ಟವಾದ ಕಾಡಿನ ನಿರ್ಜನತೆಯ ವರ್ಣನೆಯೊಂದಿಗೆ ಆರಂಭವಾಗುತ್ತದೆ. ನಿರುತ್ಸಾಹ, ಜಡತೆಯೇ ಮೈವೆತ್ತಂತೆ ಕಾಡಿನ ಚಿತ್ರಣವನ್ನು ಕಾದಂಬರಿಕಾರ ಕಟ್ಟಿ ಕೊಡುತ್ತಾನೆ.

ಕಾಡಿನ ಮೌನ ರೋಧನವನ್ನು ನುಚ್ಚುನೂರು ಮಾಡುವ ಡಮ ಢಮ್ಮ ಡಕ ಢಕ್ಕ ಎಂದು ಇಡೀ ಊರು ಅಲ್ಲ, ಊರಿನಂತಿರುವ ಕಾಡಿನಲ್ಲಿ ಮೊಳಗುವ ದುಡಿಯು ಮಿಡಿತದೊಂದಿಗೆ ಕಾದಂಬರಿ ಆರಂಭವಾಗುತ್ತದೆ.

ಕಾದಂಬರಿಕಾರ ಊರಿನ ಹೆಸರನ್ನು ಭೋಗನಹಳ್ಳಿ ಎಂದು ಇಟ್ಟಿದ್ದಾನೆ. ಭೋಗ ಎಂದರೆ ಸುಖ, ಐಷಾರಾಮಿ ಜೀವನ, ಸಂತೋಷ ಎಂಬೆಲ್ಲ ಅರ್ಥವು ಆ ಪದಕ್ಕೆ ಇರುವುದಾದರೆ ಅದು ಕೇವಲ ಮೇಲು ಜಾತಿಯ ಸಂಕಪಯ್ಯನಂತ ಜಮೀನ್ದಾರರಿಗೆ ಮಾತ್ರ ಸಲ್ಲುವಂತದ್ದು ದುಡಿಯುವ ಕೆಳವರ್ಗದ ಚೋಮನಂತವರಿಗೆ ಅದರ ಗಂಧ ಗಾಳಿಯು ಸುಳಿಯುವಂತಿರಲಿಲ್ಲ. ಎರಡು ಹೊತ್ತಿನ ತುತ್ತಿನ ಚೀಲವನ್ನು ಚೋಮ ಕಾದಂಬರಿಯ ಉದ್ದಕ್ಕೂ ಕೇವಲ ಗಂಜಿಯ ಊಟದಲ್ಲೇ ನಡೆಸುತ್ತಿರುತ್ತಾನೆ. ಚೋಮನ ಮನೆಯಲ್ಲಿ ಬಡತನವಿದ್ದರೂ ತಂದೆ ಮಕ್ಕಳ ನಡವೆ ಅನ್ಯೋನತೆ ಇದ್ದದ್ದನ್ನು ಕಾದಂಬರಿಕಾರ ಹೀಗೆ ಹೇಳುತ್ತಾನೆ. ಚೋಮನ ಕುಟುಂಬದವರಲ್ಲಿ ಒಂದು ಹೂವಿನ ಎಸಳುಗಳಲ್ಲಿನ ಅನ್ಯೋನ್ಯವಿತ್ತು. ಸತ್ತು ಹೋದ ಆ ಹೊಲತಿಯಿದ್ದರೆ ಇನಷ್ಟು ಚಂದವಿತ್ತು [೧] ಎಂದು ಹೇಳುವಾಗ ಚೋಮನ ಬಡತನದ ನಡುವೆಯು ಬದುಕುವ, ಜೀವನ ಪ್ರೀತಿಯನ್ನು ನೆನೆದಾಗ ಆಶ್ಚರ್ಯವೆನಿಸುತ್ತದೆ.

ಈ ಕಾದಂಬರಿಯಲ್ಲಿ ಜಾತಿ ಮತ್ತು ವರ್ಗ ಸಂಘರ್ಷಗಳೆರಡು ಮಿಳಿತವಾಗಿರುವುದು ಕಂಡುಬರುತ್ತದೆ. ಹೇಗೆಂದರೆ ಚೋಮ ಜಾತಿ ಸಂಘರ್ಷಕ್ಕೆ ಸಂಕೇತವಾದರೆ, ಇಲ್ಲಿನ ಸಂಕಪಯ್ಯ ವರ್ಗ ಸಂಘರ್ಷಕ್ಕೆ ಕಾರಣವಾಗಿದ್ದಾನೆ. ಆದ್ದರಿಂದ ಈ ಕೃತಿ ಜಾತಿ ಮತ್ತು ವರ್ಗ ಸಂಘರ್ಷವನ್ನು ಬಹಳ ಸೂಕ್ಷ್ಮವಾಗಿ ತನ್ನ ಕಲೆಯ ಒಡಲಲ್ಲಿ ಅಡಗಿಟ್ಟುಕೊಂಡಿದೆ. ಆದ್ದರಿಂದ ಇದು ಸಮತಾವಾದಿ ನೆಲೆಯಲ್ಲಿ ರಚಿತವಾದ ಕೃತಿ. ಇಲ್ಲಿನ ಕೂಲಿಕಾರ, ಚೋಮ ಜಮೀನ್ದಾರಿ ವ್ಯವಸ್ಥೆಯನ್ನು ಒಡೆಯಬೇಕು ಎಂದು ಯೋಚಿಸುತ್ತಿರುವುದರಿಂದ ಈ ಮಾತನ್ನು ಹೇಳಬಹುದು [೨]

ಚೋಮನ ದುಡಿ ಕಾದಂಬರಿಯಲ್ಲಿ ಚೋಮ ಕೆಳ ಜಾತಿಯ ಪ್ರತಿನಿಧಿಯಾಗಿ, ಕೆಳಜಾತಿಯ ನೋವು, ಸಂಕಟ, ವೇದನೆಗಳನ್ನು ಕಾದಂಬರಿಯ ಉದ್ದಕ್ಕೂ ಅನುಭವಿಸುತ್ತಾನೆ. ಚೋಮ

೧. ಶಿವರಾಮ ಕಾರಂತ – ಚೋಮನ ದುಡಿ, ಮರು ಮುದ್ರಣ: ೦೮ ಪು.ಸಂ –೬

೨. ರಾಗೌ – ಪಕ್ಷಿ ಸಂಪದ : ಪು.ಸಂ. ೧೨೧

ಸಂಕಪಯ್ಯನೆಂಬ ಮೇಲ್ಜಾತಿಯ ಜಮೀನ್ದಾರನ ಹತ್ತಿರ ಜೀತ ಮಾಡುವ ಒಬ್ಬ ಬಡ ಕೂಲಿಕಾರ. ಸಂಕಪಯ್ಯ ಮತ್ತು ಚೋಮರ ಮಾಲೀಕ-ಕೂಲೀಕಾರನ ಬಾಂಧವ್ಯ ಎಂಥದೆಂದರೇ ಚೋಮನ ಇಡೀ ಜೀವನವೆಲ್ಲ ಸಂಕಪಯ್ಯನ ಬಳಿಯೇ ಕಳೆಯುತ್ತಾನೆ.

ಅದನ್ನು ಕಾದಂಬರಿಕಾರ ಈ ರೀತಿ ಹೇಳುತ್ತಾನೆ ಚೋಮ ಸಂಕಪಯ್ಯನವರ ಮೂಲದ ಹೊಲೆಯ. ಮೂಲವೆಂದರೆ ಅವರ ಅನುಮತಿಯಿಲ್ಲದೆ ಇನ್ನೊಬ್ಬ ಧನಿಯರ ಆಶ್ರಯವನ್ನು ಲಾಭಕ್ಕಗಲಿ, ನಷ್ಟಕ್ಕಾಗಲಿ, ಇವನಾಗಲಿ, ಇವನ ಪರಂಪರೆಯವರಾಗಲಿ ಬಿಡುವಂತಿಲ್ಲ. ಅವರ ಧನಿಯಾದರೂ ಸರಿಯೆ ಸಾಲವಿರಲಿ, ಮೂಲವಿರಲಿ, ಚೋಮನ ಸಂತತಿಯವರನ್ನು ನಡೆಸಿಕೊಂಡು ಹೋಗಬೇಕು [೧]

ಮೇಲಿನ ಮಾತನ್ನು ವಿಶ್ಲೇಷಣೆ ಮಾಡುತ್ತಾ ಹೋದಾಗ ಹೇಗೆ ಒಂದು ಸಾಮಾಜಿಕ ವ್ಯವಸ್ಥೆಯ ಹಿಡಿತ ಅಲಿಖಿತವಾಗಿ ವ್ಯವಸ್ಥೆಯನ್ನು ಕಟ್ಟಿಹಾಕಿ ಅದನ್ನು ಮುಂದುವರೆಸಿಕೊಂಡು ಹೋಗುತ್ತಿತ್ತು ಎಂಬುವುದು ತಿಳಿಯುತ್ತದೆ.

ಚೋಮ ಸಂಕಪಯ್ಯನ ಮೂಲದ ಹೊಲೆಯೆ ಎಂಬ ಮಾತೆ ಬಹುಶಃ ಅದೆಷ್ಟು ವರ್ಷಗಳಿಂದ, ಅದೆಷ್ಟು ತಲೆಮಾರುಗಳಿಂದ ಸಂಕಪ್ಪಯ್ಯನ ಪೂರ್ವಿಕರು ಮತ್ತು ಸಂಕಪಯ್ಯ, ಚೋಮ ಮತ್ತು ಅವನ ಪೂರ್ವಿಕರನ್ನು ಆಳುತ್ತಾ ಬಂದಿರುವುದು ಅರಿವಿಗೆ ಬರುತ್ತದೆ. ಈ ಕಾರಣದಿಂದಾಗಿ ಚೋಮ ತನಗೆ ಲಾಭವಾಗಲಿ, ನಷ್ಟವಾಗಲಿ ಅದೆಲ್ಲವನ್ನು ಕೇವಲ ಸಂಕಪಯ್ಯ ಆಶ್ರಯದಲ್ಲೆ ಅನುಭವಿಸಬೇಕು, ಸಂಕಪಯ್ಯನೆ ಚೋಮನ ಪ್ರಪಂಚ ಸಂಕಪಯ್ಯನ ಬಿಟ್ಟರೆ, ಚೋಮನಿಗೆ ಪ್ರಪಂಚದಲ್ಲಿ ಇನ್ನು ಯಾರು ಆಶ್ರಯದಾತರಿಲ್ಲ. ಆಸ್ಥಿತಿಯಲ್ಲಿ ಚೋಮ ಮತ್ತು ಸಂಕಪಯ್ಯನ ಬಾಂಧವ್ಯವು ಬಲವಂತದ ಜಾತಿಯ ಕೊಳವೋ ಅದನ್ನು ಕಾದಂಬರಿಯನ್ನು ಓದುವ ನಾವೇ ನಿರ್ಧರಿಸಬೇಕು.

ಚೋಮ ಸಂಕಪಯ್ಯನ ಮೂಲದ ಹೊಲೆಯ ಎಂದು ಹೇಳಿ ಚೋಮ ಸಂಕಪಯ್ಯನ ಅನುಮತಿ ಇಲ್ಲದೆ ಅವನ ಆಶ್ರಯವನ್ನು ತ್ಯಜಿಸುವಂತಿಲ್ಲ. ಇದು ಕೇವಲ ಚೋಮನಿಗೆ ಮಾತ್ರವಲ್ಲ ಅವನ ಪರಂಪರೆಯವರು ಎಂಬ ಮಾತ್ತೊಂದು ಬರುತ್ತದೆ, ಅಂದರೆ ಚೋಮನ ನಂತರ ಆತನ ಮಕ್ಕಳು, ಮೊಮ್ಮಕ್ಕಳು ಮರಿಮಕ್ಕಳು ಹೀಗೆ ಇನ್ನು ಮುಂಬರುವ ಅದೆಷ್ಟು ಪೀಳಿಗೆಯವರಿಗೆ ಆಗಲೇ ವಿಧಿಬದ್ಧ ನಿರ್ಧಾರದಂತೆ, ನೀವು ಸಂಕಪಯ್ಯನ ಜೀತದಾಳುಗಳು, ನೀವು ಹುಟ್ಟಿರುವುದೇ ಮೇಲ್ಜಾತಿಯ

---

೧. ಅದೇ ಕಾದಂಬರಿ ಪು.ಸಂ.೬

ಸೇವೆ ಮಾಡಲು ಅದನ್ನು ಬಿಟ್ಟು ಬೇರೆ ದಾರಿಯಾಗಲಿ ಬೇರೆ ಯೋಚನೆಯಾಗಲಿ ಮಾಡುವಂತಿಲ್ಲ, ಎಂದು ಕರಾರುವಕ್ಕಾಗಿ ಹೇಳಿದಂತಿದೆ ಆ ಪರಂಪರೆ ಎನ್ನುವ ಮಾತು.

ಸಂಕಪ್ಪಯ್ಯನು ಅಷ್ಟೇ, ಸಾಲವಿರಲಿ, ಮೂಲವಿರಲಿ ಚೋಮನ ಸಂತತಿಯವರನ್ನು ನಡೆಸಿಕೊಂಡು ಹೋಗಬೇಕು, ಅಂದರೆ ಕೆಳಜಾತಿಯವರು ಏನು ಬದಲಾವಣೆ ಇಲ್ಲದೆ ಮೇಲ್ಜಾತಿಯವರ ಆಜ್ಞೆಗಳನ್ನು ಅನುಸರಿಸುತ್ತಾ, ಅವರು ಒಡೆಯರಾಗಿ ಇವರು ಜೀತದಾಳುಗಳಾಗಿ ವ್ಯವಸ್ಥೆಯನ್ನು ಹಾಗೇ ಮುಂದುವರೆಸಿಕೊಂಡು ಹೋಗಬೇಕು. ಇದರಲ್ಲಿ ಯಾವುದೇ ಕಾರಣಕ್ಕೂ ಏನು ಬದಲಾವಣೆ ಮಾಡುವಂತಿಲ್ಲ. ಎಂಬಂತೆ ಆ ಮೇಲಿನ ಮಾತು ಅರ್ಥೈಸುತ್ತದೆ.

ಇಂತಹ ಬಿಗಿ ವ್ಯವಸ್ಥೆಯ ನಡುವೆ ಬದುಕು ಸಾಗಿಸುವವನು ಚೋಮ ಅವನಿಗೆ, ಒಂದೇ ಒಂದು ಉತ್ಕಟವಾದ, ಬಲವಾದ ಹಂಬಲವಿದೆ ಅದೆಂದರೆ ನೆಲವನ್ನು ಪಡೆದು ಉಳುಮೆ ಮಾಡಿ ಬೇಸಾಯಗಾರನಾಗಬೇಕೆಂಬ ಅವನ ಜೀವನದ ಅಂತಿಮ ಗುರಿ ಸಹ ಅದೇ ಆಗಿರುತ್ತದೆ. ಅದಕ್ಕಾಗಿ ಆತ ಮೂರು ಬಾರಿ ಪ್ರಯತ್ನ ಮಾಡುತ್ತಾನೆ. ಆದರೆ ಮೂರು ಬಾರಿಯು ಅವನಿಗೆ ಸಂಕಪ್ಪಯ್ಯನವರಿಂದ ನಕಾರಾತ್ಮಕ ಉತ್ತರವೇ ದೊರೆಯುತ್ತದೆ.

೧. "ಚೋಮ ಇದುವರೆಗೆ ನಮ್ಮ ಹಿರಿಯರು ನಿಮ್ಮವರಿಗೆ ಗೇಣಿಗೆ ಗದ್ದೆ ಕೊಟ್ಟಿದ್ದಿಲ್ಲ. ಈಗ ಹಾಗೆ ಕೊಡಲಿಕ್ಕೆ ಬರುವ ಹಾಗೇ ಇಲ್ಲ [೧]
೨. ಚೋಮ ಅವಸರವೇನು? ನಾಳೆ ನಾಡಿದ್ದು ಹೇಳುತ್ತೇನೆ [೨]
೩. ಚೋಮ ನಿನಗೆ ಕೊಡಬಾರದೆಂದು ನನ್ನ ಮನಸ್ಸಿನಲ್ಲಿ ಇಲ್ಲ. ಊರಿನವರು ಮಾಡದ ಕೆಲಸಕ್ಕೆ ನಾನು ತಯಾರಿಲ್ಲ, ಇನ್ನು ಅಂಥದಾಗಬೇಕಾದರೆ ನಮ್ಮ ಅಮ್ಮ ಸಾಯಬೇಕು, ಅವಳಿರುವ ತನಕ ನೀನು ಈ ಸುದ್ದಿಗೆ ಬರಬೇಡ [೩].

ಈ ಮೇಲಿನ ಮೂರು ಸನ್ನಿವೇಶಗಳು ಚೋಮ ಬಹಳ ಆಸೆಯಿಂದಲೇ ತನ್ನ ಧಣಿ ತನಗೆ ಭೂಮಿಯನ್ನು ಕೊಡಲು ಒಪ್ಪ ಬಹುದೆಂದು ಮತ್ತೆಮತ್ತೆ ಪ್ರಯತ್ನಿಸಿ ಸೋಲನ್ನು ಅನುಭವಿಸುತ್ತಾನೆ. ಈ ಮೇಲಿನ ಮೂರು ಸನ್ನಿವೇಶಗಳನ್ನು ಗಮನಿಸಿದಾಗ ಏಕೆ ಚೋಮ ಭೂಮಿಯನ್ನು ಪಡೆಯಲು

---

೧. ಡಾ।ಶಿವರಾಮ ಕಾರಂತ, ಚೋಮನ ದುಡಿ, ಪು.ಸಂ ೨೦
೨. ಅದೇ ಕಾದಂಬರಿ ಪು.ಸಂ ೩೮
೩. ಅದೇ ಕಾದಂಬರಿ ಪು.ಸಂ. ೬೨

ಸೋಲುತ್ತಾನೆ? ಎಂದು ವಿಶ್ಲೇಷಣೆ ಮಾಡಿದಾಗ ಅದರ ಹಿಂದೆ ಕೆಲಸಮಾಡುವುದು ಜಾತಿ ಎನ್ನುವ ಪಟ್ಟಾಭದ್ರ ಹಿತಾಸಕ್ತಿ, ಕಾದಂಬರಿಕಾರ ಆರಂಭದ ಪೀಠಿಕೆಯಲ್ಲಿ ಈ ರೀತಿ ಹೇಳುತ್ತಾನೆ. ನಮ್ಮಲ್ಲಿ ಅಸ್ಪೃಶ್ಯರಾದ ಹೊಲೆಯರ ತಂಡದಲ್ಲಿ ಮೇರ, ಭೈರ, ಅಜಿಲ, ಮಾರಿ, ಎಂದು ನಾಲ್ಕಾರು ಬೇರೆ ಬೇರೆ ವಿಭಾಗಗಳಿವೆ. ಅವರಲ್ಲಿ ಸಾಗುವಳಿಯನ್ನು ಮಾಡಿಕೊಂಡಿರಲು ಸಾಧ್ಯವಿದೆ, ಆದರೆ, ತೀರ ಕೆಳಗಿನವರೆಂದು ಎಣಿಸಲ್ಪಡುವ ಮಾರಿ ಹೊಲೆಯ ರಿಗೆ ಅಷ್ಟು ಅವಕಾಶವನ್ನು ಸಮಾಜ ಕೊಡುತ್ತಿರಲಿಲ್ಲ. ಅವರ ನೆರಳಿನ ಸ್ಪರ್ಶವೂ ಕೊಡದೆನ್ನುವವರು ಇದ್ದಾರೆ, ಉಚ್ಚಿಷ್ಟವನ್ನು ತಿಂದೋ, ಸತ್ತ ಜಾನುವಾರುಗಳನ್ನು ತಿಂದೋ, ಇಲ್ಲವೇ ನಿಂದನೀಯವಾದ ಇನ್ನಾವ ವೃತ್ತಿಯಿಂದಲೋ ಅವರ ಜೀವನ ಸಾಗಬೇಕು. ನಮ್ಮ ಜಿಲ್ಲೆಯ ಉತ್ತರ ಭಾಗದಲ್ಲಿ ಈ ಜನರನ್ನು ಇಂದಿಗೂ ಕೂಲಿಗೆ ಕರೆಯುವುದಿಲ್ಲ . ಆದರೆ ದಕ್ಷಿಣ ಭಾಗದಲ್ಲಿ ಹೊಲಗೆಲಸಗಳಿಗೆನೋ ಕರೆಯುತ್ತಾರೆ. ಅಂಥ ಬಳಗದ ಜೀವಿಯು ಚೋಮ. [೧]

ಕಾದಂಬರಿಕಾರನ ಮೇಲಿನ ಮಾತನ್ನು ಕೇಳಿದಾಗ ಚೋಮನ ಬವಣೆ ಇದು, ಇಂದು ನಿನ್ನೆಯದಲ್ಲ, ತಲೆ ತಲಾಂತರಗಳಿಂದ ಅವನ ಸಂತತಿಯವರು ಕೆಳಜಾತಿಯಲ್ಲಿ ಜನಿಸಿದವರೆಂಬ ಕಾರಣಕ್ಕೆ ಮುಟ್ಟಲು ಯೋಗ್ಯರಲ್ಲದ ಮನುಷ್ಯರಾಗಿ ಬದುಕುತ್ತಿರುವುದು ಕಾದಂಬರಿಯಲ್ಲಿ ಕಂಡು ಬರುತ್ತದೆ.

ಸಂಕಪ್ಪಯ್ಯ ಹೇಳುವ, ಚೋಮ ಅವಸರವೇನು ನಾಳೆ ನಾಡಿದ್ದು ಹೇಳುತ್ತೇನೆ ಎನ್ನುವ ಮಾತು ಮೇಲ್ಜಾತಿಯ ಜನರು ಕೆಳಜಾತಿಯವರಿಗೆ ಅವರ ಕಷ್ಟಗಳಿಗೆ, ತುಡಿತಗಳಿಗೆ ಹೇಗೆ ಸ್ಪಂದಿಸುತ್ತಿದ್ದರೆಂಬುವುದು ತಿಳಿಯುತ್ತದೆ. ಚೋಮನಿಗೆ ದಣಿಗಳು ಯಾವಾಗ ತನಗೆ ಗೇಣಿ ಮಾಡಲು ಅವಕಾಶ ಕೊಡುತ್ತಾರೆ ಎಂದು ಬಕಪಕ್ಷಿಯಂತೆ ಜೀವ ಕೈಯಲ್ಲಿ ಹಿಡಿದು ಕಾಯುತ್ತಿರುತ್ತಾನೆ. ಆದರೆ ಸಂಕಪಯ್ಯನ ಉಡಾಫೆಯ ಮಾತುಗಳು ಚೋಮನ ಆಸೆಯ ಬಲೂನಿಗೆ ಸೂಜಿ ಚುಚ್ಚಿದಂತೆ ವ್ಯರ್ಥವಾಗಿಸುತ್ತದೆ. ಇಲ್ಲಿ ನಾಳೆ ನಾಡಿದ್ದು, ಎಂಬ ಪದಗಳು ವಿಶೇಷವಾಗಿ ಗವುನಿಸಬೇಕು, ನಾಳೆಗೆ ಎಂದು ಅಂತ್ಯವಿಲ್ಲ ನಾಳೆ ಎಂದಿಗೂ ಮುಗಿಯುವುದಿಲ್ಲ, ಹಾಗಾಗಿ ನಿನ್ನ ಸಮಸ್ಯೆಗೆ, ಅದಕ್ಕೆ ಅಂತಿಮ ಪರಿಹಾರವಿಲ್ಲ, ನಿನ್ನ ಬೇಸಾಯಗಾರನಾಗುವ ಕನಸು ಕನಸಾಗೀಯೇ ಉಳಿಯುತ್ತದೆ. ಎಂಬುವುದನ್ನು ಸಾಂಕೇತಿಕವಾಗಿ ಸೂಚಿಸಿದಂತಿದೆ. ಆ ಪದಗಳು, ಭವಿಷ್ಯವನ್ನು ಸೂಚಿಸುವುದರಿಂದ ಭವಿಷ್ಯದಲ್ಲಿ ನಿನ್ನವರಿಗೆ (ಜಾತಿಯವರಿಗೆ) ಸಿಕ್ಕರೂ ಸಿಗಬಹುದು, ಆದರೆ ವರ್ತಮಾನದಲ್ಲಿ ಮಾತ್ರ ಸಾಧ್ಯವಿಲ್ಲ.

೧೧. ಡಾ.ಶಿವರಾಮ ಕಾರಂತ, ಚೋಮನ ದುಡಿ, ಮುನ್ನುಡಿ ಪುಟ

ಅದನ್ನು ಸಂಕಪಯ್ಯ ತನ್ನ ತಾಯಿಯ ನೆಪ ಮಾಡಿ ಈ ರೀತಿ ಹೇಳುತ್ತಾನೆ ನಮ್ಮಮ್ಮ ಸಾಯಬೇಕು ಅವಳಿರುವ ತನಕ ನೀನು ಆ ಸುದ್ದಿಗೆ ಬರಬೇಡ [೧]. ಎಂದು ಹೇಳಿದಾಗ ಚೋಮ ಜಾತಿಯಲ್ಲಿ ಕೀಳಾದರೂ ವಿಚಾರದಲ್ಲಿ ಎಂದು ಕೆಟ್ಟದಾಗಿ, ತಾನು ಬೇಸಾಯಗಾರನಾಗಬೇಕೆಂದು ತನ್ನ ಧನಿಯರ ತಾಯಿಯು ಸಾವನ್ನೆಂದು ಆತ ಬಯಸಿದವನಲ್ಲ.

ಚೋಮನ ಎರಡನೆಯ ಮಗ ಗುರುವ. ಆತ ಚೋಮನಿಗಿಂತ ವಿಚಾರದಲ್ಲಿ ಭಿನ್ನನಾದ ವ್ಯಕ್ತಿ ಕಾಫಿ ತೋಟದ ಮಾಲೀಕ ಮಿಂಗೇಲನ ಬಳಿ ಪಡೆದಿದ್ದ ಸಾಲ ತೀರಿಸಲು ಹೋಗಿ ಅಲ್ಲಿ ಕಕ್ಕಡದ ಕ್ರೈಸ್ತ ಕುಟುಂಬದ ಮೇರಿಯನ್ನು ವಿವಾಹವಾಗುವ ಮೂಲಕ ತನ್ನ ಜಾತಿಯನ್ನು ಮೀರಿ ನಿಲ್ಲುತ್ತಾನೆ. ಗುರುವನ ಈ ಬಂಡಾಯ ಅದು ಕೇವಲ ಪ್ರೀತಿಯ ಕಾರಣದಿಂದ ಅಷ್ಟೇ ಅಲ್ಲ, ತನ್ನ ಹಿಂದಿನ ಪೂರ್ವಿಕರು ಕೆಳ ಜಾತಿಯಲ್ಲಿ ಹುಟ್ಟಿ ಅನುಭವಿಸಿದ ನೋವು ನಿಂದನೆಯಿಂದ ಹೊರಬರಬೇಕು ಎನ್ನುವ ಕಾರಣವು ಅವನಲ್ಲಿ ಇರದೆ ಇರಲಾರದು.

ಗುರುವ ಕಿರಿಸ್ತಾನ ಮೇರಿಯನ್ನು ಮದುವೆಯಾಗಿ ಹೋದ ಸಂಗತಿಯನ್ನು ಕೇಳಿದ ಚೋಮ ದುಃಖಿಸಿ ಅಳುತ್ತಾ ಕೋಪದ ಜೊತೆಗೆ ಸಿಟ್ಟಿನಿಂದ ನಮ್ಮ ಹಿರಿಯರು ಹಿಡಿದು ಬಂದ ರೀತಿ, ರಿವಾಜುಗಳನ್ನು ಬಿಟ್ಟು, ಒಬ್ಬ ಹುಡುಗಿಗಾಗಿ ಅವನು ಜಾತಿ ಬಿಡುವನಾದರೆ, ಅವನ ಮೋರೆ ನೋಡುವುದಿಲ್ಲ [೨] ವೆಂದು ಶಪಥ ಮಾಡಿದ. ಇಲ್ಲಿ ಚೋಮನಿಗೆ ತನ್ನ ಮಗ ಹುಡುಗಿಯನ್ನು ಇಷ್ಟಪಟ್ಟು ಮದುವೆಯಾದನೆಂಬ ಬೇಸರಕ್ಕಿಂತ ತನ್ನ ಜಾತಿಯನ್ನು ಬಿಟ್ಟು ಕ್ರಿರಿಸ್ತಾನ ಜಾತಿಯ ಹುಡುಗಿಯನ್ನು ಮದುವೆಯಾದದ್ದು ಸಹಿಸಲಾರದ ನೋವನ್ನು ಉಂಟುಮಾಡುತ್ತದೆ.

ಕಾದಂಬರಿ ಮುಂದುವರಿದಂತೆ ಚೋಮನಿಗೆ ತನ್ನ ಜಾತಿಯ ಕಾರಣದಿಂದ ಸಂಕಪ್ಪಯ್ಯ ಭೂಮಿ ಕೊಡಲು ನಿರಾಕರಿಸಿದಾಗ ಚೋಮನಿಗೆ ನೆನಪಾಗುವುದು ತನ್ನ ಮಗ ಗುರುವ. ಬೆಳ್ಳಿ ತನ್ನ ಅಣ್ಣ ಗುರುವ ಕಿರಿಸ್ತಾನ ಧರ್ಮಕ್ಕೆ ಮತಾಂತರಗೊಂಡು ಬೇಸಾಯ ಮಾಡುತ್ತಿದ್ದಾನಂತೆ ಎಂದು, ಸೇರೆಗಾರ ಹೇಳಿದನೆಂದು ಹೇಳಿದಾಗ, ಚೋಮ ಗದ್ದೆ ಸಾಗುವಳಿಯೇ? ಯಾರು, ನನ್ನ ಗುರುವನೆ! ಜಾತಿಗೆಟ್ಟರು ಸ್ವರ್ಗ ಸಿಕ್ಕಿತಲ್ಲ! [೩] ಎಂದು ತನ್ನ ಮಗ ಗುರುವ ಈ ಕೆಟ್ಟ ಜಾತಿ ವ್ಯವಸ್ಥೆಯನ್ನು ಮೀರಿದ್ದು ಅವಾಗ ಅವನಿಗೆ ಸರಿಕಾಣಿಸುತ್ತದೆ. ಬೆಳ್ಳಿ ಗುರುವನ ವಿಷಯವನ್ನು ಪ್ರಸ್ತಾಪ ಮಾಡುತ್ತಾ ಅವನು ತನ್ನ ಜಾತಿ ಬಿಟ್ಟರೂ ಬೇಸಾಯಗಾರನಾದ, ಅವನೊಬ್ಬನಾದರೂ ನಮ್ಮ ಕುಲದಲ್ಲಿ ಹುಟ್ಟಿದರೂ ಬೇಸಾಯದ ಋಣ ಪಡೆದ [೪] ಎಂದಾಗ ಗುರುವನ ಹೆಸರು ಕೇಳಿ ಚೋಮನಿಗೆ ಮೈ ರೋಮಾಂಚನವಾಗುತ್ತದೆ.

೧. ಡಾ.ಶಿವರಾಮ ಕಾರಂತ, ಚೋಮನ ದುಡಿ, ಪು.ಸಂ ೯೨
೨. ಅದೇ ಕಾದಂಬರಿ ಪು.ಸಂ ೫೫
೩. ಅದೇ ಕಾದಂಬರಿ ಪು.ಸಂ ೬೧
೪. ಅದೇ ಕಾದಂಬರಿ ಪು.ಸಂ ೯೨

ಚೋಮ ಮೂರು ಬಾರಿ ಪ್ರಯತ್ನಿಸಿಯು ಅವನಿಗೆ ಸಂಕಪಯ್ಯನಿಂದ ಭೂಮಿ ಸಿಗದಿದ್ದಾಗ ಅವನ ಮನಸ್ಸು ಹೊರಳುವುದು ತಾನು ಈ ಜಾತಿಯನ್ನು ಬಿಡಬೇಕೆಂಬ ಯೋಚನೆಯ ಕಡೆಗೆ.

ಕಾದಂಬರಿಯಲ್ಲಿ ಮತ್ತೊಮ್ಮೆ ತನ್ನ ಜಾತಿಯು ಕಾರಣದಿಂದಾಗಿ ತಿನ್ನುವ ಪೆಟ್ಟು ಅವಮಾನವೀಯುವಾದದ್ದು, ಚೋಮ ನೀಲ ಮತ್ತು ಕಾಳರನ್ನು ಮೀಯಲು ತೋಡಿಗೆ ಕರೆದುಕೊಂಡು ಹೋಗಿದ್ದಾಗ ನೀಲ ಆಯತಪ್ಪಿ ನೀರಿನಲ್ಲಿ ಮುಳುಗಿ ಬಿಡುತ್ತಾನೆ. ಕಾಳನಿಗೆ ಭೀತಿಯಾಗಿ ದಂಡೆಗೆ ಬಂದು ಕೂಗ ತೊಡಗಿದಾಗ ದೂರದ ಗದ್ದೆಯಲ್ಲಿದ್ದ ಚೋಮನಿಗೆ ಆ ಕೂಗು ಕೇಳಿಸಿತು. ಆತ ದಾವಿಸಿ ಬಂದ, ಬರುವಾಗ ಕಾಲು ಎಡವಿ ಬಿದ್ದು ಥಟ್ಟನೆ ಎದ್ದು ಬರಲು ಸಮಯ ಹಿಡಿಯಿತು. ಇತ್ತ ತೋಡಿನ ಮೇಲ್ಭಾಗದಲ್ಲಿದ್ದವರು ಓಡಿ ಬಂದರು, ಅದರಲ್ಲಿ ಒಬ್ಬ ಬ್ರಾಹ್ಮಣ ಯುವಕ ನೀಲನನ್ನ ಎಳೆದು ತರಲು ಮುಂದುವರಿದ, ಅವನ ಹಿರಿಯರು ಅವನನ್ನು ತಡೆದರು! ಅವನು ಹೊಲೆಯನಲ್ಲವೆ? [೧] ಎಂದು ಬೆದರಿಸಿದರು. ಚೋಮ ಇದೆಲ್ಲವನ್ನು ಕಂಡು ಸ್ವತಃ ಈಜು ಬಾರದ ಚೋಮ ಚಡಪಡಿಸಿದ, ಆದರೆ ಆ ಬ್ರಾಹ್ಮಣ ಯುವಕನು ನೀರಿಗಿಳಿದು ನೀಲನನ್ನು ಎಳೆಯುವ ವೇಳೆಗೆ ನೀಲನ ಪ್ರಾಣ ಪಕ್ಷಿ ಹಾರಿ ಹೋಗಿತ್ತು, ಚೋಮನಿಗೆ ಹೊಲೆಯನ ಬಾಳ್ವೆಯ ಹುಣ್ಣು ಎಂಥದೆಂಬುವುದು ಆಗ ಸಂಪೂರ್ಣ ಅನುಭವವಾಯಿತು.[೨]

ಈ ಘಟನೆಯ ನಂತರ ಚೋಮನಿಗೆ ತನ್ನ ಜಾತಿಯ ಬಗ್ಗೆ ಇದ್ದ ಆಸಕ್ತಿ ಕಾಳಜಿ ಗೌರವ ಕಡಿಮೆಯಾಗುತ್ತದೆ. ಅದನ್ನು ಅವನೇ ಹೇಳುತ್ತಾನೆ ತಾನು ಹೊಲೆಯನಾಗಿರುವಷ್ಟು ದಿನ ಬೇಸಾಯಗಾರನಾಗಲಾರೆ [೩] ಎಂದು ನಿರ್ಧರಿಸುತ್ತಾನೆ. ತನ್ನದು ಹೊಲೆಯರ ಕುಲ, ದೇವರಿಗೂ ಬೇಡವಾದ ಕುಲ , ಇನ್ಯಾವ ಸುಟ್ಟ ಜಾತಿಯುವನಾಗಿದ್ದರೂ ತನ್ನ ನೀಲ ಬದುಕುತ್ತಿದ್ದ [೪] ಎಂದು ತೀರ್ಮಾನಿಸಿದ.ಚೋಮ ತನ್ನ ಜೀವನದ ಕಹಿ ಘಟನೆ ಅದು ತನ್ನ ಜಾತಿಯ ಕಾರಣದಿಂದ ಘಟಿಸಿದ ಘಟನೆಗಳನ್ನು ನೆನೆದು ತಾನು ಪಾದ್ರಿಯ ಧರ್ಮಕ್ಕೆ ಮತಾಂತರಗೊಳ್ಳುವುದಾಗಿ ವಿಚಾರ ಮಾಡುತ್ತಿದ್ದೇನೆಂದು ಮನ್ವೇಲನ ಬಳಿ ತನ್ನ ಮನದ ಇಂಗಿತವನ್ನು ಹಂಚಿಕೊಳ್ಳುತ್ತಾನೆ.

ಚೋಮ ಇನ್ನು ತನ್ನ ಜಾತಿಯನ್ನು ಬಿಟ್ಟು ಕ್ರೈಸ್ತಮತಕ್ಕೆ ಮತಾಂತರಗೊಳ್ಳುತ್ತಾನೆಂದು ತಿಳಿಯುವಷ್ಟರಲ್ಲಿ ಪಂಜುರ್ಲಿ ಭೂತದ ಗುಡಿಹತ್ತಿರ ಚೋಮನಿಗೆ ಉಂಟಾದ ಮಾನಸಿಕ ತೊಳಲಾಟ, ಅವನೂ ಇಟ್ಟ ಹೆಜ್ಜೆಯಿಂದ ಹಿಂದೆ ಬರುವಂತೆ ಮಾಡುತ್ತದೆ.

---

೧. ಡಾ.ಶಿವರಾಮ ಕಾರಂತ, ಚೋಮನ ದುಡಿ, ೯೪

೨. ಅದೇ ಕಾದಂಬರಿ ಪು.ಸಂ ೯೫

೩. ಅದೇ ಕಾದಂಬರಿ ಪು.ಸಂ ೯೫

೪. ಅದೇ ಕಾದಂಬರಿ ಪು.ಸಂ ೯೫

"ತಲೆಮಾರುಗಳಿಂದ ನಂಬಿ ಬಂದಿರುವ ದೇವರನ್ನು ಮರೆತು ತಾನಿಂಥ ಉದ್ದಟತನದ ಕೆಲಸವನ್ನೂ ಮಾಡುವುದು ಸರಿಯಲ್ಲವೆನಿಸಿತು. ಪಾದ್ರಿ ಮತದವರು ಸಾಯುವುದಿಲ್ಲವೆ? ಕಷ್ಟ ಸುಖ ಒಂದಲ್ಲ ಒಂದು ರೀತಿ ಕ್ರಿಸ್ತೀಯರಿಗೂ ತಪ್ಪಿದುಂಟೆ? ತನ್ನ ಜಾತಿಯ ಭೂತವನ್ನು ಮರೆತರೆ ಉಪದ್ರವ ತಪ್ಪಿದ್ದಲ್ಲವೆಂದು ಧೈರ್ಯ ಮಾಡಿ, ಏನೇ ಇರಲಿ ಇದ್ದಂತೆ ಇದ್ದು ಅನುಭವಿಸುತ್ತೇನೆ"[೧] ಎಂದು ಹೇಳಿ ತಾನು ಜಾತಿಯನ್ನು ಬಿಡುವ, ಮತಾಂತರಗೊಳ್ಳುವ ಮಾತನ್ನು ಅಲ್ಲಿಯೇ ಬಿಟ್ಟು ಮನೆಗೆ ವಾಪಾಸ್ಸಾಗುತ್ತಾನೆ.

ಇಲ್ಲಿ ಚೋಮ ಜಾತಿಯ ಕಾರಣಕ್ಕಾಗಿ ಅನುಭವಿಸುವ ಕಷ್ಟಗಳು, ನಿರಾಸೆಗಳು ಅದನ್ನು ಬಿಡಲು ಒಪ್ಪದ ಚೋಮನ ಮನಸ್ಸು ಕಾದಂಬರಿ ಉದ್ದಕ್ಕೂ ಸಂಘರ್ಷವನ್ನು ನಡೆಸುತ್ತಲೇ ಬರುತ್ತದೆ. ಆದರೂ ಚೋಮ ಗುರುವನಂತೆ ಅರೆ ಪಕ್ವದ ವ್ಯಕ್ತಿಯಲ್ಲ ವಯೋಮಾನದಲ್ಲಿ ಪಕ್ವಗೊಂಡ ಹಿರಿಯ ಜೀವವಾದ್ದರಿಂದ ಮತಾಂತರಕ್ಕೆ ಒಪ್ಪದೆ ತನ್ನ ಜಾತಿಯಲ್ಲೆ ನೆಲೆಸಲು ಹೋರಾಟ ಮಾಡುತ್ತಾನೆ.

ಚೋಮನ ದುಡಿಯಲ್ಲಿ ಈ ವಿಧದ ಜಾತಿಯ ಘರ್ಷಣೆಯಾದರೆ, ಅನಂತಮೂರ್ತಿಯವರಿಂದ ರಚಿತವಾದ ಭಾರತೀಪುರದಲ್ಲಿ ಕಾದಂಬರಿಯಲ್ಲಿ ಅದರದ್ದೆ ಭಿನ್ನ ರೀತಿಯ ಹೋರಾಟ.

ಜಗನ್ನಾಥ ಕಾದಂಬರಿಯ ನಾಯಕ. ವಿದೇಶದಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಬಂದ ಸುಶಿಕ್ಷಿತ ವ್ಯಕ್ತಿ ಭಾರತೀಪುರದ ಜಮಿನ್ದಾರನ ಮಗ, ಪಾಶ್ಚತ್ಯ ಶಿಕ್ಷಣದ ಪ್ರಭಾವದಿಂದ ತನ್ನ ಹಳ್ಳಿಯಾದ ಭಾರತೀಪುರದಲ್ಲಿ ಹೇಗಾದರೂ ಹೊಸತನವನ್ನೂ ತರಬೇಕು, ಬದಲಾವಣೆಯನ್ನು ಮಾಡಬೇಕು, ತಾನು ಈ ಕ್ರಿಯೆಯಲ್ಲಿ ತೊಡಗಬೇಕೆಂದು ನೂರಾರು ಆದರ್ಶಗಳನ್ನು ಬೆಂಬತ್ತಿ ಬಿ.ಎ. ಮುಗಿಸಿ ಭಾರತೀಪುರಕ್ಕೆ ಬರುತ್ತಾನೆ.

ಭಾರತೀಪುರವು ಇಡೀ ದೇಶದ ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಂತೆ ಬಿಂಬಿತವಾಗಿದೆ, ಭಾರತೀಪುರದ ನಿಯಮಕ ಮಂಜುನಾಥ. ಮಂಜುನಾಥ ಬ್ರಾಹ್ಮಣರ ದೈವ, ಭೂತರಾಯ ಶೂದ್ರರ ದೈವ, ದೇವರ ವಿಂಗಡಣೆಯಲ್ಲೇ ತಾರತಮ್ಯವನ್ನು ಭಾರತೀಪುರದಲ್ಲಿ ಚಿತ್ರಿಸಲಾಗಿದೆ. ಮಂಜುನಾಥ ಮೇಲ್ಜಾತಿಗಳ ದೇವರಾದರೆ ಭೂತರಾಯ ಕೆಳಜಾತಿಗಳ ನಿಯಮಕನಾಗಿದ್ದಾನೆ, ಇಲ್ಲಿಯೂ ಮೇಲು ಕೀಳು ಇರುವುದನ್ನು ಕಾಣಬಹುದು. ಭೂತರಾಯ ಉಗ್ರದೈವ ಇವನ ದೆಸೆಯಿಂದ ಬ್ರಾಹ್ಮಣರು

೧. ಡಾ.ಶಿವರಾಮ ಕಾರಂತ, ಚೋಮನ ದುಡಿ, ೧೦೧

ಶೂದ್ರರಿಂದ ಗೇಣಿ ಪಡೆಯುತ್ತಾರೆ. ಒಂದು ವೇಳೆ ಶೂದ್ರರು ಮಂಜುನಾಥನಿಗೆ ಹೆದರದಿರಬಹುದು. ಆದರೆ ಭೂತರಾಯನಿಗಂತೂ ಹೆದರುತ್ತಾರೆ. "ಈ ಪ್ರದೇಶದ ಮೂಲ ನಿವಾಸಿಗಳಿದ್ದಾರಲ್ಲ ಮಂಡಿ ಮೇಲೆ ಪಂಚೆ ಉಡೊ ಜನ, ಕುರಿ, ಕೋಳಿ ಕೊಯ್ದು ತಿನ್ನೋ ಜನ ಅವರ ದೇವರು ಈ ಭೂತರಾಯ. ಈ ಬ್ರಾಹ್ಮಣ ಯತಿಗಳು ಈ ಭೂತರಾಯನ ಮೇಲೆ ಮಂಜನಾಥನನ್ನು ಸ್ಥಾಪಿಸಿ ಈ ಪ್ರಾಂತದ ಮೂಲ ನಿವಾಸಿಗಳು ನಮಗೆ ನೆಡೆದುಕೊಳ್ಳೊ ಹಾಗೆ ಮಾಡಿದ್ರು"[೧] ಇಂತಹ ಭೂತರಾಯ ಮತ್ತು ಮಂಜುನಾಥನ ಬಿಗಿ ಮುಷ್ಠಿಗೆ ಸಿಲುಕಿದ ಊರು ಭಾರತೀಪುರ, ಇಂತಹ ಭಾರತೀಪುರಕ್ಕೆ ಆಧುನೀಕತೆಯ ಹೊಸ ಸ್ಪರ್ಶವನ್ನು ಉಂಟುಮಾಡಲು ಜಗನ್ನಾಥ ಬರುತ್ತಾನೆ.

ಜಗನ್ನಾಥ ಕ್ರಿಯೆಯ ಮೂಲಕ ಭಾರತೀಪುರದಲ್ಲಿ ಬದಲಾವಣೆಯ ಹೊಸ ಅಲೆಯನ್ನು ಹುಟ್ಟು ಹಾಕಬೇಕೆಂದು ಹಲುಬುತ್ತಿರುತ್ತಾನೆ. ಜಗನ್ನಾಥ ಮುಖ್ಯವಾಗಿ ಭಾರತೀಪುರದಲ್ಲಿ ಶತ ಶತಮಾನಗಳಿಂದ ಮೇಲ್ವರ್ಗದವರ ಹೇಲು ಹೊತ್ತು ಸಾಗಿಸುವ ಮತ್ತು ಅವರ ಹಂಡು ತೊಳೆಯುವ ಹೇಯ ಕೃತ್ಯದಿಂದ ಹೊಲೆಯರನ್ನು ಮುಕ್ತಗೊಳಿಸಬೇಕು. ಆ ಕಾರ್ಯ ಮಾಡುವುದರ ಬಗ್ಗೆ ಅವರಲ್ಲಿ ತಿರಸ್ಕಾರವನ್ನು ಹುಟ್ಟಿಸಬೇಕು. ಈ ಕೃತ್ಯ ಮಾಡಿಸಿಕೊಳ್ಳುವಂತಹ ಬ್ರಾಹ್ಮಣರನ್ನು ಅವರು ದ್ವೇಷಿಸುವಂತಾಗಬೇಕು. ಯಾವ ವ್ಯಕ್ತಿಗೆ ರೋಷ ದ್ವೇಷ ಬರುತ್ತದೆಯೋ ಅಂತಹ ವ್ಯಕ್ತಿ ಬದಲಾವಣೆಯನ್ನು ಬಯಸುತ್ತಾನೆ. ಆ ಬದಲಾವಣೆ ಈ ಭಾರತೀಪುರದ ಹೊಲೆಯರಲ್ಲಿ ಕಾಣಬೇಕೆಂಬುವುದು ಜಗನ್ನಾಥನ ಮನೋಗತ.

ಭಾರತೀಪುರದ ಹೊಲೆಯರ ಬದುಕು ಅಮಾನವೀಯ ಮತ್ತು ಅವರ್ಣನೀಯವಾದ ಕನಿಷ್ಠಮಟ್ಟದ ಜೀವನವನ್ನು ನೆಡೆಸುತ್ತಿರುತ್ತಾರೆ. ಅದನ್ನು ಕಾದಂಬರಿಕಾರನ ಮಾತಿನಲ್ಲಿ ಹೇಳುವುದಾದರೆ "ಚಕ್ರವ್ಯೂಹದಂತಹ ಬೀದಿಗಳು, ಯಾವತ್ತೂ ಏನನ್ನೂ ಸೃಷ್ಟಿಸದವು. ಮಂಜುನಾಥನ ಮಹಿಮೆ ಬೆಳೆದಂತೆ ಒಂದಕ್ಕೊಂದರಂತೆ ಸೇರುತ್ತಾ, ಬೆಳೆಯುತ್ತಾ ಹೋದ ಚರಂಡಿಗಳಿಲ್ಲದ ಬೀದಿಗಳು. ಹೊಲೇರು ಒಂದು ವಾರ ಸಾಕು, ಕುಕ್ಕೆಯಲ್ಲಿ ಹೇಲು ತುಂಬಿ ತಲೆಯ ಮೇಲೆ ಹೊರಲ್ಲ ಎನ್ನಲಿ–ಈ ಬೀದಿಗಳು ಎಷ್ಟು ನಾರುತ್ತವೆ ಎಂದರೆ ಮಂಜುನಾಥ ಗರ್ಭಗುಡಿಯಲ್ಲಿ ದುರ್ಗಂಧ ಕವಿದೀತು"[೨]

---

೧. ಯು.ಆರ್. ಅನಂತಮೂರ್ತಿ–ಭಾರತೀಪುರ ಪು.ಸಂ.೧೧

೨. ಅದೇ ಕಾದಂಬರಿ ಪು. ಸ. ೧೧

ಜಗನ್ನಾಥ ಬೀದಿಯಲ್ಲಿ ಓಡಾಡುವಾಗ "ಕತ್ತಲಿನಲ್ಲಿ ಕಪ್ಪು ಮುಖಗಳು, ಕೆದರಿದ ಕೂದಲುಗಳು, ಹೇಲಿನ ಕುಕ್ಕೆ ಹೊತ್ತು ನೆಡೆಯಲಿರುವ ತಲೆಗಳು ಇದ್ದವು" ಎಂದು ಭಾರತೀಪುರದ ಹೊಲೆಯರ ಚಿತ್ರಣವನ್ನು ಕೊಡುವಾಗ ಹೇಗಿತ್ತು ಅವರ ದಯಾನೀಯ ಜೀವನ ಎಂಬ ಕಲ್ಪನೆ ಬರುತ್ತದೆ.

ಭಾರತೀಪುರದಲ್ಲಿ ಅಸ್ಪೃಶ್ಯತೆಯ ಆಚರಣೆ ಎಷ್ಟು ಕ್ರೂರವಾಗಿತ್ತೆಂದರೆ "ಹಿಂದೊಮ್ಮೆ ಗಾಂಧಿ ಬಂದಾಗ ಅಲ್ಲಿ ಇಳಿಸಲು ವ್ಯವಸ್ಥೆ ಮಾಡಿದ್ದರಂತೆ. ಆದರೆ ಗಾಂಧಿ ಬಂದವರೆ ಸೀದ ಹೊಲೆಯರ ಕೇರಿಗೆ ಹೋದರಂತೆ. ಆಗ ಜಗನ್ನಾಥನ ತಂದೆಯವರು ಊರಿನ ಮುಖಂಡರಾಗಿದ್ದರಿಂದ œµ² Œµ‡ ®±Š® Nµ°‹ Sµ œµ² °S®‚µ°N̄ T … °q®°qµ. B îµ±°Œµ y®°X®S®i®ã î®¾ m ›Nµ² °1®Š®°qµ"° ಕಾದಂಬರಿಕಾರನ ಈ ಮೇಲಿನ ಮಾತುಗಳನ್ನು ಕೇಳಿದಾಗ ಅಲ್ಲಿ ಜಾತಿಯ ಆಚರಣೆ ಎಷ್ಟು ಕಟ್ಟುನಿಟ್ಟಾಗಿತ್ತು, ಮುಟ್ಟುವುದಿರಲಿ ಅವರ ಕೇರಿಗಳಲ್ಲಿ ಹೋಗಿ ಬಂದರೆ ಮೈಲಿಗೆಯಾಗುತ್ತದೆಂಬ ಭಾವನೆ ಭಾರತೀಪುರದ ಬ್ರಾಹ್ಮಣರಲ್ಲಿ ಮನೆಮಾಡಿದ್ದು ಈ ಮಾತಿನಿಂದ ತಿಳಿಯುತ್ತದೆ.

ಭಾರತೀಪುರದ ಬ್ರಾಹ್ಮಣರಲ್ಲಿ ಒಳಪಂಗಡಗಳು ಮಂಜುನಾಥನ ಮುಖ್ಯ ಅರ್ಚಕ ಸೀತಾರಾಮಯಯ್ಯ, ಜಗನ್ನಾಥನ ತಂದೆ ಆನಂದರಾಯ ಮೇಲ್ವರ್ಗದ ಬ್ರಾಹ್ಮಣರಾದರೆ, ಜಗನ್ನಾಥನ ಮನೆಯಲ್ಲೇ ಉದ್ಯೋಗಿಯಾಗಿದ್ದ ರೈಟರ್ ಕೃಷ್ಣಯ್ಯನವರು ಕೀಳು ಜಾತಿಯ ಬ್ರಾಹ್ಮಣರು.

ಇನ್ನು ಕೆಳವರ್ಗದವರಾದ ಶೆಟ್ಟರು ಹೊಲೆಯರಲ್ಲಿ ತಾರತಮ್ಯ, ಕಾವೇರಿಯನ್ನು ಬಯಸಿದ ಹೊಲೆಯರ ಪಿಳ್ಳನಿಗೆ ದಫೇದಾರ ಮನಸೋ ಇಚ್ಚೆ ಬಾರಿಸಿ ಬೆಂಡೆತ್ತಿರುತ್ತಾನೆ. ಇದು ನಡೆಯುವುದು ಜಾತಿಯ ಕಾರಣದಿಂದಲೆ.

ಕಾದಂಬರಿಯ ನಾಯಕ ತನ್ನೂರಿನಲ್ಲಿ ಬದಲಾವಣೆ ತರಲು ಪ್ರಯತ್ನಿಸುತ್ತಾನೆ, ಅದರಲ್ಲಿ ಮೊದಲು ಮಂಜುನಾಥನ ಕಪಿಮುಷ್ಟಿಯಿಂದ ಇಡೀ ಭಾರತೀಪುರವನ್ನು ಬಿಡಿಸಬೇಕೆಂದು ತೀರ್ಮಾನಿಸುತ್ತಾನೆ. ಯಾಕೆಂದರೆ ಭಾರತೀಪುರದ ಪ್ರತಿಯೊಂದು ಜಾತಿಯ ಜನರು ಮಂಜುನಾಥನ ಆರಾಧಕರೂ ಮಂಜುನಾಥನ ಹೊರತು ಭಾರತೀಪುರದ ಜನತೆಯ ಅಸ್ತಿತ್ವವೇ ಇಲ್ಲವೆಂದು ಹೇಳಬಹುದು.

---

೧. ಯು,ಆರ್.ಅನಂತಮೂರ್ತಿ – ಭಾರತೀಪುರ. ಕಾದಂಬರಿ ಪು.ಸಂ. ೬

ಕಾದಂಬರಿಕಾರ ಭಾರತೀಪುರವನ್ನು ಪರಿಚಯ ಮಾಡಿಕೊಡುವಾಗ ಅಲ್ಲಿ ಬರುವ ಸ್ಕೂಲ್, ರೈಸ್‌ಮಿಲ್, ಹೋಟೆಲ್, ಆಸ್ಪತ್ರೆ, ಮೋಟರ್ ಸರ್ವೀಸ್ ಹೀಗೆ ಪ್ರತಿಯೊಂದರ ಹೆಸರು ಮಂಜುನಾಥ’ ಎಂಬ ಅಂಕಿತದೊಂದಿಗೆ ಪ್ರಾರಂಭವಾಗುವುದನ್ನು ನೋಡಿದಾಗ ಭಾರತೀಪುರದಲ್ಲಿ ಮಂಜುನಾಥನ ಪ್ರಭಾವಳಿ ದಟ್ಟಾಗಿರುವುದನ್ನು ಕಾಣಬಹುದು.

ಇಲ್ಲಿ ನಾವು ವಿಶ್ಲೇಷಣೆ ಮಾಡಬೇಕಾದ ಮತ್ತೊಂದು ವಿಷಯವೆಂದರೆ ಯಾಕೆ ಜಗನ್ನಾಥ ಮಂಜುನಾಥನನ್ನು ತಿರಸ್ಕರಿಸುತ್ತಾನೆ? ಎಂದು ಪ್ರಶ್ನಿಸಿಕೊಂಡರೆ ಅಲ್ಲಿ ನಮಗೆ ಕುತೂಹಲಕಾದಿದೆ. ಈ ಮೇಲ್ವರ್ಗದ ಬ್ರಾಹ್ಮಣರು ತಮ್ಮ ಅನುಕೂಲಕ್ಕೆ ತಕ್ಕಂತೆ ಸಮಾಜದಲ್ಲಿ ಕಾನೂನುಗಳನ್ನು, ನೀತಿ ನಿಯಮಗಳನ್ನು ರಚಿಸಿ ಸಮಾಜದ ಉಳಿದ ವರ್ಗಗಳು ತಮಗೆ ಬದ್ದರಾಗಿರುವಂತೆ ಮಾಡಿಕೊಂಡು ಬದುಕುತ್ತಿರುತ್ತಾರೆ. ತಮ್ಮ ಈ ಸ್ವಾರ್ಥವನ್ನು ಜಗನ್ನಾಥನಂತಹ ಯಾರೇ ವಿದ್ಯಾವಂತರು ಪ್ರಶ್ನಿಸಿದಾಗ ಇದೆಲ್ಲವು ಸಮಾಜದ ಒಳಿತಿಗಾಗಿ ಇರುವಂತದ್ದೆ ನಾವು ಮಾಡಿರುವ ಎಲ್ಲಾ ಕಾನೂನು ನೀತಿ ನಿಯಮಗಳಿಗೆ ಮಂಜುನಾಥನ ಅನುಗ್ರಹವಿದೆ, ನೀವೇನಾದರೂ ನಮ್ಮ ನೀತಿ ನಿಯಮ ಕಟ್ಟುಪಾಡುಗಳನ್ನು ವಿರೋಧಿಸಿದರೆ ಮಂಜುನಾಥನ ವಕ್ರದೃಷ್ಟಿಗೆ ಒಳಗಾಗುತ್ತೀರಿ ಎಂದು ಹೇಳಿ ಬ್ರಾಹ್ಮಣರು ಸಮಾಜದ ಕೆಳವರ್ಗದ ಜನರನ್ನು ತಮ್ಮ ಹಿಡಿತದಲ್ಲಿ ಇಟ್ಟು ಆಳ್ವಿಕೆ ನಡೆಸುತ್ತಿದ್ದರೂ, ಇದನ್ನು ಕಂಡ ಜಗನ್ನಾಥ, ಮಂಜುನಾಥ ಈ ಮೇಲ್ವರ್ಗದವರ ಸೃಷ್ಟಿ ಮಂಜುನಾಥನನ್ನು ದಿಕ್ಕರಿಸುವುದರಿಂದ ನಿಮಗೆ ಯಾವುದೇ ಕೇಡಾಗುವುದಿಲ್ಲ ಬದಲಾಗಿ ನೀವು ನಮ್ಮಂತೆ ಮನುಷ್ಯರಾಗಿ ಗೌರವದ ಜೀವನ ನಡಸಬಹುದೆಂಬುದನ್ನು ಕೆಳವರ್ಗದ ಹೊಲೆಯರಿಗೆ ತೋರಿಸಿ ಕೊಡಬೇಕು ಅದಕ್ಕಾಗಿ ಜಗನ್ನಾಥ ಮೊದಲು ಯೋಚಿಸುವುದು.

ಭಾರತೀಪುರದ ಜನರು ಮೊದಲು ಮಂಜುನಾಥನನ್ನು ತಿರಸ್ಕರಿಸುವಂತಾಗಬೇಕೆಂದು ಜಗನ್ನಾಥ ನಿಶ್ಚಯಿಸುತ್ತಾನೆ. ಮಾರ್ಗರೆಟ್‌ಗೆ ಬರೆಯುವ ಪತ್ರದಲ್ಲಿ “Life has ceased to be creative here, ಮಂಜುನಾಥ ಸ್ವಾಮಿ ಈ ಜೀವನಕ್ರಮದ ಕ್ಯಾನ್ಸರ್. ಈ ಪೇಟೆಯೊಂದು ಅವನಿಗಾಗಿ ಬೆಳೆದ ಕ್ಯಾನ್ಸರ್”೧ ಇಲ್ಲಿ ಕಾದಂಬರಿಯ ನಾಯಕ ಮಂಜುನಾಥನನ್ನು ಕ್ಯಾನ್ಸರ್ ಎಂಬ ಭೀಕರ ಖಾಯಿಲೆಗೆ ಹೋಲಿಸಬೇಕಾದರೆ ಮಂಜುನಾಥನ ಮೇಲೆ, ಅವನ ಹೆಸರಿನಲ್ಲಿ ನಡೆಸುತ್ತಿರುವ ಸಾಮಾಜಿಕ ವ್ಯವಸ್ಥೆಯ ಮೇಲೆ ಎಷ್ಟು ಬೇಸರವಿತ್ತೆಂಬುದನ್ನು ನಾವೇ ಊಹಿಸಬೇಕು.

---

೧. ಯು.ಆರ್.ಅನಂತಮೂರ್ತಿ. ಭಾರತೀಪುರ–ಪು.ಸಂ.೮

ಜಗನ್ನಾಥ ಶ್ರೀಪತಿರಾಯರು ಮಾತನಾಡುತ್ತಿರುವಾಗ ಪೇಟೆಗೆ ಬಂದಿದ್ದ ಶೂದ್ರರೆಲ್ಲ ಅವಸರವಾಗಿ ದೇವಸ್ಥಾನದ ಕಡೆ ನಡೆಯುತ್ತಿದ್ದರು. ಅವರನ್ನು ನೋಡುತ್ತಿದ್ದ ಜಗನ್ನಾಥನಿಗೆ ರಾಯರು ಹೀಗೆ ಹೇಳುತ್ತಾರೆ. "ಇವಕ್ಕೆಲ್ಲ ಹೊರಪಂಕ್ತಿ, ಕೆಂಪಕ್ಕಿಅನ್ನ, ಹುರುಳಿ ಸಾರು, ಒಳಗಡೆ ಬ್ರಾಹ್ಮಣರಿಗೆ ಊಟ ಸಾರು, ಹುಳಿ ಪಲ್ಯ ಪಾಯಸ,"[೧] ಎಂದು ಮಂಜುನಾಥನ ಮದ್ಯಸ್ಥಿಕೆಯಲ್ಲಿ ಬ್ರಾಹ್ಮಣರು ಶೂದ್ರರಿಗೆ ಮಾಡುವ ಅನ್ಯಾಯವನ್ನು ಹೇಳುತ್ತಾನೆ. ಶೂದ್ರರು ಇದನ್ನು ಬಹಳ ಭಯ ಭಕ್ತಿಯಿಂದ ಮಂಜುನಾಥನ ಪ್ರಸಾದವೆಂದು ತಿಂದು ಕೃತಾರ್ಥರಾಗುತ್ತವೆ ಇದಕ್ಕೆ ಕಾರಣ ಮಂಜುನಾಥನ ಭಯ.

ಇದೇ ಮಾತನ್ನು ಮುಂದುವರೆಸಿ ಜಗನ್ನಾಥ ಮಾರ್ಗರೆಟ್‌ಗೆ ಬರೆಯುವ ಪತ್ರದಲ್ಲಿ "Dear margreat, we can restore dignity to man only by destroying this God. Otherwise" ೨ ಎಂದು ಹೇಳುವುದರ ಮೂಲಕ ಜಗನ್ನಾಥ ಮಂಜುನಾಥನ ಮೇಲಿದ್ದ ತನ್ನ ಅಸಮಧಾನವನ್ನು ವ್ಯಕ್ತಪಡಿಸುತ್ತಾನೆ. ಜಗನ್ನಾಥನಿಗೆ ಭಾರತೀಪುರವನ್ನು ಮುಂಜುನಾಥನ ಗರ್ಭವಾಸದಿಂದ ಬಿಡಿಸಲು ಕ್ರೌರ್ಯ ಅವಶ್ಯವಾದರೆ ಅದಕ್ಕೂ ಸಿದ್ದನಾಗಿರಲು ಪ್ರಯತ್ನಿಸುತ್ತಾನೆ.

ಒಟ್ಟಿನಲ್ಲಿ ಜಗನ್ನಾಥನ ಉದ್ದೇಶ ಮಂಜುನಾಥನನ್ನು ದಿಕ್ಕರಿಸುವ ಮೂಲಕ ಬದಲಾವಣೆಗೆ ತರಬೇಕೆಂದು ಕಾದಂಬರಿಯ ಅಂತ್ಯದವರೆಗೆ ಅವನ ಹೋರಾಟ ಮುಂದುವರೆಯುತ್ತದೆ.

ಜಗನ್ನಾಥನ ಆದರ್ಶದ ಚಿಂತನೆಗಳಲ್ಲಿ ಭಾರತೀಪುರದ ಹೊಲೆಯರನ್ನು ತಮ್ಮ ಸಾಮಾಜಿಕ ಸ್ತರದಿಂದ ಮೇಲೇತ್ತುವ ಪ್ರಯತ್ನ ಆತ ಕಾದಂಬರಿಯಲ್ಲಿ ಮಾಡದಿರದ ಯೋಚನೆ, ಯೋಜನೆಗಳಿಲ್ಲ. ಇಲ್ಲಿ ಬರುವ ಪಿಳ್ಳೆ ಮುದ್ದ, ಕರಿಯ ಎಂಬ ಹೊಲೆಯರ ಹುಡುಗರಿಗೆ ಅಕ್ಷರಾಭ್ಯಾಸ ಮಾಡಿಸುವ ಒಂದು ಪ್ರಸಂಗವು ಇಲ್ಲಿ ಹೇಳುವುದು ಪ್ರಸ್ತುತವೆನಿಸುತ್ತದೆ. ಜಗನ್ನಾಥ ಸ್ಲೇಟಿನಲ್ಲಿ 'ಬಸವ ಎಂದು ಬರೆದು ಪಿಳ್ಳ ತಗೋ ಎಂದು ಚಿಟ್ಟೆಯ ಮೇಲೆ ಕೂತು ಸ್ಲೇಟನ್ನು ಒಡ್ಡಿದ. ಪಿಳ್ಳ ಎದ್ದು ನಿಂತ, ಜಗನ್ನಾಥ ತಗೊ ಎಂದ, ಪಿಳ್ಳ ಸ್ವಲ್ಪ ಹತ್ತಿರ ಬಂದು ಎಸೆದ ಸಾಮಾನು ಹಿಡಿಯುವುದಕ್ಕೆ ನಿಂತವನಂತೆ ಹಿಡಿಯಲು ನಿಂತ, ಜಗನ್ನಾಥ ಸ್ಲೇಟನ್ನು ಇನ್ನು ಹತ್ತಿರ ತಂದ, ಪಿಳ್ಳ ತನ್ನ ಕೈಗಳನ್ನು ತಟ್ಟನೆ ಕೆಳಗೆ ಮಾಡಿದ, ಜಗನ್ನಾಥ ಇನ್ನು ಹತ್ತಿರ ತಂದ,

---

೧. ಅದೇ ಕಾದಂಬರಿ ಪು.ಸಂ.–೨೨

೨. ಅದೇ ಕಾದಂಬರಿ ಪು.ಸಂ.೨೨

ಪಿಳ್ಳ ಕೈಗಳನ್ನು ಚಕ್ಕನೆ ಇನ್ನು ಕೆಳಗೆ ಕೈ ಮಾಡಿದ, ನೆಲದ ಮೇಲೆ ಕೂತು ಬಿಟ್ಟ. ಇನ್ನು ಜಗನ್ನಾಥ ಬಗ್ಗಿದ್ದರೆ ಪಿಳ್ಳ ಭೂಮಿಯೊಳಕ್ಕೆ ಹೊಕ್ಕುಬಿಡಲೂ ಪ್ರಯತ್ನಿಸಿ ಬಿಡಬಹುದೆನಿಸಿತು [೧]

ಈ ಸನ್ನಿವೇಶ ಓದುಗರಲ್ಲಿ ಹಲವು ಯೋಚನೆಗಳನ್ನು ಹೊಳೆಸುತ್ತದೆ. ಜಗನ್ನಾಥ ಹೊಲೆಯರಿಗೆ ಹತ್ತಿರವಾದಷ್ಟು ಅವರೂ ಮಾತ್ರ ಅವರಿಂದ ದೂರನೇ ಉಳಿಯಲು ಬಯಸುತ್ತಾರೆ, ಎಂಬುವುದು ಜಗನ್ನಾಥ ಬ್ರಾಹ್ಮಣ ವರ್ಗದ ಪ್ರತಿನಿಧಿಯಾಗಿರುವುದರಿಂದ ಅವರು ಶೋಷಣೆ ಮಾಡಿದಷ್ಟು ಇವರು ಸಹಿಸಿಕೊಳ್ಳುವರೇ ಹೊರತು ಅದರ ವಿರುದ್ಧ ದನಿಯತ್ತುವ ಮಂದಿಯಲ್ಲ ಭಾರತೀಪುರದ ಹೊಲೆಯರು ಎಂಬುವುದನ್ನು ಮತ್ತು ಜಗನ್ನಾಥ ಹೊಲೆಯರನ್ನು ಸ್ಪರ್ಶಿಸಲು ಮುಂದಾದರೆ ನಾವು ನಿಮ್ಮಿಂದ ಮುಟ್ಟಿಸಿಕೊಳ್ಳುವುದಿಲ್ಲ ಎಂಬ ನಕರಾತ್ಮಕ ಪ್ರತಿಭಟನೆಯನ್ನು ಈ ಸನ್ನಿವೇಶ ಸೂಚಿಸುತ್ತದೆ, ಇಂತಹ ಹೊಲೆಯರ ಮಂದಿಯನ್ನು ಜಗನ್ನಾಥ ಮಂಜುನಾಥ ದೇವಾಲಯಕ್ಕೆ ಅಮಾವಾಸ್ಯೆಯ ಮೂರನೆ ಜಾತ್ರೆಯಂದು ಪ್ರವೇಶಿಸಲು ಪ್ರಸಕ್ತವಾದ ದಿನವೆಂದು ಏಕೆಂದರೆ ಅಂದು ಭಾರತದಾದ್ಯಂತ ಭಕ್ತರು ಭಾರತೀಪುರಕ್ಕೆ ಬಂದಿರುತ್ತಾರೆ, ಅವರ ಸಮ್ಮುಖದಲ್ಲೇ ಹೊಲೆಯರು ದೇವಾಲಯಕ್ಕೆ ಹೋದರೆ ರಕ್ತ ಕಾರಿ ಸಾಯುತ್ತಾರೆಂಬುವುದು ಸುಳ್ಳೆಂದು ಸಾಭೀತು ಮಾಡಿ ತೋರಿಸಿ ಜನರಲ್ಲಿ ಹೊಸ ವಿಚಾರ ಮೂಡಿಸಬೇಕೆಂದು ಬಲವಾದ ಆಸೆ. ಹಾಗೆಯೇ ಹೊಲೆಯರನ್ನು ಅಂದು ದೇವಾಲಯಕ್ಕೆ ಪ್ರವೇಶ ಮಾಡಿಸಲು ಹಿಂದಿನ ರಾತ್ರಿ ದೇವಸ್ಥಾನದ ಮುಖ್ಯ ಅರ್ಚಕರ ಮಗ ಗಣೇಶ ತಂದೆಯ ಮೇಲಿನ ಸಿಟ್ಟಿನಿಂದ ಮತ್ತು ಮಂಜುನಾಥನ ಬಗ್ಗೆ ಅವರು ಹೊಂದಿದ್ದ ನಂಬಿಕೆ ಸುಳ್ಳೆಂದು ಸಾಭೀತು ಮಾಡಲು ಗರ್ಭಗುಡಿಯ ಲಿಂಗವನ್ನು ಕಿತ್ತು ಹೊಳೆಯಲ್ಲಿ ಬಿಸಾಡುತ್ತಾನೆ. ಅಲ್ಲಿಗೆ ಜಗನ್ನಾಥನ ಪ್ರಯತ್ನ ವ್ಯರ್ಥವಾಗುತ್ತದೆ.

ಜಗನ್ನಾಥ ಮತ್ತೊಂದು ಪ್ರಮುಖ ಸಂದರ್ಭದಲ್ಲಿ ಹೊಲೆಯರು ಬ್ರಾಹ್ಮಣರ ಸನಾತನ ನಂಬಿಕೆಗೆ ಪೆಟ್ಟು ಕೊಡುವ ಸನ್ನಿವೇಶವನ್ನು ಸೃಷ್ಟಿಸುತ್ತಾನೆ. ಅದು ಸಾಲಿಗ್ರಾಮವನ್ನು ಹೊಲೆಯರ ಕೈಯಿಂದ ಮುಟ್ಟಿಸುವುದು, ಅದರ ಬಗ್ಗೆ ಹೇಳುತ್ತಾ ಡಿ.ಆರ್. ನಾಗರಾಜು ಪವಿತ್ರಕಲ್ಲು ಸಾಲಿಗ್ರಾಮವನ್ನು ಸುತ್ತುವರಿದಿರುವ ಅಧಿಕಾರದ ತೇಜೋಮಂಡಲವನ್ನು ಬ್ರಾಹ್ಮಣ ಕ್ರಾಂತಿಕಾರಿ ಜಗನ್ನಾಥ ನಿಜಕ್ಕೂ ನಾಶ ಮಾಡುತ್ತಿದ್ದಾನೆಯೆ? ಅಥವಾ ಹಾಗೆ ಉಪೇಕ್ಷಿಸುವ ಮೂಲಕ ಅದರ ವಿಶೇಷಾಧಿಕಾರವನ್ನು ಹೆಚ್ಚಿಸುತ್ತಿದಾನೋ? ಎಂದು ಪ್ರಶ್ನಿಸುತ್ತಾರೆ. ಕೊನೆಗೂ ಜಗನ್ನಾಥ ಹೊಲೆಯರನ್ನು ಹೆದರಿಸಿ, ಬೆದರಿಸಿಯೇ ಅರಚಿ-ಕಿರಚಿಯೋ, ತನ್ನ ದಯಾನಿಯ ಕೋರಿಕೆಯ

೧. ಯು.ಆರ್. ಅನಂತ ಮೂರ್ತಿ, ಭಾರತೀಪುರ - ಪು.ಸಂ ೧೧೦

ಮೆರೆಗೋ ಸಾಲಿಗ್ರಾಮವನ್ನು ಮುಟ್ಟುವ ಶಾಸ್ತ್ರಮಾಡಿ ತಟ್ಟನೆ ಹಿಂದೆ ಸರಿದು ನಿಲ್ಲುತ್ತಾರೆ, ಇಲ್ಲಿ ಸಹ ಹೊಲೆಯರು ಬ್ರಾಹ್ಮಣರ ವಸ್ತುಗಳನ್ನು ತಾವೇಕೆ ಮುಟ್ಟಬೇಕು ಎನ್ನುವ ಭಾವನೆಯಿಂದ ಅವರು ಮೌನವಾಗಿಯೇ ಪ್ರತಿಭಟನೆಯನ್ನು ಮಾಡುವುದನ್ನು ಕಾಣಬಹುದು.

ಹೊಲೆಯರ ಗುಡಿಸಲಿಗೆ ಬೆಂಕಿ ಬಿದ್ದಾಗ ಅದನ್ನು ಚರ್ಚಿಸುತ್ತಾ ಶ್ರೀಪತಿರಾಯರು ಚಲನೆಯ ನಿಯಮವನ್ನು ಉದಾಹರಣೆ ಕೊಡುತ್ತಾ ಹೊಲೆಯರನ್ನು ನೀನು ಮುಟ್ಟುವುದಿಲ್ಲ ಅಂದ್ರೆ ಅವರು ಅದಕ್ಕೆ ಪ್ರತಿಯಾಗಿ ನಾವು ನಿಮ್ಮನ್ನು ಮುಟ್ಟುವುದಿಲ್ಲ ಅಂದ್ರು [೧] ಇಲ್ಲಿ ಮೇಲ್ವರ್ಗದವರ ಪ್ರಕಾರ ನಾವು ಶೂದ್ರರಿಂದ ಅಪವಿತ್ರವಾಗದೆ ದೂರ ಇದ್ದೇವೆ, ಎಂದು ಖುಷಿಪಟ್ಟರೆ, ಹೊಲೆಯರು ಸಹ ನಾವು ನಿಮ್ಮಿಂದ ಮುಟ್ಟಿಸಿಕೊಳ್ಳುವುದಿಲ್ಲವೆಂಬ ಹೋರಾಟವನ್ನು ಗಮನಿಸಬಹುದು.

ಹೀಗೆ ಭಾರತೀಪುರ ಕಾದಂಬರಿಯಲ್ಲಿ ಮೇಲ್ವರ್ಗದವರು ತಮ್ಮ ಅಸ್ಥಿತ್ವದ ಉಳಿವಿಗಾಗಿ ದಲಿತರ ವಿರುದ್ಧ ಸಂಘರ್ಷಕ್ಕೆ ನೇರವಾಗಿ ಇಳಿದರೆ ಹೊಲೆಯರು ಮೌನವಾಗಿ ಬ್ರಾಹ್ಮಣ ಜಾತಿಯನ್ನು ಪ್ರತಿಭಟಿಸುತ್ತಾ ತಮ್ಮ ಪಾಡಿಗೆ ತಾವು ಬದುಕಲು ಬಯಸಿದಾಗ ಜಗನ್ನಾಥನ ಎಲ್ಲಾ ಪ್ರಯತ್ನಗಳು ವಿಫಲವಾಗುತ್ತವೆ. ಜಗನ್ನಾಥ ಹೊಲೆಯರನ್ನು ಉದ್ಧಾರ ಮಾಡುವ ಕ್ರಿಯೆಗೆ ಹೊಲೆಯರು ಸಂಪೂರ್ಣವಾಗಿ ಸ್ಪಂದಿಸಿದರೆ ಜಗನ್ನಾಥ ತಮ್ಮ ಪ್ರಯತ್ನದಲ್ಲಿ ಯಶಸ್ವಿಯಾಗುತ್ತಿದ್ದ. ಆದರೆ ಹೊಲೆಯರ ಅಸಹಕಾರ ಮತ್ತು ಮೌನ ತಿರಸ್ಕಾರದಿಂದ ಜಗನ್ನಾಥ ಸೋಲುತ್ತಾನೆ. ಹೊಲೆಯರು ಹೋರಾಟದ ಮೂಲಕವೇ ತಮ್ಮ ಜಾತಿಯ ಹಿರಿಮೆ-ಗರಿಮೆಯನ್ನು ಉಳಿಸಿಕೊಳ್ಳುತ್ತಾರೆ.

ಒಟ್ಟಿನಲ್ಲಿ ಚೋಮನ ದುಡಿ ಮತ್ತು ಭಾರತೀಪುರ ಈ ಎರಡು ಕಾದಂಬರಿಗಳಲ್ಲಿ ಸಹ ಜಾತಿ ಸಂಘರ್ಷ ಗುಪ್ತಗಾಮಿನಿಯಂತೆ ಹರಿದಿರುವುದನ್ನು ಈ ಮೇಲಿನ ಕೆಲವು ಸನ್ನಿವೇಶಗಳ ವಿಶ್ಲೇಷಣೆಯಿಂದ ಗಮನಿಸಿದೆವು, ಇಲ್ಲಿ ಜಾತಿಯ ಕಾರಣದಿಂದ ಘರ್ಷಣೆಯಾಗುವುದು ಸಹಜವಾದರು, ಮೇಲ್ಜಾತಿಯವರು ಮಾತ್ರ ತಮ್ಮ ಜಾತಿಯ ಉಳಿವಿಗಾಗಿ ಹೋರಾಟ ಮಾಡುತ್ತಾರೆ, ಎಂಬುವುದು ಸತ್ಯಕ್ಕೆ ದೂರವಾದದ್ದು. ಕೆಳಜಾತಿಯವರು ಸಹ ತಮ್ಮ ಸಂಪ್ರದಾಯ, ಆಚರಣೆಗಳಿಗೆ ನಡೆ ನುಡಿಗಳಿಗೆ ತೊಂದರೆ ಕೊಟ್ಟಾಗ ಅವರು ಸಹ ಅದನ್ನು ಪ್ರತಿಭಟಿಸುವುದನ್ನು ನೋಡಬಹುದು.

---

೧. ಡಿ.ಆರ್. ನಾಗರಾಜು – ಅಮೃತ ಮತ್ತು ಗರುಡ ಪು.ಸಂ –೩೧೨

ಚೋಮ ಕ್ರಿಸ್ತಿಯನ್‌ನ ಹತ್ತಿರ ಭೂಮಿ ಕೇಳಲು ಹೋದ ಪಾದ್ರಿ ನೀನು ನಮ್ಮ ಧರ್ಮಕ್ಕೆ ಬರುವುದಾದರೆ ನಿನಗೆ ನಿನ್ನ ಹಳ್ಳಿಯ ಹತ್ತಿರ ಇರುವ ಒಳ್ಳೆಯ ಜಮೀನನ್ನು ಕೊಡುವುದಾಗಿ ಹೇಳಿದಾಗ ಚೋಮ ಭೂಮಿಯ ಆಸೆಗೆ ಬಲಿಯಾಗದೆ ತನ್ನ ಜಾತಿಯ ಉಳಿವಿಗಾಗಿ ಅಲ್ಲೂ ಸಹ ಹೋರಾಟ ಮಾಡುತ್ತಾನೆ, ತನ್ನ ಜಾತಿಗಾಗಿ ಭೂಮಿಯ ಆಸೆ ಬಿಟ್ಟು ಮನೆಗೆ ಹಿಂತಿರುಗುತ್ತಾನೆ. ಅದೇ ರೀತಿಯಲ್ಲಿ

ಭಾರತೀಪುರದಲ್ಲಿ ಸಹ ಬ್ರಾಹ್ಮಣರನ್ನು ವಿರೋಧಿಸುವ ಹೊಲೆಯರ ಒಂದು ಚಿತ್ರಣ ಬರುತ್ತದೆ. ಜಗನ್ನಾಥ ಹೊಲೆಯರ ಪಿಳ್ಳನನ್ನು ಹುಡುಕಿಕೊಂಡು ಅವನ ಕೇರಿಯ ಗುಡಿಯ ಒಳಗೆ ನುಗ್ಗಿದಾಗ, ಹೊಲೆಯ ಕೇರಿಯ ಹಿರಿಯರು ಧಣಿಯರ ನೀವು ನಮ್ಮ ಗುಡಿ ಒಳಗೆ ಬರಕೂಡದೆಂದು [೧] ವಿನಂತಿಸುವುದು ಪ್ರತಿಭಟನೆಯೇ ಅಲ್ಲ? ಹೀಗೆ ಎರಡು ಕಾದಂಬರಿಯು ಇಂತಹ ಇನ್ನು ಹಲವಾರು ಘಟನೆಗಳನ್ನು ಗುರುತಿಸಬಹುದಾಗಿದೆ.

---

೧. ಯು.ಆರ್. ಅನಂತ ಮೂರ್ತಿ, ಭಾರತೀಪುರ - ಪು.ಸಂ ೧೬೧

೧. ಯು.ಆರ್. ಅನಂತ ಮೂರ್ತಿ, ಭಾರತೀಪುರ - ಪು.ಸಂ ೧೬೬

೪. ಚೋಮನ ದುಡಿ ಮತ್ತು ಭಾರತೀಪುರ ಕಾದಂಬರಿಯಲ್ಲಿ ವರ್ಗ ಸಂಘರ್ಷ

ಘರ್ಷಣೆ ಅಥವಾ ಹೋರಾಟವು ಪ್ರಾಚೀನ ಕಾಲದಿಂದಲೂ, ಇತಿಹಾಸದುದ್ದಕ್ಕೂ ತನ್ನ ಅಸ್ತಿತ್ವವನ್ನು ಗುರುತಿಸಿಕೊಂಡಿದೆ. ಹೆಣ್ಣು, ಹೊನ್ನು, ಮಣ್ಣಿಗಾಗಿ ದೊಡ್ಡ ಸಂಗ್ರಾಮಗಳೇ ಘಟಿಸಿರುವುದು ಈಗ ಇತಿಹಾಸ, ಅಂತೆಯೇ ಇಂದು ಜಾತಿ ಮತ್ತು ವರ್ಗ ಸಂಘರ್ಷ ಅಧ್ಯಯನ ಯೋಗ್ಯ ಪರಿಕಲ್ಪನೆಗಳಾಗಿವೆ. ಜಾತಿ ಮತ್ತು ವರ್ಗ ಸಂಘರ್ಷಗಳೆರಡು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ಮೇಲ್ನೋಟಕ್ಕೆ ಒಂದೇ ಅನಿಸಿದರೂ, ಆ ಪರಿಕಲ್ಪನೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಜಾತಿಗಾಗಿ ನಡೆಯುವ ಸಂಘರ್ಷವೇ ಬೇರೆ ವರ್ಗದ ಆಧಾರದ ಮೇಲೆ ನಡೆಯುವ ಸಂಘರ್ಷವೇ ಬೇರೆ, ಆದರೆ ಅಂತಿಮವಾಗಿ ಹೋರಾಟ ಮಾತ್ರ ಎರಡಲ್ಲೂ ಸಾಮಾನ್ಯವಾಗಿರುತ್ತದೆ.

ವರ್ಗಪರಿಕಲ್ಪನೆ ಎಂಬುವುದು ಪಾಶ್ಚಾತ್ಯರಿಂದ ಭಾರತಕ್ಕೆ ಬಂದ ವಿಶಿಷ್ಟ ಅಂಶವಾಗಿದೆ. ಭಾರತೀಯರಲ್ಲಿ ಹುಟ್ಟಿನ ಆಧಾರದ ಮೇಲೆ ವ್ಯಕ್ತಿಯ ಸ್ಥಾನಮಾನವನ್ನು (ಸಮಾಜದಲ್ಲಿ) ನಿರ್ಧರಿಸಲಾಗುತಿತ್ತು. ಆದರೆ ಪಾಶ್ಚಾತ್ಯರಲ್ಲಿ ಹುಟ್ಟು, ಜಾತಿ ಅಥವಾ ಕೋಮು ಅವರಿಗೆ ಮುಖ್ಯವಲ್ಲ, ಆರ್ಥಿಕ ಸುಸ್ಥಿರದ ಆಧಾರದಲ್ಲಿ ಪಾಶ್ಚಾತ್ಯ ಸಮಾಜದಲ್ಲಿ ವ್ಯಕ್ತಿಯ ಬೆಲೆ, ಗೌರವಗಳು ನಿರ್ಧಾರವಾಗುತ್ತಿದ್ದವು. ಪಾಶ್ಚಾತ್ಯರಲ್ಲಿ ಜಾತಿ ಯಾವುದೇ ಇರಲಿ ಆರ್ಥಿಕ ಶಕ್ತಿ (Economical sound) ವ್ಯಕ್ತಿಯ ವರ್ಗವನ್ನು ನಿರ್ಧರಿಸುತ್ತದೆ.

ಆರ್ಥಿಕವಾಗಿ ಬಲಿಷ್ಟರಾದ ಶ್ರೀಮಂತರು ಬಂಡವಾಳಷಾಹಿಗಳು ಮೇಲ್ವರ್ಗದವರಾದರೆ, ಆರ್ಥಿಕವಾಗಿ ದುರ್ಬಲರಾದ ಕೂಲಿಕಾರರು, ಕಾರ್ಮಿಕರು ಇತರೆ ಮೊದಲಾದ ಕೆಳವರ್ಗದವರೆಂದು ಗುರುತಿಸಲಾಗಿದೆ. ರಷ್ಯಾದ ಖ್ಯಾತ ಚಿಂತಕ ಕಾರ್ಲ್‌ಮಾರ್ಕ್ಸ್ ರವರು ತಮ್ಮ ಗ್ರಂಥ ವರ್ಗಸಂಘರ್ಷ' ಎಂಬ ಕೃತಿಯಲ್ಲಿ "ಉಳ್ಳವರು ಮತ್ತು ಇಲ್ಲದವರ ನಡುವಿನ ಹೋರಾಟವೇ ವರ್ಗ ಸಂಘರ್ಷ ಎಂದು ವ್ಯಾಖ್ಯಾನಿಸಿದ್ದಾರೆ. ಸಮಾಜದಲ್ಲಿ ವ್ಯಕ್ತಿಗಳ ನಡುವೆ ಅಂತರ ಹೆಚ್ಚುತ್ತಾ ಹೋದಂತೆ ಸಮಾಜದಲ್ಲಿ ಸಮತೋಲನ ತಪ್ಪಿ, ಘರ್ಷಣೆಗಳು ನಡೆಯುತ್ತವೆ. ಉಳ್ಳವರು ತಮ್ಮಲ್ಲಿರುವ ಬಂಡವಾಳವನ್ನು ಹೂಡಿ ಉತ್ಪಾದನೆಯನ್ನು ಮಾಡುತ್ತಾರೆ,

[illegible]

[illegible]

[illegible]

[illegible]

[illegible]

ಅದಕ್ಕೆ ಪ್ರತಿಯಾಗಿ ಲಾಭವನ್ನು ಪಡೆಯುವುದು ಸರಿಯಷ್ಟೇ, ಆದರೆ ಈ ಉತ್ಪಾದನೆಯ ಇನ್ನೊಂದು ಪ್ರಮುಖ ಅಂಗ ಕಾರ್ಮಿಕರು ಅಥವಾ ಕೂಲಿಕಾರರು, ಇವರು ತಮ್ಮ ಶ್ರಮವನ್ನು ತೊಡಗಿಸಿದಾಗ ಮಾತ್ರ ಉತ್ಪಾದನಾ ಕಾರ್ಯ ಸಂಪೂರ್ಣವಾಗಲು ಸಾಧ್ಯ. ಇಂತಹ ಕಾರ್ಮಿಕರಿಗೆ ಬಂಡವಾಳಷಾಹಿಗಳು ಕೂಲಿಯನ್ನು ಕೊಡುತ್ತಾರೆ, ಹೊರತು ಉತ್ಪಾದನೆಯಲ್ಲಿ ಬರುವ ಯಾವುದೇ ಲಾಭಾಂಶವನ್ನು ಕಾರ್ಮಿಕರ ಜೊತೆ ಹಂಚಿಕೊಳ್ಳುವುದಿಲ್ಲ ಇದರಿಂದ ಬಂಡವಾಳಷಾಹಿ ಸಂಘಟನಾಕಾರ, ಉತ್ಪಾದನೆಯಿಂದ ಬರುವ ಲಾಭಾಂಶವನ್ನು ಹಂಚದೆ ಇಟ್ಟುಕೊಳ್ಳುವುದರಿಂದ, ಆತ ಶ್ರೀಮಂತನಾಗುತ್ತಲೇ ಇರುತ್ತಾನೆ. ಬಡಕೂಲಿ ಕಾರ್ಮಿಕ ವರ್ಗ ಆರ್ಥಿಕವಾಗಿ ದುರ್ಬಲ ಸ್ಥಿತಿಗೆ ತಳ್ಳಲ್ಪಡುತ್ತಾರೆ.

ಹೀಗೆ ಸಮಾಜದಲ್ಲಿ ಶ್ರೀಮಂತ ಬಡವ, ಮೇಲ್ವರ್ಗ, ಕೆಳವರ್ಗ ಎಂಬ ಭೇದ ಸೃಷ್ಟಿಯಾಗಿ ಸಮಾಜದ ಸಾಮಾಜಿಕ ಆರೋಗ್ಯ ಹದಗೆಡುತ್ತದೆ. ಅಂತಹ ಸಮಾಜದಲ್ಲಿ ಉಳ್ಳವರು ಇಲ್ಲದವರ ನಡುವೆ ಸಂಘರ್ಷಗಳು, ಹೋರಾಟಗಳು, ಗಲಾಟೆಗಳು, ಹರತಾಳಗಳು, ಮುಷ್ಕರ, ಆಂದೋಲನಗಳು ನಡೆಯುತ್ತಿರುತ್ತದೆ. ರಷ್ಯಾ ದೇಶದಲ್ಲಿ ೧೯೧೭ರಲ್ಲಿ ಕ್ರಾಂತಿಯಾದಾಗ ಆ ಕ್ರಾಂತಿಗೆ ಮುಖ್ಯ ಕಾರಣ ಆ ವರ್ಗ ಸಂಘರ್ಷವೇ ಎಂದರೆ ತಪ್ಪಾಗದು. ಮಾರ್ಕ್ಸ್ ಸಿದ್ಧಾಂತ ಅಂತಹ ಪ್ರಕ್ಷುಬ್ಧ ಸ್ಥಿತಿಯಲ್ಲೇ ಹುಟ್ಟಿ ಕೊಂಡಿತು.

ಸಂಪತ್ತು ಒಬ್ಬ ವ್ಯಕ್ತಿಯ ಹಿಡಿತದಿಂದ ಒಂದು ಸಮುದಾಯದ ಹಿಡಿತಕ್ಕೆ ಬಂದಾಗ ತಾರತಮ್ಯ ಕಡಿಮೆಯಾಗುತ್ತದೆ. ಆಗ ಸಮಾಜದಲ್ಲಿ ಯಾವುದೇ ಘರ್ಷಣೆಯಿಲ್ಲದೆ ಸಮಾಜ ಶಾಂತವಾಗಿರುತ್ತದೆ. ಅದನ್ನು ಬಿಟ್ಟು ಶ್ರೀಮಂತರು ಇನ್ನು ಶ್ರೀಮಂತರಾಗುತ್ತಾ ಹೋಗುವುದು ಬಡವರು ಅತಿ ನಿರ್ಗತಿಕ ಸ್ಥಿತಿಯನ್ನು ತಲುಪುವುದು, ಇದು ಸಮಾಜದ ಆರೋಗ್ಯವನ್ನು ಹಾಳುಮಾಡುತ್ತದೆ. ಸಮಾಜದ ಅತಿ ನೊಂದ ಬಡವರು ಶ್ರೀಮಂತರ ವಿರುದ್ಧ ತಿರುಗಿದಾಗ ಕಡಿಮೆ ಸಂಖ್ಯೆಯಲ್ಲಿರುವ ಶ್ರೀಮಂತರು ಬಹು ಸಂಖ್ಯಾತ ಬಡವರ ದಾವಾಗ್ನಿಗೆ, ಹಸಿವಿನ ಆಹಾಕಾರಕ್ಕೆ ಸಿಕ್ಕಿ ನಾಶವಾಗುತ್ತಾರೆ. ಇದಕ್ಕೆ ಕುವೆಂಪು ಅವರ ಕಲ್ಕಿ ಕವಿತೆ ಉತ್ತಮ ಉದಾಹರಣೆ.

ಸಮತಾವಾದದ ಮೂಲ ಚಿತ್ರಣ ಎಂದರೆ ಕೂಲಿಕಾರ, ಕಾರ್ಮಿಕರು ಮತ್ತು ರೈತಾಪಿ ಜನರು ಮೂರು ಜನ ದುಡಿದು ಜೀವನ ಸಾಗಿಸುವವರು, ಇವರ ಜೀವನವನ್ನೊಳಗೊಂಡು ರೂಪಿತವಾಗಿರುವುದು ಸಮತಾವಾದಿ ಧೋರಣೆ"[೧] ಈ ಸಮಾಶಾವಾದಿ ಧೋರಣೆಯು ಸಹ ವರ್ಗ ಸಂಘರ್ಷವಾಗಿದೆ.

೧. ರಾ.ಗೌ. ಪಕ್ಷಿ ಸಂಪದ – ಪು. ಸಂ ೧೧೫

ಪ್ರಸ್ತುತ ನಾನು ನಿಬಂಧಕ್ಕೆ ಆಯ್ಕೆಮಾಡಿಕೊಂಡಿರುವ ಎರಡು ಕಾದಂಬರಿಗಳನ್ನು ಈ ವರ್ಗ ಸಂಘರ್ಷದ ಹಿನ್ನೆಲೆಯಲ್ಲಿ ಚರ್ಚೆ ಮಾಡುವುದು ಅವಶ್ಯಕವೆನಿಸುತ್ತದೆ. ಅದರಲ್ಲಿ ಮೊದಲಿಗೆ ಶಿವರಾಮಕಾರಂತರ ಚೋಮನ ದುಡಿ ಕಾದಂಬರಿಯ ವರ್ಗ ಸಂಘರ್ಷದ ಚಿತ್ರಣವನ್ನು ವಿಶ್ಲೇಷಣೆ ಮಾಡೋಣ.

ಚೋಮನ ದುಡಿಯಲ್ಲಿ ಬರುವ ಸಂಕಪ್ಪಯ್ಯ ಮೇಲ್ವರ್ಗದ ಪ್ರತಿನಿಧಿಯಾದರೆ ಅವನ ಆಶ್ರಯದಲ್ಲೆ ಅವನ ಮೂಲದ ಹೊಲೆಯನಾಗಿ ದುಡಿಯುವ ಕೆಳಜಾತಿಯ ಚೋಮ ಕೆಳವರ್ಗದ ಪ್ರತಿನಿಧಿ. ಸಂಕಪಯ್ಯ ಕಾದಂಬರಿಯ ತುಂಬೆಲ್ಲಾ ಚೋಮನ ಮೇಲೆ ತನ್ನ ನಿಯಂತ್ರಣವನ್ನು ಹೆಚ್ಚು ಮಾಡುತ್ತಾ ಇರುತ್ತಾನೆ. ಆದರೆ ಚೋಮ ಅವನು ನಿಯಂತ್ರಿಸಿದಷ್ಟೇ ತಾನು ಕುಗ್ಗುತ್ತಲೇ ಇರುತ್ತಾನೆ, ಹೊರತು ಅದನ್ನು ಪ್ರತಿಭಟಿಸುವ ಧ್ವನಿ ಚೋಮನಲ್ಲಿ ಇಲ್ಲ, ಏಕೆಂದರೆ ಚೋಮ ಕೆಳವರ್ಗದವನು ಆರ್ಥಿಕವಾಗಿ ದುರ್ಬಲ ಸಂಕಪ್ಪಯ್ಯನ ಆಶ್ರಯ ತಪ್ಪಿದರೆ ಚೋಮನಿಗೆ ಜೀವನಕ್ಕೆ ಅನ್ಯಮಾರ್ಗವಿಲ್ಲ. ಅದಕ್ಕಾಗಿ ಚೋಮ ಎಂದೂ ಸಹ ಧನಿಯ ವಿರುದ್ಧ ಧ್ವನಿ ಎತ್ತುವುದಿಲ್ಲ. ಏನೋ ಆಗೊಮ್ಮೆ, ಈಗೊಮ್ಮೆ, ಸಂಕಪ್ಪಯ್ಯನ ವಿರುದ್ಧ ತಲೆಯಲ್ಲಿ ಏನೋ ಯೋಚನೆ ಹೊಳೆದರು ಧನಿಯರು ಎಂದೊಡನೆ ಬಾಗಿ ಬಗ್ಗಿದ ಅವನ ಮನಸ್ಸು ವಿನಯ, ದಾಸ್ಯಬುದ್ಧಿ, ಆದರೋ ಕೆಲವೊಮ್ಮೆ ನೆಟ್ಟನೆ ನಿಲ್ಲಲು ಪ್ರಯತ್ನಿಸುತ್ತದೆ. ನನಗೆಲ್ಲಿಯ ಧನಿ? ನನ್ನ ಆಸೆಯನ್ನು ಪೂರೈಸದ ಧನಿಗಳ ಹಂಗು ನನಗೇಕೆ [೧] ಎನ್ನುತ್ತಾನೆ, ಆದರೆ ಅದೆಲ್ಲಾ ನೀರಿನ ಮೇಲಣ ಗುಳ್ಳೆಯಂತೆ ಕ್ಷಣ ಮಾತ್ರದಲ್ಲಿ ನಾಶವಾಗುತ್ತದೆ. ಮತ್ತೆ ಅದೇ ಸಂಕಪ್ಪಯ್ಯ, ಅವನ ಆಜ್ಞಾಧಾರಕ ಚೋಮ. ಹೀಗೆ ಕಾದಂಬರಿಯಲ್ಲಿ ಚೋಮನ ಸ್ಥಿತಿ ಮುಂದುವರೆಯುತ್ತದೆ.

ಚೋಮನ ಆಸೆ ತನ್ನ ಧನಿಯರಿಂದ ಒಂದು ಹತ್ತು ಸೇರು ಬೀಜ ಬಿತ್ತುವಷ್ಟು ಜಾಗವನ್ನು ಗೇಣಿಗೆ ಪಡೆದು ಬೇಸಾಯಗಾರ ನಾಗಬೇಕೆಂಬುವುದು, ಅವನ ಹಪಹಪಿಕೆ ಅದಕ್ಕೆ ಅಡ್ಡಿ ಸಂಕಪಯ್ಯನ ತಾಯಿ, ಕಾರಣ ಕೆಳವರ್ಗದ ಚೋಮನ ವರ್ಗದವರು ಭೂಮಿಯನ್ನು ಗೇಣಿಗೆ ಪಡೆಯುವುದು ಹಿಂದಿನಿಂದ ಬಂದಿಲ್ಲ. ಈಗ ನಾವು ಕೊಟ್ಟರೆ ನಮ್ಮ ಹಿರಿಯರ ಆಚರಣೆಯನ್ನು ದಿಕ್ಕರಿಸಿದಂತೆ ಆಗುವುದಿಲ್ಲವೆ? ಎಂದು ಸಂಪ್ರದಾಯದ ನೆಪ ಹೇಳಿ ಭೂಮಿಯನ್ನು ಗೇಣಿಗೆ ಕೊಡುವುದನ್ನು ನಿರಾಕರಿಸುತ್ತಾರೆ. ಸಂಕಪ್ಪಯ್ಯ ಮತ್ತು ಅವನ ತಾಯಿ.

---

೧. ಶಿವರಾಮ ಕಾರಂತ, ಚೋಮನ ದುಡಿ ಪು.ಸಂ ೩೫

ಚೋಮನಿಗೆ ಭೂಮಿ ಕೊಡಲು ನಿರಾಕರಿಸಿದ ಸಂಕಪ್ಪಯನ ನೀತಿಯನ್ನು ವರ್ಗಸಂಘರ್ಷದ ಹಿನ್ನೆಲೆಯಲ್ಲಿ ನಿಂತು ನೋಡಿದಾಗ ಚೋಮ ಒಬ್ಬ ಕೂಲಿಕಾರ, ಸಂಕಪ್ಪಯ್ಯನ ಬಳಿ ಜೀತ ಮಾಡುವುದೇ ಅವನ ಉದ್ಯೋಗ ಈಗ ಸಂಕಪ್ಪಯ್ಯ ಅವನಿಗೆ ಭೂಮಿಯನ್ನು ನೀಡಿದ್ದೇ ಆದರೆ ಚೋಮ ಆ ಭೂಮಿಯಲ್ಲಿ ಶ್ರಮಪಟ್ಟು ದುಡಿಮೆ ಮಾಡಿ ಒಳ್ಳೆಯ ಬೆಳೆ ಬೆಳೆದು ಕಾಲಾನಂತರದಲ್ಲಿ ಆರ್ಥಿಕವಾಗಿ ಸ್ವತಂತ್ರನಾಗಬಹುದು ಮತ್ತು ಸ್ವಾವಲಂಬಿಯಾಗಬಹುದು. ಹೀಗೆ ಆರ್ಥಿಕವಾಗಿ ಚೋಮ ಪ್ರಬಲನಾದರೆ ಅವನ ಮುಂದೆ ಸಂಕಪ್ಪಯ್ಯ ದುರ್ಬಲನಾಗಬೇಕಾಗುತ್ತದೆ. ಅಲ್ಲದೆ ಚೋಮ ಈ ಹಿಂದೆ ಅತ್ಯಂತ ವಿನಯತೆ, ವಿಧೇಯತೆಯಿಂದ ನಡೆದುಕೊಂಡಂತೆ ಗೇಣಿದಾರನಾದ ಮೇಲೆ ಇರಲು ಸಾಧ್ಯವಿಲ್ಲ ಚೋಮ ಶ್ರಮ ಜೀವಿಯಾದ್ದರಿಂದ ಒಂದಲ್ಲ ಒಂದು ದಿನ ಭೂಮಿಯಲ್ಲಿ ಒಳ್ಳೆಯ ಸಂಪಾದನೆಯನ್ನುಗಳಿಸಿ ಬಂದ ಆದಾಯದಿಂದ ಮತ್ತಷ್ಟು ಜಮೀನು ಖರೀದಿಸಿ ಸಂಕಪ್ಪಯ್ಯನಿಗೆ ಪೈಪೋಟಿಯಾಗಿ, ಪ್ರತಿಸ್ಪರ್ಧಿಯಾಗಿ ನಿಲ್ಲುವುದಿಲ್ಲವೆಂಬುವುದಕ್ಕೆ ಏನು ಭರವಸೆ? ಅಲ್ಲದೇ ಒಮ್ಮೆ ಚೋಮನಿಗೆ ಭೂಮಿಯ ರುಚಿ ಹತ್ತಿದರೆ ಆತ ಮತ್ತಷ್ಟು ಭೂಮಿಯನ್ನು ಪಡೆದು ಸಂಕಪ್ಪಯ್ಯನಿಗಿಂತಲೂ ದೊಡ್ಡ ಜಮೀನ್ದಾರನಾಗಬಹುದೇನೋ, ಬಲ್ಲವರು ಯಾರು? ಹೀಗೆ, ಸಂಕಪಯ್ಯ ಚೋಮನಿಗೆ ಒಂದು ಸಣ್ಣ ತುಂಡು ಹಿಡುವಳಿಯನ್ನು ಕೊಡದೆ ಪ್ರಾರಂಭದಿಂದಲೇ ಆತನನ್ನು ಭೂಮಿಯ ಕೊಡುವ ವಿಚಾರದಿಂದ ದೂರವಿಡುತ್ತಾನೆ.

ಹೀಗೆ ಚೋಮನ ದುಡಿಯಲ್ಲಿ ಸಂಕಪ್ಪಯ್ಯ ಮೇಲ್ವರ್ಗದವನಾಗಿದ್ದುಕೊಂಡು ಕೆಳವರ್ಗದ ಚೋಮ ಅದೇ ವರ್ಗದಲ್ಲಿ ಮುಂದುವರೆಯುವಂತೆ ಕಟ್ಟೆಚ್ಚರದಿಂದ ನೋಡಿ ಕೊಳ್ಳುತ್ತಾನೆ.ಕಾದಂಬರಿಯಲ್ಲಿ ಬರುವ ಬಿರಮ ಪೂಜಾರಿ ಚೋಮನಿಗಿಂತ ಮೇಲ್ವರ್ಗದವನು, ಚೋಮನ ಜೀವನದ ಪ್ರಾಣವಾದ ಹೆಂಡ, ಅಲ್ಲ ನೀರು ಮಿಶ್ರಿತ ಹೆಂಡ ಎಂದರೆ ತಪ್ಪಾಗದು, ಆ ಹೆಂಡದ ಅಂಗಡಿಯನ್ನು ನಡೆಸುವ ವ್ಯಕ್ತಿ ಒಂದು ರೀತಿಯಲ್ಲಿ ಎಲ್ಲಾ ಕುಡಿಯುವವರ ಯಜಮಾನ, ಇವನು ಕೊಡುವ ಹೆಂಡದಲ್ಲಿ ಮುಕ್ಕಾಲು ಪಾಲು ನೀರು ಉಳಿದ ಕಾಲು ಭಾಗ ಹೆಂಡ, ಇದು ಕೇವಲ ಚೋಮನೊಬ್ಬನಿಗೆ ಮಾತ್ರ ಅಲ್ಲ ಅವನ ಅಂಗಡಿಗೆ ಬರುವ ಎಲ್ಲಾ ಗಿರಾಕಿಗಳಿಗೂ ಇದೇ ಸೇವಾರ್ಥ. ಹೆಂಡದ ಅಂಗಡಿಯ ಬಿರುಮ ಪೂಜರಿಯ ಲೋಭತನ ಎಂಥಹದೆಂದರೆ ಚೋಮ ಎರಡು ದಿನದ ಕೂಲಿ ಒಂದು ಸೇರು ಅಕ್ಕಿಯನ್ನು ತಂದು ಪೂಜಾರಿಯ ಮುಂದೆ ಸುರಿವಾಗ ಪೂಜಾರಿ ತನ್ನ ಸೇರಿನಲ್ಲಿ ಅಕ್ಕಿಯನ್ನು ಅಳೆದು ಏನು ಮೂರುವರೆ ಪಾವೇ ಸರಿಯೇ? [೧] ಎಂದು ಹೇಳಿ ಬಿರುಮ ಅಲ್ಲೂ ಸಹ ಚೋಮನನ್ನು ಮೋಸಗೊಳಿಸುತ್ತಾನೆ. ಹೀಗೆ ಚೋಮನ ಕೊನೆಯ ಉಸಿರಿರುವವರೆಗೂ ಈ ಬಿರುಮನ

ಹೆಂಡ ಇರಲೇಬೇಕು. ಹೆಂಡವಿಲ್ಲದ ದಿನ ಅವನ ಉಸಿರೇ ನಿಂತಂತೆ. ಇಂತಹ ಚೋಮನನ್ನು ಆರ್ಥಿಕವಾಗಿ ದುರ್ಬಲವಾಗಿರುವಂತೆ ಅವನ ಮುಕ್ಕಾಲು ಪಾಲು ಸಂಪಾದನೆಯನ್ನು ತಾನೆ ದೋಚಿಕೊಳ್ಳುತ್ತಾನೆ, ಆದರೆ ಅದಕ್ಕೆ ಪ್ರತಿಯಾಗಿ ಕೊಡುವುದು ಮಾತ್ರ ನೀರು ಬೆರೆಸಿದ ಹೆಂಡ, ಈ ರೀತಿಯಾಗಿ ಮೇಲ್ವರ್ಗದ ಬಿರುಮ ಚೋಮನನ್ನು ಮತ್ತಷ್ಟು ದುರ್ಬಲ ಮಾಡುತ್ತಾನೆ.

ಕಾದಂಬರಿ ಮುಂದುವರೆದಂತೆ ಬರುವ ಮನ್ವೇಲ ಈತ ಸಹ ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದ ಮೇಲ್ವರ್ಗದ ಸೇರೆಗಾರ, ಚೋಮ ೫–೬ ವರ್ಷಗಳ ಹಿಂದೆ ಅವರ ಕಾಫೀ ತೋಟದಲ್ಲಿ ದುಡಿಯುವಾಗ ೪–೫ ರೂಪಾಯಿ ಸಾಲಮಾಡಿ ಬಂದಿರುತ್ತಾನೆ. ಆ ವೇಳೆಗೆ ಚೋಮನ ಹೊಲತಿ ಗತಿಸುವುದರಿಂದ ಮತ್ತೆ ಚೋಮ ಕಾಫೀ ತೋಟದ ಕಡೆ ಹೋಗುವುದಿಲ್ಲ, ಅದನ್ನು ನೆಪಮಾಡಿಕೊಂಡೇ, ಚೋಮನನ್ನು ಹುಡುಕಿಕೊಂಡು ಬರುವ ಮನ್ವೇಲ ಸಂಕಪಯ್ಯನಿಂದಲು, ಮಾಡಿದ ಸಾಲ ತೀರಿಸಿಲ್ಲವೆಂದು ಚೋಮನಿಗೆ ಹೇಳಿ ಛೀಮಾರಿ ಹಾಕಿಸುತ್ತಾನೆ, ಸಾಲ ಕೊಟ್ಟವರು ಬಿಟ್ಟರು, ಸಾಕ್ಷಿ ಹೇಳಿದವನು ಬಿಡ ಎಂಬಂತೆ ಸಾಲ ಕೊಟ್ಟಿರುವ ಮೀಂಗೆಲರಿಗಿಂತ, ಚೋಮನಿಗೆ ಮನ್ವೇಲನ ಉಪದ್ರವವೆ ಅತಿಯಾಗಿರುತ್ತದೆ.

ಚೋಮನ ೪–೫ ರೂಪಾಯಿ ಸಾಲಕ್ಕೆ ಮನ್ವೇಲ ಅವನ ಇಬ್ಬರೂ ಮಕ್ಕಳು ಗುರುವ ಮತ್ತು ಚನಿಯರನ್ನು ಕಾಫೀ ತೋಟದ ಕೂಲಿಗಳಾಗಿ ಕರೆದುಕೊಂಡು ಹೋಗುತ್ತಾನೆ, ಅಲ್ಲಿ ತೋಟದ ಕೂಲಿ ಆಳುಗಳ ಸ್ಥಿತಿ ತುಂಬಾ ಶೋಚನಿಯ, ವರ್ಷಕ್ಕೆ ಸಾವಿರಾರು ಬಡವರು ಕೂಲಿ ಆಳಾಗಿ ತೋಟಕ್ಕೆ ಹೋಗುತ್ತಾರೆ, ಹೋಗುವುದು, ದುಡಿಯುವುದು, ತಿರುಗಿ ಊರಿಗೆ ಮರಳುವುದು ಹೋಗುವಾಗ ಇದ್ದಷ್ಟೇ ಶ್ರೀಮಂತಿಕೆ ಬರುವಾಗ ,[೧] ಎಂದು ಕಾದಂಬರಿಕಾರ ತೋಟದ ಕೂಲಿಯಾಳುಗಳ ಬಗ್ಗೆ ಹೇಳುವಾಗ ಅಲ್ಲಿಗೆ ಹೋದ ಕೂಲಿಯ ಆಳುಗಳಲ್ಲಿ ಅವರು ಎಷ್ಟೇ ವರ್ಷ ದುಡಿದರೂ ಹೋಗುವಾಗ ಎಷ್ಟು ಸಾಲ ಮಿಂಗೇಲರ ಬಳಿ ಇರುತಿತ್ತೋ ಬರುವಾಗಲು ಅಷ್ಟೇ ಸಾಲ ಇರುತ್ತಿತ್ತು. ಅಂದರೆ ಅವರು ಹೇಗೆ ಕೂಲಿಯ ಆಳುಗಳನ್ನು ದುಡಿಸಿಕೊಳ್ಳುತ್ತಿದ್ದರು, ಕೂಲಿಗಳು ಮರಳಿ ಊರಿಗೆ ಬರುವಾಗ ಯಾವುದೇ ಪ್ರತಿ ಫಲವಿಲ್ಲದೆ ಬರಿ ಕೈಯಲ್ಲೇ ತಮ್ಮ ಊರಿಗೆ ಹಿಂತಿರುಗಬೇಕಾಗಿತ್ತು.

ಕಾಫೀ ತೋಟಗಳಿಗೆ ಕೂಲಿಗೆಂದು ಹೋಗುವ ಜನಗಳಿಗೆ ಉಳಿದು ಕೊಳ್ಳಲು ಕೊಡುತಿದ್ದುದ್ದು ಕುದುರೆಯ ಲಾಯದಂತ ಮನೆ, ಅಂತದ್ದೆ ಮನೆ ಗುರುವ, ಚೆನಿಯರಿಗೆ, ಎದುರುಗಡೆಯಿಂದಲ್ಲದೆ,

೧. ಶಿವರಾಮ ಕಾರಂತರ ಚೋಮನ ದುಡಿ – ಪು.ಸಂ. ೨೨

ಹಿಂದೆ ಇಲ್ಲವೆ ಎಡಬಲಕ್ಕೆ ಕಿಟಕಿ ಬಾಗಿಲುಗಳ ತಂಟೆಯಿಲ್ಲ, ಎದುರಿಗೆ ಸಾಲು ಸಾಲಾಗಿ ಬಾಗಿಲುಗಳೇ ಹೊರತು, ಕಿಟಕಿಗಳಿರಲಿಲ್ಲ, ಒಂದು ಬಾಗಿಲಿಗೂ ಇನ್ನೊಂದಕ್ಕೂ, ಒಂದು ಬಾಗಿಲನಷ್ಟೇ ಎಡೆ, ಒಂದು ಬಾಗಿಲೆಂದರೆ ಒಂದು ಕೋಣೆ, ಕೋಣೆಯ ಒಳಕ್ಕೆ ಕಾಲು ಇರಿಸಲು ತುಂಬಾ ಭಯ, ಭಕ್ತಿ ಬೇಕು. ವಿನಯದಿಂದ ಕತ್ತನ್ನು, ನಡುವನ್ನು ಬಗ್ಗಿಸಿಕೊಂಡು ಒಳಕ್ಕೆ ಹೋಗದಿದ್ದರೆ, ರುಂಡವೇ ಕಳಚಿ ಬೀಳಬಹುದು [೧] ಎಂದು ಕಾದಂಬರಿಕಾರ ಆ ಕಾಫೀ ತೋಟದ ಕೂಲಿಗಳ ಮನೆಯನ್ನು ಹೇಳುವಾಗ ನಿಜವಾಗಿಯು ಆ ಕಾಫೀ ತೋಟದ ದೊರೆಗಳು ಕೆಳವರ್ಗದ ಜನರನ್ನು ಪ್ರಾಣಿಗಳಂತೆ ದುಡಿಸಿ ಕೊಳ್ಳುತ್ತಾರೆ ಎಂಬುವುದು ತಿಳಿಯುತ್ತದೆ.

ಕಳಸದ ಕಾಫೀ ತೋಟದ ದೊರೆಗಳು ಕೊಡುವ ಕೂಲಿ ತಿಂಗಳೊಂದಕ್ಕೆ ೩ ರೂಪಾಯಿ ಅದರಲ್ಲಿ ಪ್ರತಿವಾರಕ್ಕೆ ಒಂದು ರೂಪಾಯಿಯನ್ನು ಕೂಲಿಗಳಿಗೆ ಕೊಡುತ್ತಿದ್ದರು, ಉಳಿದದ್ದು ಹಿಂದಿನ ಸಾಲಕ್ಕೆ ಸೇರಿಸಿ ಕೊಳ್ಳುತ್ತಿದ್ದರು. ಕೂಲಿಗಳ ಕೈಯಲ್ಲಿ ವಾರವೊಂದಕ್ಕೆ ಕೊಡುತ್ತಿದ್ದ ಒಂದು ರುಪಾಯಿಯಿಂದಲೇ ಅವರ ಜೀವನ ಪ್ರತಿ ಸಲಕರಣೆಯೂ ಆಗಬೇಕು, ಅದರಲ್ಲೂ ವಾರಕ್ಕೆ ಒಂದು ದಿನದಲ್ಲಾದರೂ ಮನಸ್ಸು ತೃಪ್ತಿಯಾಗುವಷ್ಟು ಹೆಂಡದ ಅಭಿಷೇಕವಾಗಬೇಕು, ಹೀಗಾಗಿ ವಾರಕ್ಕೆ ಒಂದು ರುಪಾಯಿ ದೊರೆತರೆ ಅದರಲ್ಲಿ ೮-೧೦ ಆಣೆಕಾಸು ಹೆಂಡದಂಗಡಿ ಲೆಕ್ಕಕ್ಕೆ ಆಗುತ್ತದೆ, ಉಳಿದುದರಲ್ಲೆ ಊಟ, ಉಡುಗೆ, ಮಣ್ಣು, ಮಸಣವೆಲ್ಲವೂ ಪೂರೈಸಬೇಕು. ಒಂದು ರುಪಾಯಿಯಲ್ಲಿ ಊಟಕ್ಕೆ ಸಾಲದೆ ತಿರುಗಿ ಸಾಲ ತೆಗೆಯುವುದು ಉಂಟು ಅಂತು ತಿಂಗಳ ಸಂಬಳದಲ್ಲಿ ಪ್ರತಿ ಕಾಸು ವೆಚ್ಚವೇ ಆಗುತಿತ್ತು.

ಕಾದಂಬರಿಯಲ್ಲಿ ಬರುವ ಈ ಮೇಲಿನ ಮಾತುಗಳು ವಿಶ್ಲೇಷಣೆ ಮಾಡಿದಾಗ ವಾರ ಒಂದಕ್ಕೆ ಅವರು ಕೊಡುವ ಒಂದು ರೂಪಾಯಿ ಅದರಲ್ಲಿ ಈ ಕೂಲಿಯ ಆಳುಗಳಾದ ಚನಿಯ ಮತ್ತು ಗುರುವರು ೮-೧೦ ಆಣೆಯನ್ನು ಹೆಂಡದಂಗಡಿಗೆ ಹಾಕಿ ಉಳಿದ ಹಣದಲ್ಲಿ ವಾರ ಪೂರ್ತಿ ಗಂಜಿಗೆ ಮತ್ತೆ ತಿರುಗಿ ಸಾಲ ಮಾಡುವುದು. ಆಗಾಗಿ ಅವರು ಸಾಲದ ವಿಷವರ್ತುಲದಿಂದ ಬಿಡಿಸಿಕೊಳ್ಳಲಾಗುತ್ತಿರಲಿಲ್ಲ,

---

೧. ಶಿವರಾಮ ಕಾರಂತರ – ಚೋಮನ ದುಡಿ ಪು.ಸಂ. ೪೬

ಇಲ್ಲಿ ಕಾಫೀ ತೋಟದ ದೊರೆಗಳ ಮುಖ್ಯ ಉದ್ದೇಶವೆಂದರೆ ತಾವು ಕೊಡುವ ಸಾಲದ ಹಣ ಆ ವ್ಯಕ್ತಿಗಳು ಬದುಕಿರುವವರೆಗೂ ಎಂದು ತೀರದಂತೆ ನೋಡಿ ಕೊಳ್ಳುತ್ತಿದ್ದರು. ಕೊಡುವುದು ಕಡಿಮೆ ಕೂಲಿ, ಅದರಲ್ಲಿಯೂ ಹೆಂಡಕ್ಕೆ ಮುಕ್ಕಾಲು ಪಾಲು ಉಳಿದ ಹಣದಿಂದ ಕನಿಷ್ಠ ಬದುಕನ್ನು ನಡೆಸಲಾಗದೆ ಕೂಲಿಕಾರರ ಸ್ಥಿತಿ, ತಾವು ಜೀವನ ನಡೆಸುವುದಕ್ಕಾಗಿ ದೊರೆಗಳ ಬಳಿಯಲ್ಲಿ ಪುನಃ ಸಾಲ ಮಾಡುವುದು, ಅದನ್ನೆ ಕಾದಂಬರಿಕಾರ ತೋಟಕ್ಕೆ ಹೋದ ಕೂಲಿಗಳು ಹೋದಷ್ಟೇ ಶ್ರೀಮಂತರಾಗಿ ಹಿಂತಿರುಗುತ್ತಿದ್ದರು ಎಂದು ವ್ಯಂಗ್ಯವಾಗಿ ಹೇಳಿರುವುದು. ಹೋಗುವಾಗ ಸಾಲದ ಹೊರೆಯನ್ನು ತೀರಿಸಲು ತೋಟ ಸೇರುವರು, ಮರಳಿ ಬರುವಾಗ ಅದೇ ಸಾಲದ ಹೊರೆಯನ್ನು ಹೊತ್ತು ಬರುವರು. ಅಂತು ತಿಂಗಳ ಸಂಬಳದಲ್ಲಿ ಪ್ರತಿಕಾಸು ವೆಚ್ಚವೆ ಆಗುತಿತ್ತು". ಎಂಬ ಮಾತಿನಲ್ಲೆ ಮೇಲ್ವರ್ಗದ ಮಿಂಗೇಲ ದೊರೆಗಳು ಕೆಳವರ್ಗದ ಚೋಮ ಮತ್ತು ಅವನ ಮಕ್ಕಳನ್ನು ಜೊತೆಗೆ ಉಳಿದ ಕೂಲಿಗಳನ್ನು ಹೇಗೆ ತಮ್ಮ ಕಪಿಮುಷ್ಠಿಯಲ್ಲಿ ಹಿಡಿದು ಹಿಂಸಿಸುತ್ತಿದ್ದರು ಎಂಬುವುದರ ಅರಿವಾಗುತ್ತದೆ,

ಇಲ್ಲಿ ಮಿಂಗೇಲ ದೊರೆಗಳು ಕೊಡುವ ಪ್ರತಿ ಕಾಸು ವೆಚ್ಚವಾಗುತ್ತಿತ್ತು, ಅದರಿಂದ ಕೂಲಿಗಳಿಗೆ ಒಂದು ಆಣೆಯ ಆದಾಯವಿಲ್ಲ. ಪ್ರತಿದಿನ ಕೂಲಿಯನ್ನು ತಪ್ಪದೇ ಮಾಡಿದರೂ ಸಹ ಅವರು ಒಂದು ರುಪಾಯಿ ಸಾಲವನ್ನು ತೀರಿಸಲು ಆಗುತ್ತಿರಲಿಲ್ಲ. ಒಂದು ರುಪಾಯಿಯ ಆದಾಯವು ಇರುತ್ತಿರಲಿಲ್ಲ, ಆದರೆ ದೊರೆಗಳ ಕೆಲಸ ಮಾತ್ರ ಸುಸಂಬದ್ಧವಾಗಿ ನಡೆದು ಅವರು ಪ್ರತಿವರ್ಷ ಆದಾಯಗಳಿಸಿಕೊಂಡು ದೊರೆಗಳು ಎಂಬ ಪಟ್ಟವನ್ನು ಭದ್ರಪಡಿಸಿಕೊಳ್ಳುತ್ತಿದ್ದರು. ಇತ್ತ ಕೆಳವರ್ಗದ ಚೋಮನಂತಹ ಕೂಲಿಗಳಿಗೆ ಜೀವನದಲ್ಲಿ ಏನು ಆಸೆಗಳೆ ಇಲ್ಲದೆ, ಕನಸ್ಸುಗಳನ್ನೇ ಕಾಣದ ಬಡಜೀವಗಳಾಗಿ ದುಡಿಯುವುದು, ಕುಡಿಯುವುದು. ಇದಕ್ಕಾಗಿಯೇ ಜನ್ಮತಳೆದು ಬಂದಿದ್ದಾರೇನೋ? ಎಂಬಂತೆ ಬದುಕನ್ನು ಸವೆಸುತ್ತಿರುತ್ತಾರೆ.

ಇದು ಒಂದು ರೀತಿಯ ಮೇಲ್ವರ್ಗ ಮತ್ತು ಕೆಳವರ್ಗದವರ ನಡುವಿನ ಘರ್ಷಣೆಯಾದರೆ ಕಾದಂಬರಿಯಲ್ಲಿ ಬರುವ ಚೋಮನ ಮಗಳು ಬೆಳ್ಳಿಯದು ಮತ್ತೊಂದು ಬಗೆಯ ಹೃದಯ ಕಲಕುವ ಹೋರಾಟ ಈ ಮೇಲ್ವರ್ಗದವರ ವಿರುದ್ಧ. ಇಲ್ಲಿ ಘರ್ಷಣೆ ಎಂದರೆ ಹಿಂಸಾತ್ಮಕವಾದ, ಏರುಧ್ವನಿಯ ಹೋರಾಟವಲ್ಲದಿದ್ದರೂ ಮೌನವಾಗಿಯೇ ಕಾದಂಬರಿಯ ಅಂತ್ಯದವರೆಗೂ ಪ್ರತಿಭಟಿಸುವುದನ್ನು ಬೆಳ್ಳಿಯ ಪಾತ್ರದ ಮೂಲಕ ಕಾಣಬಹುದು.

ಬೆಳ್ಳಿ ಚೋಮನ ಒಬ್ಬಳೆ ಮಗಳು ತಾಯಿ ಇಲ್ಲದ ಹುಡುಗಿ, ಆದರೂ ತಾಯಿಯ ಎಲ್ಲ ಜವಾಬ್ದಾರಿಯನ್ನು ಅರಿತು ಚೋಮನ ಕುಟುಂಬದ ಹೆಚ್ಚು ಜವಾಬ್ದಾರಿಯನ್ನು ಹೊತ್ತವಳು. ಮನೆಯಲ್ಲಿ ತಂದೆ ಮತ್ತು ಅಣ್ಣ ತಮ್ಮಂದಿರ ಕಷ್ಟ ಸುಖಗಳಲ್ಲಿ ಭಾಗಿಯಾಗುತ್ತಾ ತಮ್ಮ ಒಡೆಯ ಸಂಕಪ್ಪಯ್ಯನ ಮನೆವಾಳ್ತೆಯನ್ನು ಮಾಡುತ್ತಿರುತ್ತಾಳೆ. ತನ್ನ ಅಣ್ಣಂದಿರು ಇಲ್ಲದಿರುವಾಗ ಕಾಡಿಗೆ ಹೋಗಿ ದನಗಳಿಗೆ ಸೊಪ್ಪು ತರುವುದು, ತಂದೆ ಕುಡಿದು ಬಂದು ದುಡಿ ಬಾರಿಸುವಾಗ ಅವನನ್ನು ಸಮಾಧಾನಪಡಿಸುವ ಸಂಯಮಿಯಾದರೂ, ಸಮಾಜದ ಮೇಲ್ವರ್ಗದವರಾದ ಮನ್ವೇಲ ಮತ್ತು ಮಿಂಗೇಲರಂತಹ ನೀಚ, ದುಷ್ಟ ವ್ಯಕ್ತಿಗಳ ದೌರ್ಜನ್ಯಕ್ಕೆ ಒಳಗಾಗುವುದು ವಿಪರ್ಯಾಸದ ಸಂಗತಿ. ಅದು ಬೆಳ್ಳಿಯ ವಯೋ ಸಹಜವಾದ ಒಂದು ಕಾರಣ ಎಂದರೂ ಸಹ, ಮಿಂಗೇಲ ದೊರೆಗಳ ಮತ್ತು ಮನ್ವೇಲರ ಕಾಮ ತೃಷೆಗೆ ಬಲಿಯಾಗಬೇಕಾಗಿ ಬರುವುದು ಬಹುಶಃ ಕೆಳವರ್ಗದ ಹೆಣ್ಣುಮಕ್ಕಳ ಮೇಲೆ ನಡೆಯುವ ದೌರ್ಜನ್ಯ, ದುರಾಚಾರದ ಪ್ರತಿನಿಧಿ ಬೆಳ್ಳಿಯಾಗುತ್ತಾಳೆ. ಅದೇ ಬೆಳ್ಳಿ ಮೇಲ್ವರ್ಗದ ಹೆಣ್ಣು ಮಗಳಾಗಿದ್ದರೆ ಅಂತಹ ಸನ್ನಿವೇಶ ಒದಗಿ ಬರುತ್ತಿರಲಿಲ್ಲ. ಬಂದರೂ ಬೆಳ್ಳಿ ಅದನ್ನು ಪ್ರತಿಭಟಿಸುತ್ತಿದ್ದಳು, ಆದರೆ ಪ್ರಸ್ತುತ ಕಾದಂಬರಿಯಲ್ಲಿ ಆಕೆ ತನ್ನ ವರ್ಗದ ಕಾರಣದಿಂದ ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಅಸಹಾಯಕಳಾಗಿ ನಿಲ್ಲುತ್ತಾಳೆ.

ಬೆಳ್ಳಿ ತನ್ನ ಧಣಿಗಳಾದ ಸಂಕಪಯ್ಯನವರ ಮೂಲದ ಹೊಲೆಯರಾಗಿರುವುದರಿಂದ ಅವರಲ್ಲಿ ಅನಿವಾರ್ಯವಾಗಿ ತನ್ನ ವಿಧೇಯತೆಯನ್ನು ತೋರುವ ಮೂಲಕ ಅವರ ಮನೆಯ ಎಲ್ಲಾ ಚಾಕರಿಯನ್ನು ಮಾಡಬೇಕಾಗುತ್ತದೆ. ಸಂಕಪ್ಪಯ್ಯ ತನ್ನ ತಂದೆಗೆ ಭೂಮಿಯನ್ನು ಕೊಡಲು ನಿರಾಕರಿಸಿದಾಗ ಕುಪಿತನಾದ ಚೋಮನಿಗೆ ಈ ರೀತಿ ಹೇಳುತ್ತಾಳೆ, ಅಪ್ಪಾ, ನಾವು ನಮ್ಮ ಯೋಗ್ಯತೆಗೂ ಮೀರಿ ಆಸೆ ಮಾಡಿದರೆ ನಡೆದೀತೆ? ಬೇಸಾಯ ಮಾಡಬೇಕಾದರೆ, ಬ್ರಾಹ್ಮಣರಾಗಿಯೋ, ಬಂಟರಾಗಿಯೋ, ಗೌಡರಾಗಿಯೋ ಹುಟ್ಟಬೇಡವೇ? ಹಾಳಾದ ಹೊಲೆಯರಾಗಿ ಹುಟ್ಟಿ ಬೇಸಾಯ ಮಾಡಬೇಕು ಅಂದರೆ ಆಗುತ್ತದೆಯೇ, ಧನಿಗಳಾದರೂ ಏನು ಮಾಡುತ್ತಾರೆ, ಊರಿನ ಕಟ್ಟು ಕಟ್ಟಳೆಯಿಲ್ಲವೇ! ಅದನ್ನವರು ಮುರಿದರೆ ಅವರಿಗೆ ಯಾರೇನೆಂದಾರು? ಅವರು ಸುದ್ದಿ ಬಿಡು–ನಾಳೆ ನೀನೇ ಬೇಸಾಯಗಾರನೆಂದು ತಿಳಿ, ಆಗ ನಮ್ಮ ಜಾತಿಯವರೇ ಎಷ್ಟು ಸಿಟ್ಟಾಗಲಿಕ್ಕಿಲ್ಲ! ಅಲ್ಲದೇ ನಮಗೀಗ ಏನು ಕಡಿಮೆಯಾಗಿದೆ? ಎರಡು ಎತ್ತುಗಳಿವೆ, ಇನ್ನಾರಿಗೆ ಎತ್ತಿನ ಜೋಡಿಯಿದೆ? ಉಳುವುದು, ಕೊಯ್ಯುವುದು ನಮಗೇ ತಪ್ಪಿದ್ದಲ್ಲಾ... ನಿನಗೆ ಇಷ್ಟಲ್ಲದೆ ಇನ್ನೇನಾಗಬೇಕು? [೧] ಎಂದಳು.

೧. ಶಿವರಾಮ ಕಾರಂತ – ಚೋಮನ ದುಡಿ ಪು.ಸಂ

ಬೆಳ್ಳಿಯ ಮೇಲಿನ ಮಾತುಗಳಿಂದ ಕೆಳವರ್ಗದ ಚೋಮನಂತವರು ಸಮಾಜದಲ್ಲಿ ಯಾವ ಯಾವ ವರ್ಗಗಳಿಂದ ಹೋರಾಟವನ್ನು ಎದುರಿಸಬೇಕಿತ್ತು ಎಂಬುವುದರ ಅರಿವಾಗುತ್ತದೆ.

ಇಲ್ಲಿ ಬೆಳ್ಳಿ ಕೆಳವರ್ಗದವಳಾದರೂ ಬೇಸಾಯ ಮಾಡುವುದನ್ನು ಬೇಡವೆಂದು ಪ್ರತಿಭಟಿಸಿದಂತೆ ಕಾಣುತ್ತದೆ, ಅಂದರೆ ಬೇಸಾಯವೆಲ್ಲ ನಮಗಿಂತ ಮೇಲ್ವರ್ಗದವರ ಕಸುಬು ಅವರ ಕಸುಬನ್ನು ನಾವು ಯಾಕೆ ಮಾಡಬೇಕು? ಅವರೇನು ನಮ ಕಸುಬನ್ನು ಮಾಡಲು ಬರುವರೆ ಹಾಗಾಗಿ ನಾವು ನಮ್ಮ ಕಸುಬಿನಲ್ಲೆ ತೃಪ್ತಿಯನ್ನು ಪಡೆಯೋಣ, ಮೇಲ್ವರ್ಗದವರದು ಶ್ರೇಷ್ಟ ಕಸುಬಾಗಿದ್ದರೂ ಅದು ನಮಗೆ ನಿಕೃಷ್ಟವೇ, ನಾವು ಮಾಡುವುದು ಕೀಳು ಕಸುಬಾಗಿದ್ದರು, ಅದೇ ನಮಗೆ ಶ್ರೇಷ್ಟವಾದದ್ದು. ಎಂದು ಹೇಳುವ ಮೂಲಕ ಬೆಳ್ಳಿ ಎಲ್ಲೋ ಒಂದು ಕಡೆ ತನ್ನ ವರ್ಗವನ್ನು ಬಿಟ್ಟು ಕೊಡಲು ಅಥವಾ ಮೇಲ್ವರ್ಗವನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಾಳೆ. ಈ ಮೂಲಕ ಬೆಳ್ಳಿ ಕೆಳವರ್ಗದವಳಾದರೂ ತನ್ನ ವರ್ಗದಲ್ಲೆ ಉಳಿಯುವ, ಅದರಲ್ಲೆ ತೃಪ್ತಿಯನ್ನು ಕಾಣುವ ಅಂತಿಮವಾಗಿ ತನ್ನ ವರ್ಗವನ್ನು ಉಳಿಸಿಕೊಳ್ಳಲು ಹೋರಾಟವನ್ನು ಮಾಡುತ್ತಾಳೆ ಆದರೆ ಗುರುವನ ಮತಾಂತರ ಮತ್ತು ಮನ್ವೇಲರ ಸಂಬಂಧದಿಂದ ತಾನು ಗುರುವನಂತೆ ಕ್ರಿಸ್ತಿಯನ್ನಾಗಿ, ಮನ್ವೇಲರನ್ನು ಮದುವೆಯಾಗಿ ಸುಖವಾಗಿರಬಾರದು ಎಂದು ಯೋಚಿಸುವ ಮೂಲಕ ತನ್ನ ಹೋರಾಟಕ್ಕೆ ಅಂತ್ಯ ಹಾಡುತ್ತಾಳೆ.

ಕಾದಂಬರಿಯಲ್ಲಿ ಚೋಮನ ಮತ್ತೊಬ್ಬ ಮಗ ಗುರುವ ಕ್ರಿಸ್ತಿಯನ್ ಜಾತಿಯ ಮೇರಿಯನ್ನು ಮದುವೆಯಾಗುವ ಮೂಲಕ ತನ್ನ ಕೆಳವರ್ಗವನ್ನು ತ್ಯಜಿಸುವುದು ಅವನ ಉದ್ದೇಶವಾಗಿರುತ್ತದೆ. ಕ್ರಿಸ್ತಿಯನ್ ಧರ್ಮಕ್ಕೆ ಸೇರಿಕೊಂಡರೆ ಅಲ್ಲಿ ತಾನು ಬೇಸಾಯಗಾರನಾಗಬಹುದು, ಬೇಸಾಯ ಮಾಡುವುದರಿಂದ ತನ್ನ ವೃತ್ತಿಯಲ್ಲಿ ಬದಲಾವಣೆಯಾಗುತ್ತದೆ, ವೃತ್ತಿ ಬದಲಾವಣೆಯಿಂದ ಆರ್ಥಿಕ ಅಂತಸ್ತು, ಸಮಾಜದಲ್ಲಿ ಗೌರವವು ಬದಲಾಗುತ್ತದೆ. ಹೀಗೆ ಗುರುವ ಚೋಮನಿಗಿಂತ ಸ್ವಲ್ಪ ಭಿನ್ನವಾಗಿ ಯೋಚಿಸಿ ತನ್ನ ನಿರ್ಧಾರವನ್ನು ಕೈಗೊಂಡಂತಿದೆ.

ಇಲ್ಲಿ ಗುರುವನ ನಿರ್ಧಾರವನ್ನು ಸೂಕ್ಷ್ಮವಾಗಿ ಗಮನಿಸಿದರೆ ಗುರುವ ಮೇರಿಯನ್ನು ಇಷ್ಟಪಟ್ಟು ಮದುವೆಯಾಗುತ್ತಾನೆ, ಮೇರಿಗಾಗಿ ಕ್ರಿಸ್ತಿಯನ್ ಆಗಲು ಬಯಸಿದರೂ ಅಲ್ಲಿ ಮತ್ತೊಂದು ಅಂಶವನ್ನು ಗಮನಿಸಬೇಕು, ಗುರುವ ಕೆಳವರ್ಗದ ಹೊಲೆಯನಾಗಿ ಹುಟ್ಟಿ ಅನುಭವಿಸಿದ ಅಪಮಾನ, ನೋವು,

೧. ಶಿವರಾಮ ಕಾರಂತ – ಚೋಮನ ದುಡಿ ಪು.ಸಂ ೪೪

ನಿಂದನೆಗಳಿಗೆ ಪ್ರತೀಕಾರ ತೀರಿಸಿಕೊಳ್ಳಲು ಸಮಯ ಕಾಯುತ್ತಿದ್ದ, ಅದಕ್ಕೆ ಸಿಕ್ಕ ಸುಸಂಧಿ ಮೇರಿಯನ್ನು ಮದುವೆಯಾಗಿ ತಾನು ಕ್ರಿಸ್ತಿಯನ್ ಆಗುವುದು, ಆ ಮೂಲಕ ತನ್ನ ವರ್ಗವನ್ನು ತಿರಸ್ಕರಿಸುವುದು ಅವನ ಉದ್ದೇಶವಾಗಿತ್ತು, ಆದ್ದರಿಂದ ಆತ ಕ್ರಿಸ್ತಿಯನ್ ಧರ್ಮಕ್ಕೆ ಮತಾಂತರಗೊಳ್ಳಲು ವರ್ಗ ಸಮಸ್ಯೆ ಇಲ್ಲಿ ಮುಖ್ಯ ಕಾರಣವೆಂದು ಗಮನಿಸಬೇಕು.

ಚೋಮನ ದುಡಿ ಕಾದಂಬರಿಯಲ್ಲಿ ವರ್ಗದ ಕಾರಣದಿಂದ ನಿರ್ಲಕ್ಷ್ಯಕ್ಕೆ ಒಳಗಾದ ಮತ್ತೊಂದು ಸನ್ನಿವೇಶವೆಂದರೆ ಪೂವಮ್ಮ ಮತ್ತು ಆಕೆಯ ಮೊಮ್ಮಗಳು. ಕಳಸದ ಕಾಫೀ ತೋಟಕ್ಕೆ ಕೂಲಿಗೆ ಬರುವಾಗ ಪೂವಮ್ಮನ ಎಂಟು ವರ್ಷದ ಮೊಮ್ಮಗಳು ಜ್ವರದಿಂದ ನರಳುತಿದ್ದು ಅದರಲ್ಲಿಯೇ ನಾಲ್ಕು ದಿನದಿಂದ ಕಾಲ್ನಡಿಗೆಯ ಪ್ರಯಾಣಮಾಡಿ ಮೇಲೇಳದೆ ಮಲಗಿದೆ ಅಂದರೆ ಶಾಶ್ವತವಾಗಿಯೇ ಮಲಗಿ ಬಿಡುತ್ತದೆ. ಪೂವಮ್ಮ ಇದ್ದ ಒಬ್ಬ ಮಗಳನ್ನು ಕಳೆದುಕೊಂಡು, ಸತ್ತು ಹೋದ ಮಗಳು ಬಿಟ್ಟ ಮೊಮ್ಮಗಳಲ್ಲೆ ತನ್ನ ಮಗಳನ್ನು ನೆನೆಸಿಕೊಂಡು ಬದುಕುತ್ತಿದ್ದಳು. ಆದರೆ ಈಗ ಅದು ವಿಧಿವಶವಾದಾಗ ಪೂವಮ್ಮನ ದುಃಖಕ್ಕೆ ಮಿತಿಯೇ ಇಲ್ಲ, ಆದರೆ ಪೂವಮ್ಮ ಅಷ್ಟೊಂದು ದುಃಖಿಸಿದ್ದು, ತೋಟದ ಕೆಲಸಕ್ಕೆ ಬರುವಾಗ ಮೊಮ್ಮಗಳನ್ನು ಕಳೆದುಕೊಂಡದ್ದು ಒಂದು ಸಹ ತೋಟದ ದೊರೆಗಳ ಮತ್ತು ಸೇರೆಗಾರ ಮನ್ವೇಲರ ಬಾಯಲ್ಲಿ ಸ್ಥಾನವನ್ನು ಪಡೆಯುವುದೇ ಇಲ್ಲ .೧ ಎಂದು ಕಾದಂಬರಿಕಾರ ಹೇಳುವಾಗ ಒಂದು ಜೀವದ ಸಾವು ಮೇಲ್ವರ್ಗದವರಿಗೆ ಅಲಕ್ಷಿತ ಸಂಗತಿಯಾಗಿ ತೋರುತ್ತದೆ. ಅದೇ ಮೇಲ್ವರ್ಗದವರ ಮನೆಯ ಒಂದು ಪ್ರಾಣಿಸತ್ತರು ಅದನ್ನು ಭಾಜಭಜಂತ್ರಿಯ ಮೆರವಣಿಗೆಯ ಮೂಲಕ ಮೆರೆಸುವ ಮೇಲ್ವರ್ಗದ ಜನ ಕೆಳವರ್ಗದ ಮನುಷ್ಯರಿಗೆ ಆ ಮಾನವೀಯತೆಯನ್ನು ತೋರಿಸುವುದಿಲ್ಲ.
ಹೀಗೆ ಚೋಮನ ದುಡಿ ಕಾದಂಬರಿಯಲ್ಲಿ ವರ್ಗ ಸಂಘರ್ಷ ಎನ್ನುವ ವಿಷಯದ ಹಿನ್ನೆಲೆಯಲ್ಲಿ ನೋಡಿದಾಗ ಇಡೀ ಕಾದಂಬರಿಯಲ್ಲಿ ಬರುವ ಎಲ್ಲಾ ಪಾತ್ರಗಳು ಒಂದಲ್ಲ ಒಂದು ರೀತಿಯ ಸಂಘರ್ಷವನ್ನು ಎದುರಿಸಿದ ಪಾತ್ರಗಳೇ, ಸಂಕಪ್ಪಯ್ಯನ ಮೇಲ್ವರ್ಗದವರು ತನ್ನ ವರ್ಗದ ಘನತೆ,

---

೧. ಶಿವರಾಮ ಕಾರಂತ – ಚೋಮನ ದುಡಿ ಪು.ಸಂ ೩೪

ಗಾಂಭೀರ್ಯಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದರೆ ಗುರುವನಂತ ಕೆಳವರ್ಗದ ಪಾತ್ರಗಳು ತನ್ನ ವರ್ಗವನ್ನು ಉಲ್ಲಂಘಿಸುವ ಮೂಲಕ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತವೆ.

ಕಾದಂಬರಿಯ ನಾಯಕನಾದ ಚೋಮ ತನ್ನ ವರ್ಗದ ಕಾರಣದಿಂದ ಎಷ್ಟೇ ಅಪಮಾನ, ನೋವು, ಕಷ್ಟಗಳನ್ನು ಅನುಭವಿಸಿದರೂ ಸಹ ಆತ ಧೃತಿಗೆಡದೆ ತನ್ನ ವರ್ಗದಲ್ಲಿ ಉಳಿಯಲು ಹೋರಾಟವನ್ನು ಮಾಡುತ್ತಾನೆ, ಅದನ್ನು ಅವನ ಮಾತಿನಲ್ಲೇ ಹೇಳುವುದಾದರೆ ಚೋಮ, ಮೀಸೆ ಹಣ್ಣಾಗುವ ತನಕ ನನ್ನನ್ನು ನಂಬಿ ಬಂದು, ಈಗ ಸಾಯುವ ಮೂರು ದಿನಕ್ಕೆ ಮುಂಚೆ ನನ್ನನ್ನು ಬಿಟ್ಟು ಪಾದ್ರಿಯ ಹಿಂದೆ ಓಡುತ್ತಿಯೋ? ಪಾದ್ರಿ ಮತದವರು ಸಾಯುವುದಿಲ್ಲವೆ?, ಕಷ್ಟ, ಸುಖ ಒಂದಲ್ಲ ಒಂದು ರೀತಿಯಿಂದ ಕ್ರಿಸ್ತಿಯರಿಗೂ qRz bR®t° gµ?”[೧] ಎಂದು ಚೋಮ ತನ್ನ ಮನಸ್ಸಿನಲ್ಲೇ ಹೇಳಿಕೊಳ್ಳುವ ಮೇಲಿನ ಮಾತುಗಳು ಚೋಮನಿಗೆ ಜೀವನದಲ್ಲಿ ಇನ್ನಷ್ಟು ಕಷ್ಟ ಸಮಸ್ಯೆಗಳು ಬಂದರೂ ಆತ ತನ್ನ ವರ್ಗದ ಪರವಾಗಿಯೇ ಅವನು ಚಿಂತಿಸುತ್ತಾನೆ.

ಕಾಂದಬರಿಯ ವರ್ಗ ಸಂಘರ್ಷದ ಸಂಕೇತಗಳಾದ ಮಿಂಗೇಲ ದೊರೆಗಳು ಮತ್ತು ಮನ್ವೇಲರು ತಮ್ಮ ವರ್ಗವನ್ನು ಮುಂದುವರೆಸಿಕೊಂಡು ಹೋಗುವ ದೂತರಂತೆಯೇ ವರ್ತಿಸುತ್ತಾರೆಯೇ ಹೊರತು ಕೆಳವರ್ಗದವರನ್ನು ಮೇಲೆತ್ತುವ ಅವರನ್ನು ಆರ್ಥಿಕವಾಗಿ ಪ್ರಬಲರಾಗಿಸದೆ, ಮತ್ತಷ್ಟು ಶೋಷಣೆ ಮಾಡಿ ಅವರು ಕೆಳವರ್ಗದ ಬಡ ಕೂಲಿಗಳಾಗಿರುವಂತೆ ನೋಡಿಕೊಳ್ಳುತ್ತಾರೆ.

ಹೀಗೆ ಕಾದಂಬರಿಯಲ್ಲಿ ವರ್ಗ ಸಂಘರ್ಷದ ಅಂಶಗಳು ಗಿಡದಲ್ಲಿ ಬಿಟ್ಟ ಪುಷ್ಪದಂತೆ ಕಣ್ಣಿಗೆ ಕಾಣಿಸದೆ, ಪುಷ್ಪದಲ್ಲಿ ಅಡಗಿರುವ ಪರಿಮಳದಂತೆ ಕಣ್ಣಿಗೆ ಕಾಣದಿದ್ದರೂ ನಾಸಿಕಕ್ಕೆ ಸಿಗುವ ಸುವಾಸನೆಯಂತೆ ಕಾದಂಬರಿಯಲ್ಲಿ ಅತಿ ಸೂಕ್ಷ್ಮವಾಗಿ ಚಿತ್ರಿಸಲ್ಪಟ್ಟಿದೆ, ರಾಗೌ, ಅವರು ಚೋಮನ ದುಡಿಯ ಬಗ್ಗೆ ಹೇಳುತ್ತಾ ಈ ಕಾದಂಬರಿಯಲ್ಲಿ ಜಾತಿ ಮತ್ತು ವರ್ಗ ಸಂಘರ್ಷಗಳೆರಡೂ ಮಿಳಿತವಾಗಿರುವುದು ಕಂಡು ಬರುತ್ತದೆ. ಹೇಗೆಂದರೆ ಚೋಮ ಜಾತಿ ಸಂಘರ್ಷಕ್ಕೆ

---

೧. ಶಿವರಾಮ ಕಾರಂತ – ಚೋಮನ ದುಡಿ – ಪು.ಸಂ ೧೦೧

ಸಂಕೇತವಾದರೆ, ಇಲ್ಲಿನ ಸಂಕಪ್ಪಯ್ಯ ವರ್ಗ ಸಂಘರ್ಷಕ್ಕೆ ಕಾರಣವಾಗಿದ್ದಾನೆ, ಆದ್ದರಿಂದ ಈ ಕೃತಿ ಜಾತಿ ಮತ್ತು ವರ್ಗ ಸಂಘರ್ಷವನ್ನು ಸೂಕ್ಷ್ಮವಾಗಿ ತನ್ನ ಕಲೆಯ ಒಡಲಲ್ಲಿ A 1ÆT ›h ±Ôµ² °m uµ"°. ಎಂದಿದ್ದಾರೆ. ಇದಿಷ್ಟು ನನ್ನ ಅರಿವಿಗೆ ಹೊಳೆದ ಚೋಮನ ದುಡಿಯ ವರ್ಗ ಸಂಘರ್ಷದ ಅಂಶಗಳು, ಇನ್ನು ಮುಂದೆ ಭಾರತೀಪುರ ಕಾದಂಬರಿಯಲ್ಲಿ ವರ್ಗ ಸಂಘರ್ಷದ ಪರಿಕಲ್ಪನೆ ಹೇಗೆ ಚಿತ್ರಿತವಾಗಿದೆ ಎಂಬುವುದನ್ನು ವಿಶ್ಲೇಷಣೆ ಮಾಡುವುದು ಅವಶ್ಯಕವಾಗಿದೆ.

ಭಾರತಕ್ಕೆ ಭವ್ಯ ಪರಂಪರೆಯಿದೆ, ಆ ಪರಂಪರೆಯ ಎಲ್ಲವೂ ಅತ್ಯುತ್ತಮ, ಅವೆಲ್ಲವನ್ನು ಈಗ ಪುನರುತ್ಥಾನ ಮಾಡಬೇಕು ಎನ್ನುವ ಭಾವುಕ ಹಿನ್ನೋಟದ ಪೌರತ್ವವಾದ ಒಂದು ಕಡೆ, ಭಾರತ ಇಡೀ ಭೂತ ಕಾಲವನ್ನು ಒಂದು ಹೊರೆಯೆಂಬಂತೆ ತಿರಸ್ಕರಿಸಬೇಕೆಂಬ ಸಂಕುಚಿತ ವೈಚಾರಿಕ–ವೈಜ್ಞಾನಿಕ ಯೋಚನೆಯ ಪಶ್ಚಿಮದ ಆಧುನಿಕ ಮನಸ್ಸು ಇನ್ನೊಂದು ಕಡೆ. ಸಂಪ್ರಾದಾಯಿಕ ಭಾರತೀಯ ಬದುಕಿಗೆ ಜ್ಞಾನವಿದೆ. ಆದರೆ ಅದು ಹಿಮ್ಮುಖದ ನೋಟ ಉಳ್ಳದ್ದು, ವೈಚಾರಿಕ–ವೈಜ್ಞಾನಿಕ ಪಶ್ಚಿಮ ಚೈತನ್ಯಶಾಲಿ ಆದರೆ ಆತ್ಮರತ ಹಾಗೂ ಆತ್ಮ ನಿಷೇಧವೇ ಇದರ ಉಪಬೋಗದಿಂದ ಕೂಡಿದ್ದು, ಪೌರಸ್ತ್ಯ ಪುನರುತ್ಥಾನವದಿ ಚಿಂತನೆಯಿರಲಿ, ಆಧುನಿಕ ಪಶ್ಚಿಮವಾದಿಯಲ್ಲು ಇವೆರೆಡು ಅಂತಿಮವಾಗಿ ನಮ್ಮನ್ನು ಸತ್ಯದ ದರ್ಶನದತ್ತ ಕೊಂಡೊಯ್ಯಲಾರವು. ಇವೆರಡೂ ಸೃಜನಶೀಲ ಅನ್ವೇಷಣೆಗೆ ಪ್ರತಿಕೂಲವಾದಂತಾವು.

ಹೀಗಾಗಿ ಸಂಪ್ರದಾಯವಾದಿಯ ಕರ್ಮಠತನದ ಹಠಮಾರಿತನವಾಗಲಿ, ಪರಂಪರೆಯ ಅರಿವಿಲ್ಲದೆ ಆಧುನೀಕತೆಯ ಸಾಚಾತನವಾಗಲಿ ತಿರಸ್ಕಾರ ಯೋಗ್ಯ ಎಂದು ನಂಬುವ ಯು.ಆರ್. ಅನಂತಮೂರ್ತಿ ನಮ್ಮ ಕಾಲದ ಶ್ರೇಷ್ಟ ಸೃಜನಶೀಲ ಚಿಂತಕ; ಸಾಮ್ರಾಜ್ಯಷಾಹಿ ಅನುಭವದಿಂದ, ಆಘಾತದಿಂದ ತತ್ತರಿಸಿದ ಭಾರತೀಯರ ಮನಸನ್ನು ಸ್ವತಂತ್ರಚಿಂತನೆಗೆ ಒಡ್ಡಿಕೊಳ್ಳಲು ಹದಗೊಳಿಸಿಕೊಳ್ಳುತ್ತಿರುವ ಪ್ರತಿಭಾವಂತ ಲೇಖಕ. ತಮ್ಮ ಕೃತಿಗಳ ಮೂಲಕ ನಮ್ಮನ್ನು ನಾವೇ ಒಳಹೊಕ್ಕು ನೋಡುವಂತೆ ಮಾಡುವ ಸಮಕಾಲಿನ ವಾಸ್ತವ ದ್ವಂಧ್ವಗಳಿಗೆ ನಮ್ಮನ್ನು ಆಹ್ವಾನಿಸುವ ಲೇಖಕ. ಏಕಕಾಲದಲ್ಲಿ ಅನಂತ ಮೂರ್ತಿಯವರು ಒಳಗಿನವರಂತೆ ಆಪ್ತವಾಗಿಯೂ, ಹೊರಗಿನವರಂತೆ ಸಮಕಾಲೀನ ಸಮಸ್ಯೆಗಳ ಬಗ್ಗೆ ಚಿಂತಿಸುವ ಕನ್ನಡ ಸಾಹಿತ್ಯ ಕಂಡ ವಿಶಿಷ್ಟ ಪ್ರತಿಭೆ. ಇಂತಹ ಅನಂತಮೂರ್ತಿಯವರು ಬರೆದ ಎರಡನೆ ಕಾದಂಬರಿ ಭಾರತೀಪುರ ರಚನೆಯಾದದ್ದು ೧೯೭೫ರಲ್ಲಿ, ಈ ಕಾದಂಬರಿ ಮುಖ್ಯವಾಗಿ ದಲಿತರ ಜೀವನವನ್ನು ಆಧರಾವಾಗಿ ಇಟ್ಟುಕೊಂಡು ಬರೆದ ಕಾದಂಬರಿ ಆದರೂ,

೧. ಡಾ। ರಾಗೌ –ಪಶ್ಚಿ ಸಂಪದ ಪು. ಸಂ ೧೧೫

ಬ್ರಾಹ್ಮಣರ ಜೀವನ ಚಿತ್ರಣ ಕಾದಂಬರಿಯಲ್ಲಿ ನೇರವಾಗಿ ಚಿತ್ರಿಸಲಾಗಿದೆ. ದಲಿತರ ಜೀವನ ಚಿತ್ರಣ ಕಾದಂಬರಿಯ ನಾಯಕ ಜಗನ್ನಾಥನ ಮೂಲಕ ಚಿತ್ರಣಗೊಳ್ಳುತ್ತದೆ.

ಜಗನ್ನಾಥ ಮೇಲ್ವರ್ಗಕ್ಕೆ ಸೇರಿದ ಜಮೀನ್ದಾರ ಬ್ರಾಹ್ಮಣ ಮನೆತನದವನು, ಜೊತೆಗೆ ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಮುಗಿಸಿ ಪಾಶ್ಯಾತ್ಯಾರ ವಿಚಾರಧಾರೆಯಿಂದ ಪ್ರಭಾವಿತನಾದ ಹೊಸವಿಚಾರ, ಹೊಸ ಆಚಾರಗಳನ್ನು ಭಾರತೀಪುರದಲ್ಲಿ ಬಿತ್ತಬೇಕೆಂಬ ಕನಸ್ಸನ್ನು ಹೊತ್ತು ಬಂದ ವ್ಯಕ್ತಿ. ಬ್ರಾಹ್ಮಣಕುಲದಲ್ಲಿ ಜನಿಸಿದರು ಅಲ್ಲಿನ ಸಂಪ್ರದಾಯ ಬದ್ಧ ಆಚಾರಗಳನ್ನು ವಿರೋಧಿಸುತ್ತಾನೆ, ಜಗನ್ನಾಥ ಭಾರತೀಯ ಸಂಸ್ಕೃತಿ ಹಾಗೂ ಪಾಶ್ಯಾತ್ಯ ಸಂಸ್ಕೃತಿಗಳೆರಡನ್ನು ಅರಗಿಸಿಕೊಂಡ ವ್ಯಕ್ತಿ. ಪಾಶ್ಯಾತ್ಯ ರಾಷ್ಟ್ರದಲ್ಲಿ ಅಧ್ಯಯನ ಮಾಡಿ ಮಾರ್ಕ್ಸ್‌ವಾದ, ಲೋಹಿಯವಾದ, ಕಾರ್ನಾಡ್ ರಸಲ್, ಮುಂತಾದವರ ಪ್ರಭಾವಕ್ಕೆ ಒಳಗಾದವನು. ಭಾರತೀಪುರದ ಜಮೀನ್ದಾರನ ಏಕೈಕ ಪುತ್ರ. ಸಾಮಾಜಿಕವಾಗಿ, ಆರ್ಥಿಕವಾಗಿ ಪ್ರಬಲ ವ್ಯಕ್ತಿ. ಆದ್ದರಿಂದಲೇ ಭಾರತೀಪುರದಲ್ಲಿ ಈತನಿಗೆ ವಿಶೇಷ ಆದ್ಯತೆ.

ಜಗನ್ನಾಥನೇ ಕಾದಂಬರಿಯ ಕೇಂದ್ರವ್ಯಕ್ತಿ. ಆತನ ಬಗೆಗಿನ ವಿಶ್ಲೇಷಣೆ ಇಡೀ ಕಾದಂಬರಿಯ ವಿಶ್ಲೇಷಣೆಯಾಗಿದೆ ಎಂದರೆ ತಪ್ಪಾಗದು. ಆಧುನಿಕ ವಿಚಾರಗಳನ್ನು ಮೈಗೂಡಿಸಿಕೊಂಡು ಬ್ರಾಹ್ಮಣ ಹಾಗೂ ಶೂದ್ರರ ನಡುವಿನ ಕಂದರವನ್ನು ಹೋಗಲಾಡಿಸಲು ಹೊರಟ ವ್ಯಕ್ತಿ.

ಜಗನ್ನಾಥ ಎರಡು ಸಂಸ್ಕೃತಿಗಳನ್ನು ತಿಳಿದುಕೊಂಡ ವ್ಯಕ್ತಿ ಆದರೆ ಯಾವುದರಲ್ಲಿಯೂ ನಂಬಿಕೆ ಇಡದವನು. ಯಾವುದರಲ್ಲಿಯೂ ಪರಿಪೂರ್ಣತೆ ಸಾಧಿಸಲಾರದೆ ಗೊಂದಲದಲ್ಲಿ ತೊಳಲಾಡುತ್ತಾನೆ. ಸಂಪ್ರದಾಯಕತೆಯ ಚೌಕಟ್ಟಿನಲ್ಲಿ ನಿಂತು ವೈಚಾರಿಕತೆಯ ಕನಸು ಕಾಣುತ್ತಾನೆ. ಸಂಸ್ಕೃತಿಯ ಪರಿವರ್ತನೆಗೆ ಹೆಣಗಾಡುವ ನೆಪದಲ್ಲಿ ಮೂಲ ಸಂಸ್ಕೃತಿಯನ್ನೇ ಪೂರ್ಣವಾಗಿ ಅರಿಯುವಲ್ಲಿ ವಿಫಲನಾಗುತ್ತಾನೆ. ಕೇವಲ ಬಾಹ್ಯ ಪ್ರೇರಣೆಗಳಿಂದಲೇ ಆಂತರಿಕ ತುಮುಲಗಳನ್ನು ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಾನೆ.

ಜಗನ್ನಾಥ ಮೇಲ್ವರ್ಗದಲ್ಲಿ ಹುಟ್ಟಿ ಬೆಳೆದರೂ ಆ ಬಂಧನದಿಂದ ಹೊರಬರಲು ತನ್ನ ವರ್ಗವನ್ನು ಮೀರಲು ಪ್ರಯತ್ನಿಸುತ್ತಾನೆ. ಕಾದಂಬರಿಯ ಆರಂಭದಲ್ಲಿ ನರಹರಿರಾಯರು ತನ್ನಿಂದ ಪಡೆದ ಸಾಲ ಕೊಡಲಾಗಲಿಲ್ಲವೆಂದು ದೈನ್ಯತೆ ತೋರಿದಾಗ ಜಗನ್ನಾಥ ಅವರ ಮುಂದೆಯೇ ಪ್ರಾಮಿಸರಿ ನೋಟುಗಳನ್ನೆಲ್ಲ ಹರಿದು ಹಾಕಿ ಸಾಲವನ್ನೆ ಹಿಂದಕ್ಕೆ ಕೊಡಬೇಕಾಗಿಲ್ಲವೆಂದು ದೃಢವಾಗಿ

ಹೇಳಿಬಿಡುತ್ತಾನೆ. ಇಂತಹ ಜಗನ್ನಾಥ ತಮ್ಮ ಊರಿನ ಕೆಳವರ್ಗದ ಹೊಲೆಯರ ಜೀವನದಲ್ಲಿ ಏನಾದರೂ ಬದಲಾವಣೆ ತಂದು ಅವರು ನಮ್ಮಂತೆ ಮನುಷ್ಯರಾಗಿ ಬದುಕುವಂತೆ ಮಾಡಬೇಕೆಂಬ ಹಂಬಲ ಜಗನ್ನಾಥನದ್ದು. ಅದಕ್ಕಾಗಿ ಜಗನ್ನಾಥ ಮಾದ, ಕರಿಯ, ಪಿಳ್ಳ ಮೊದಲಾದ ಹೊಲೆಯರ ಹುಡುಗರಿಗೆ ಅಕ್ಷರಾಭ್ಯಾಸ ಮಾಡಿಸಲು ಪ್ರಾರಂಭಿಸುತ್ತಾನೆ.

ಆದರೆ ಹೊಲೆಯರ ಹುಡುಗರು ಶತಮಾನಗಳಿಂದ ನಮ್ಮನ್ನು ಅಕ್ಷರ ವಂಚಿತರನ್ನಾಗಿ ಮಾಡಿದ್ದಕ್ಕೆ ಪ್ರತಿಕಾರವೆಂಬಂತೆ ಜಗನ್ನಾಥ ಮರುಳಿನ ಮೇಲೆ ಅಕ್ಷರ ತಿದ್ದುವಂತೆ ಹೇಳಿದಾಗ ಆ ಹುಡುಗರ ಮೈಯ ಮಾಂಸಖಂಡಗಳೆಲ್ಲವೂ ತಿರುಚಿಕೊಂಡತೆ ಕಾಣುತ್ತದೆ. ಕತ್ತಿನ ನರಗಳು ಉಬ್ಬಿಕೊಳ್ಳುತ್ತವೆ. ಈ ರೀತಿಯಾಗಿ ಅವರು ಅಕ್ಷರ ಕಲಿಯುವಾಗ ಹೆದರುತ್ತಿದ್ದರು. ಕಾದಂಬರಿಕಾರ ಅದನ್ನು ಹೆದರಿಕೆ ಎಂದು ಹೇಳಿದರು. ಕೆಳವರ್ಗದ ಹೊಲೆಯರು, ಅಕ್ಷರಾಭ್ಯಾಸ ಕೇವಲ ಮೇಲ್ವರ್ಗದ ಸ್ವತ್ತು, ಕೆಳವರ್ಗದವರನ್ನು ವಂಚಿಸಿದರಿಂದ ಬಹುಶಃ ಅವರು ಮೌನವಾಗಿ ಆ ರೀತಿಯ ಪ್ರತಿಭಟನೆಯನ್ನು ತೋರುತ್ತಿದ್ದರೆಂದು ಅನಿಸುತ್ತದೆ.

ಇಲ್ಲಿ ಕಥೆಯ ನಾಯಕ ಜಗನ್ನಾಥ ಹೊಲೆಯರಿಗೆ ಅಕ್ಷರ ಕಲಿಸುತ್ತಿದ್ದನೇ ಹೊರೆತು, ಅವರೊಂದಿಗೆ ಬೇರೆ ಯಾವ ರೀತಿಯ ಸಂಬಂಧವನ್ನು ಇಟ್ಟುಕೊಂಡಿರಲಿಲ್ಲ. ಅದನ್ನೇ ಶ್ರೀಪತಿರಾಯರು ಹೊಲೆಯರಿಗೆ ಅಕ್ಷರಾಭ್ಯಾಸ ಮಾಡಿಸ್ತೀದೀನಿ ಅಂದ್ಯಲ್ಲ ಜಗಣ್ಣ ನೀನಾಗಲಿ, ಅವರಾಗಲಿ ಒಂದೇ ಒಂದು ಸಾರಿಯಾದರು ಗೊತಿಲ್ದೇನೇ ಆದರೂ î®±±i Ûµ² °m v Ŵ ‡®¾ œµ°¡®±?"° ಎಂದು ಕೇಳಿದಾಗ ಜಗನ್ನಾಥ ಇಲ್ಲ ಎನ್ನುತ್ತಾನೆ. ಇದರಿಂದ ಜಗನ್ನಾಥ ತನಗೆ ಅರಿವಿಲ್ಲದೆಯೇ ವರ್ಗಭೇದ ಮತ್ತು ವರ್ಣಭೇದ ಮಾಡುತ್ತಿದ್ದನೆಂದು ತಿಳಿಯುತ್ತದೆ.

ಜಗನ್ನಾಥ ಅಮಾವಾಸ್ಯೆಯ ದಿವಸ ದೇವಸ್ಥಾನದೊಳಗೆ ಹೊಲೆಯರನ್ನು ಕರೆದುಕೊಂಡು ಹೋಗಬೇಕಂತ ಇದಿನಿ. ಹಾಗಂತ ಪೇಪರುಗಳಿಗೂ ಬರೆದಿದಿನಿ ಎಂದು ಹೇಳಿದಾಗ ಶ್ರೀಪತಿರಾಯರ ಪ್ರತಿಕ್ರಿಯೆಯನ್ನು ಗಮನಿಸಬೇಕು. ಶ್ರೀಪತಿರಾಯರು ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಕಾಂಗ್ರೇಸ್ ಪಕ್ಷದಲ್ಲಿದ್ದು ಹೋರಾಡಿದವರು.

---

೧. ಭಾರತೀಪುರ ಕಾದಂಬರಿ – ಪು.ಸಂ. ೭೭

ಗಾಂಧೀಜಿಯವರ ಹರಿಜನೋದ್ಧಾರ ಕಾರ್ಯಕ್ರಮದಲ್ಲಿ ನಂಬಿಕೆ ಇಟ್ಟಿದ್ದವರು. ಈಗ ಇವರು ರಾಜಕೀಯದಿಂದ ನಿವೃತ್ತರಾಗಿದ್ದಾರೆ. ಹೊಲೆಯರ ಉದ್ಧಾರದ ಬಗ್ಗೆ ಅವರಲ್ಲಿ ನಂಬಿಕೆ ಕಡಿಮೆಯಾಗಿದೆ. ಜಗನ್ನಾಥನ ಮಾತನ್ನು ಕೇಳಿ ಶ್ರೀಪತಿರಾಯರಿಗೆ ಗಂಟಲು ಒಣಗಿ, ಮುಖ ಭಯದಲ್ಲಿ ಬಿಳಚಿಕೊಂಡು, ದಂಗು ಬಡಿದಂತೆ ಮಾತನಾಡಲಾರದೇ ಕೂತರು. ಅನಂತರ ಅವರು ಇದರ ಬಗ್ಗೆ ಈ ರೀತಿ ಹೇಳಿದರು. ಹೊಲೆಯರಿಗೆ ಬೇಕಾಗಿರುವುದು ಹೆಂಡ, ದೇವರ ದರ್ಶನವಲ್ಲ, ನಿನ್ನ ಗುಲಾಮರು ಅವರು ಆದ್ದರಿಂದ ನೀನು ಹೇಳಿದ ಹಾಗೆ ಕೇಳಿಯಾರು, x °w®± š®±î®±âwµ š®q¯ ‰ ±š®Ù C v °‡®± A Çµ®”° ಇಲ್ಲಿ ಶ್ರೀಪತಿರಾಯರು ಜಗನ್ನಾಥ ಹರಿಜನೋದ್ಧಾರ ಮಾಡುತ್ತಿರುವುದು, ಕೆಳವರ್ಗದ ಜನರನ್ನು ಮೇಲೆತ್ತುವ ಪ್ರಯತ್ನ ಕೇವಲ ಒಂದು ಯಾಂತ್ರಿಕವಾದ ಆಚರಣೆ ಅದರಿಂದ ನಿಜವಾಗಿಯೂ ಅವರು ಉದ್ಧಾರ ಆಗೋಲ್ಲ, ಉದ್ಧಾರ ಆಗುವ ಮನಸ್ಸನ್ನು ಮೊದಲು ಅವರು ಮಾಡಬೇಕು. ಹೊಲೆಯರಿಗೆ ಅವರ ಅಂತರ್ಯದಲ್ಲಿ ಮೊಳಕೆಯೊಡೆಯದ ಹೊರತು ನಿನ್ನ ಪ್ರಯತ್ನವೆಲ್ಲ ವ್ಯರ್ಥವೆಂದು ಹೇಳುತ್ತಾರೆ.

ಜಗನ್ನಾಥ ಹೊಲೆಯರನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗುವುದರ ಬಗ್ಗೆ ಚಿಕ್ಕಿ ಅವಕ್ಕೇ ಹಾಸಕ್ಕೆ ಹೊದೆಯಾಕ್ಕೆ ಬೇಕಾದಷ್ಟು ಇರುವಾಗ ದೇವಸ್ಥಾನದೊಳಗೆ ಹೋಗಿ ಅವಕ್ಕೇನು ಕಡೀಬೇಕಾಗಿದೆ ಹೇಳಿ, ಈಗ ಹೊಲೇರು ಮಕ್ಕಳನ್ನು ಸ್ಕೂಲಿಗೆ ಕಳುಹಿಸಿದರೆ ಅವಕ್ಕೆ ದುಡ್ಡು ಸಿಕ್ಕತಂತೆ, ಆ ದುಡ್ಡನ್ನು ಅವು ಏನು ಮಾಡ್ತಿದಾವೆ ಗೊತ್ತಾ ಕುಡಿದು ಹಾಳು ಮಾಡ್ತಿದಾವೆ. ಅವಕ್ಕೆ ಉದ್ಧಾರ ಆಗಬೇಕುಂತ ಅನಿಸದ ಹೊರತು ನೀನು ಮಾಡಿದುದ್ದೆಲ್ಲ ನೀರಿನಲ್ಲಿ ಹೋಮ ಮಾಡಿದಂತೆ [೨]

ಚಿಕ್ಕಿಯ ಮಾತುಗಳನ್ನು ಕೇಳಿದಾಗ ಆಕೆ ಪಕ್ಕಾ ಮೇಲ್ವರ್ಗದ ವಾರಸುದಾರಳು ಜೊತೆಗೆ ಮುಂದಿನ ಪೀಳಿಗೆಗೆ ಅದನ್ನು ಬಳುವಳಿಯಾಗಿ ಕೊಡಬೇಕೆಂದು ಹಠತೊಟ್ಟವಳಂತೆ ಕಾಣುತ್ತಾಳೆ. ಕೆಳವರ್ಗದ ಹೊಲೆಯರು ಅಕ್ಷರಾಭ್ಯಾಸ ಮಾಡಬಾರದು, ಅವರು ತಲತಲಾಂತರದಿಂದ ಹಾಗೇ ಬದುಕಿದ್ದಾರೆ, ಹಾಗೇ ಈಗಲೂ ಸಹ ಇರಬೇಕು ಎಂಬಂತೆ ಹೇಳುತ್ತಾಳೆ. ಇದೂ ಚಿಕ್ಕಿ ಹೇಳುವ ಮಾತು ಅವಕ್ಕೇ ಹಾಸಕ್ಕೇ ಹೊದೆಯಕ್ಕೇ ಬೇಕಾದಷ್ಟು ಇರುವಾಗ ದೇವಸ್ಥಾನದೊಳಗೆ ಹೋಗಿ ಅವಕ್ಕೇನು ಕಡಿಬೇಕಾಗಿದೆ ಎಂದು ಹೇಳುವಾಗ, ವ್ಯಂಗ್ಯವೊಂದು ಅಡಕವಾಗಿದೆ. ಕಾದಂಬರಿಕಾರ ಕೊಡುವ ವಿವರಣೆ ನೋಡಿದಾಗ ಹೊಲೆಯರ ಗುಡಿಸಲಲ್ಲಿ ಅಟ್ಟದಿಂದ ಇಳಿಬಿಟ್ಟ ಕೆಲವು ಬುಟ್ಟಿಗಳು,

---

೧. ಅನಂತಮೂರ್ತಿ-ಭಾರತೀಪುರ ಪು.ಸಂ.೬೬

೨. ಅದೇ ಕಾದಂಬರಿ ಪು.ಸಂ. ೯೯

ಒಂದೆರಡು ಮಡಕೆಯಲ್ಲದೆ ಬೇರೇನೂ ಇರಲಿಲ್ಲ, ಎಂಬ ಮಾತನ್ನು ಕಾದಂಬರಿಕಾರ ಹೇಳುತ್ತಾನೆ. ಇಲ್ಲಿ ಚಿಕ್ಕಿ ಹೇಳಿದ ಮಾತು ಹಾಸಿ ಹೊದೆಯುವುದು ಕೇವಲ ಕಷ್ಟವನ್ನ, ಬಡತನದ ಬೇಗೆಯನ್ನ, ನಿತ್ಯದ ಕೆಲಸವನ್ನ ಹೊರತು ಇನ್ನಾವ ಶ್ರೀಮಂತಿಕೆಯೂ ಅಲ್ಲ, ಇಲ್ಲಿಯ ಚಿಕ್ಕಿ ಸಹ ಕೆಳವರ್ಗದವರು ಕೆಳವರ್ಗದವರಾಗಿಯೇ ಇರಬೇಕೆಂದು ಬಯಸುತ್ತಾಳೆ.

ಜಗನ್ನಾಥನ ಪ್ರಕಾರ ನಾವು ಬಯಸುವುದನ್ನೆಲ್ಲಾ ಹೊಲೆಯರೂ ಬಯಸಬೇಕು. ಬ್ರಾಹ್ಮಣ ಹುಡುಗಿಯನ್ನು ಹೊಲೆಯ ಆಸೆ ಪಡುವಂತಾಗಬೇಕು. ಬ್ರಾಹ್ಮಣ ಹುಡುಗಿಯರಿಗೆ ಹೊಲೆಯರ ಹುಡುಗರು ಇಷ್ಟವಾಗಬೇಕು. ಆದರೆ ಭಾರತೀಯ ಸಮಾಜ ಅದಕ್ಕೆ ಅವಕಾಶಕೊಡುವುದಿಲ್ಲ. ಪಿಳ್ಳ ತನ್ನದಲ್ಲದ ತಪ್ಪಿಗೆ ಪೋಲಿಸರ ಕೈಲಿ ಒದೆ ತಿನ್ನುತ್ತಾನೆ ಕಾಣಬಹುದು. ಕಾವೇರಿಯ ಬಳಿ ಅಸಭ್ಯವಾಗಿ ವರ್ತಿಸುತ್ತಿದ್ದ ಜನಾರ್ಧನ ಶೆಟ್ಟಿಯ ಬಳಿ ಪಿಳ್ಳ ಹೋಗುತ್ತಿದ್ದಂತೆ ಶೆಟ್ಟಿ ಕಾವೇರಿಯನ್ನು ಬಿಟ್ಟು ಓಡಿ ಹೋಗುತ್ತಾನೆ. ಹಿಂದಿನಿಂದ ಬಂದ ಜನಾರ್ಧನ ಶೆಟ್ಟಿ ಪಿಳ್ಳನ ತಲೆ ಹೊಡೆದು ಜ್ಞಾನ ತಪ್ಪಿಸಿ ಬೀಳಿಸುತ್ತಾನೆ. ಅನಂತರ ಕಾವೇರಿಯನ್ನು ಬಲತ್ಕಾರ ಮಾಡಲು ಪ್ರಯತ್ನ ಪಟ್ಟ ಎಂದು ಸುಳ್ಳು ಸುದ್ದಿ ಹಬ್ಬಿಸಿದ. ಹೊಲೆಯ ಒಬ್ಬ ಮೇಲ್ವರ್ಗದ ಹುಡುಗಿಗೆ ಕಣ್ಣು ಹಾಕುವುದೇ ತಪ್ಪು, ಅದರಲ್ಲೂ ಬಲತ್ಕಾರದ ಪ್ರಯತ್ನ ಎಂದು ತಿಳಿದ ಕಾವೇರಿಯ ಕಡೆಯವರು ಪಿಳ್ಳನ ವಿರುದ್ಧ ಕೇಸು ಹಾಕಿದರು. ಪಿಳ್ಳನನ್ನು ಎಳೆದುಕೊಂಡು ಹೋದ ಪೋಲಿಸಿನವರು ಪಿಳ್ಳನ್ನನ್ನು ಚೆನ್ನಾಗಿ ಥಳಿಸಿದರು. ಇವನನ್ನು ಬಿಡಿಸಲು ಹೋದ ಜಗನ್ನಾಥನಿಗೆ ಈ ರೀತಿ ಅನಿಸಿತು. ದಫೇದಾರನಿಗೆ ಪಿಳ್ಳ ಒಬ್ಬ ಮನುಷ್ಯ ಎಂದು ಅನಿಸುತ್ತಲೇ ಇಲ್ಲ, ಅನಾಮತ್ತಾಗಿ ವ್ಯಕ್ತವಾಗುವ ಈ ಕ್ರೌರ್ಯದ ಹಿಂದೆ ಶತಮಾನಗಳ ಮೌಢ್ಯವಿತ್ತು. ಕುಲೀನ ಹುಡುಗಿಯನ್ನು ಹೊಲೆಯ ಬಯಸಿದ್ದ, ಆದರೆ ಯಾರು ಬೇಕಾದರೂ î®¾ 1®.. œ®±u¯ T u®Û D ¢®y®Œ œµ² Œµ‡ ®±w®ª å Uµ² °Š®y¯ ¢®N®î¯ T N®°m ¢®±Ù’ ° ಈ ರೀತಿ ಹೊಲೆಯರನ್ನು ಮೆಲೆತ್ತುವ ಜಗನ್ನಾಥನ ಕನಸು ಭಂಗವಾಗುತ್ತದೆ.

ಕಾದಂಬರಿಯ ಕೇಂದ್ರಬಿಂದು ಜಗನ್ನಾಥ ಹೊಲೆಯರ ಹುಡುಗರಿಂದ ತನ್ನ ಮನೆಯಲ್ಲಿ ತಲೆತಲಾಂತರದಿಂದ ಪೂಜಿಸಿಕೊಂಡು ಬಂದಿದ ಸಾಲಿಗ್ರಾಮ ಶಿಲೆಯನ್ನು ಮುಟ್ಟಿಸುವುದು, ಸಾಲಿಗ್ರಾಮ ತುಂಬಾ ಪವಿತ್ರವಾದ ಶಿಲೆ, ಅದನ್ನು ಮುಟ್ಟುವುದರ ಮೂಲಕ ಒಂದು ಹೊಲೆಯರು ಪವಿತ್ರಗೊಳ್ಳಬೇಕು, ಇಲ್ಲವೇ ಆ ಸಾಲಿಗ್ರಾಮವನ್ನು ಅಪವಿತ್ರಗೊಳಿಸುವುದರ ಮೂಲಕ ತಮ್ಮ

---

೧. ಯು.ಆರ್. ಅನಂತಮೂರ್ತಿ– ಭಾರತೀಪುರ ಪು.ಸಂ. ೧೩೯

ಬ್ರಾಹ್ಮಣ ಧರ್ಮಕ್ಕೆ ತಿರುಗೇಟು ನೀಡಬೇಕೆಂಬುವುದು ಜಗನ್ನಾಥನ ಮನದಿಂಗಿತ. ಆದರೆ ಜಗನ್ನಾಥನ ಲೆಕ್ಕಚಾರ ಪ್ರಯೋಗಿಕವಾಗಿ ಬಳಸಿದಾಗ ಎಲ್ಲಾ ತಲೆಕೆಳಗಾಗುತ್ತದೆ. ಸಾಲಿಗ್ರಾಮವನ್ನು ಹೊಲೆಯರಿಂದ ಮುಟ್ಟಿಸಲು ಹೊರತಂದ ಜಗನ್ನಾಥ ಹೊಲೆಯರ ಹುಡುಗರನ್ನು ಕರೆದು ಮುಟ್ಟಲು ಹೇಳಿದಾಗ ಅವರು ಹೆದರಿ ಹಿಂದೆ ಸರಿಯುತ್ತಾರೆ. ಜಗನ್ನಾಥ ಮುಂದೆ ಹೋದಷ್ಟು ಅವರು ಮತ್ತಷ್ಟು ಹಿಂದೆ ಸರೆಯುತ್ತಾರೆ. ಕೊನೆಗೆ ವಿಧಿ ಇಲ್ಲದೆ ಜಗನ್ನಾಥ ಅವರನ್ನು ಗದರಿಸಿ, ಬೆದರಿಸಿ ಇದು ಕೇವಲ ಒಂದು ಶಿಲೆ ಅಷ್ಟೇ ನೀವು ಮುಟ್ಟುವುದರಿಂದ ಏನು ಆಗುವುದಿಲ್ಲವೆಂದು ಅವರನ್ನು ಕಾಡಿ ಬೇಡಿ ಸಾಲಿಗ್ರಾಮವನ್ನು ಮುಟ್ಟಿಸುತ್ತಾನೆ. ಹೊಲೆಯರು ಸಾಲಿಗ್ರಾಮವನ್ನು ಮುಟ್ಟಿ ಸರಕ್ಕನೆ ಹಿಂದೆಸರಿದು ನಿಲುತ್ತಾರೆ. ಈ ಇಡೀ ಸನ್ನಿವೇಶದ ವ್ಯಂಗ್ಯ ಮತ್ತು ವಿರೋಧಗಳನ್ನು ಕಥಾನಾಯಕನೇ ಅರಿಯುತ್ತಾನೆ.

ಜಗನ್ನಾಥ ಹೊಲೆಯರ ಹುಡುಗರು ಲಂಗೋಟಿ ತೊಡುವುದನ್ನು ಬಿಟ್ಟು ಅವರು ತನ್ನಂತೆಯೇ ಬಿಳಿಪಂಚೆ ಉಡಬೇಕು. ಬಿಳಿಯ ಅಂಗಿಯನ್ನು ಹಾಕಿಕೊಳ್ಳಬೇಕೆಂದು ಬಯಸಿ ಅವರಿಗೆಲ್ಲ ಬಿಳಿಪಂಚೆ ಅಂಗಿಯನ್ನು ಕೊಡಿಸಿ ಹಾಕಿಕೊಂಡು ಬರಲು ಹೇಳಿರುತ್ತಾನೆ. ಆದರೆ ಹೊಲೆಯರು ಪಂಚೆಯನ್ನು ಹರಿದು ತನ್ನ ಅಪ್ಪ, ಚಿಕ್ಕಪ್ಪ, ಅಣ್ಣ, ತಮ್ಮ, ಬಂದ ನೆಂಟರಿಗೆಲ್ಲರಿಗೂ ಲಂಗೋಟಿಯನ್ನು ಮಾಡಿಕೊಟ್ಟು ತಾವು ಸಹ ಲಂಗೋಟಿ ತೊಟ್ಟಿರುತ್ತಾರೆ. ಅಂಗಿಯ ಕಾಲರ್‌ನ್ನೂ ಒಳಗಡೆ ಮಡಚಿಕೊಂಡು ಅಂಗಿಯ ಯಾವುದು ತೂತಿಗೆ ಯಾವುದೋ ಗುಂಡಿಯನ್ನು ಹಾಕಿಕೊಂಡು ಜಗನ್ನಾಥನ ಮುಂದೆ ಹಾಜರಾಗುತ್ತಾರೆ.

ಜಗನ್ನಾಥ ಮತ್ತು ಹೊಲೆಯರ ಪಿಳ್ಳ, ಮಾದ, ಕರಿಯರರ ಯಾಂತ್ರಿಕ ಕ್ರಿಯೆಯನ್ನು ನೋಡಿದಾಗ ಹೊಲೆಯರ ಹುಡುಗರಿಗೆ ತಾವು ಬದಲಾಗಬೇಕೆಂಬ ತುಡಿತ ಇಲ್ಲದಿರುವುದು ಕಾಣುತ್ತದೆ. ಜೊತೆಗೆ ಜಗನ್ನಾಥ ಬ್ರಾಹ್ಮಣ ಮೇಲ್ವರ್ಗದವರ ಆಚಾರ, ವಿಚಾರಗಳನ್ನು ಆಚರಿಸುವಂತೆ ಅವರ ಮೇಲೆ ಏರಿದಷ್ಟು ಅವರು ಅದಕ್ಕೆ ಹೆಚ್ಚು ವಿರುದ್ಧವಾಗಿಯೇ ನಡೆದುಕೊಳ್ಳುತ್ತಾರೆ. ಅದು ಅಕ್ಷರಾಭ್ಯಾಸವಿರಲಿ, ಬ್ರಾಹ್ಮಣರಂತೆ ಬಿಳಿಯ ಶುಭ್ರ ಬಟ್ಟೆ ತೊಡುವುದಿರಲಿ, ಸಾಲಿಗ್ರಾಮ ಮುಟ್ಟುವುದಿರಲಿ ಈ ಎಲ್ಲಾ ಘಟನೆಗಳಲ್ಲಿ ಅವರು ಜಗನ್ನಾಥನಿಗೆ ಹೆದರಿ ಕೇವಲ ಯಾಂತ್ರಿಕ ಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಾರೆ ಹೊರತು ಅವರು ಬಯಸಿ ಸ್ವ-ಇಚ್ಛೆಯಿಂದ ಆ ಕೆಲಸವನ್ನು ಮಾಡುವುದಿಲ್ಲ.

ಈ ಎಲ್ಲಾ ಘಟನೆಯನ್ನು ನೋಡಿದಾಗ ಜಗನ್ನಾಥ ಒಂದು ಕಡೆಯಿಂದ ಮೇಲ್ವರ್ಗದ ಬ್ರಾಹ್ಮಣ್ಯವನ್ನು ತೊಡೆದು ಹಾಕಿ ಹೊಲೆಯರನ್ನು ತಮ್ಮಂತೆ ಮನುಷ್ಯರನ್ನಾಗಿ ಮಾಡಬೇಕೆಂದು ಹೋರಾಟ ಮಾಡಿದರೆ, ಅದಕ್ಕೆ ಪ್ರತಿಯಾಗಿ ಭಾರತೀಪುರದ ಹೊಲೆಯರು ನಮ್ಮ ಪೂರ್ವಿಕರು ಎಷ್ಟೋ ತಲೆಮಾರುಗಳಿಂದ ನಮ್ಮಂತೆಯೇ ಬದುಕಿದ್ದಾರೆ ನಾವು ಅವರಂತೆಯೇ ಬದುಕುತ್ತೀವಿ ಎನ್ನುವಂತೆ ಜಗನ್ನಾಥನ ಯಾವುದೇ ಕ್ರಿಯೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವುದಿಲ್ಲ.

ಒಟ್ಟು ಇಡೀ ಕಾದಂಬರಿಯನ್ನು ವಿಶ್ಲೇಷಣೆ ಮಾಡಿದಾಗ ಮೇಲ್ವರ್ಗದ ಪ್ರತಿನಿಧಿಯಾದ ಜಗನ್ನಾಥ ಕೆಳವರ್ಗದ ಹೊಲೆಯರನ್ನು ಬದಲಾವಣೆ ಮಾಡಲು, ಅವರು ಮೇಲ್ವರ್ಗದ ಗೌರವದ ನಾಗರೀಕರಾಗಿ ಬಾಳಲು ಶ್ರಮಿಸುತ್ತಾನೆ. ಆದರೆ ಭಾರತೀಪುರದ ಹೊಲೆಯರು ಅಪ್ಪ ಹಾಕಿದ ಆಲದ ಮರ ಅದಕ್ಕೆ ನೇಣು ಬಿಗಿಯಬೇಕು ಎಂಬ ಗಾದೆಯ ಮಾತಿನಂತೆ ಅವರು ಬದಲಾವಣೆಯ ಹೊಸ ಅಲೆಗೆ ಸ್ಪಂದಿಸುವುದೇ ಇಲ್ಲ, ಮುಖ್ಯ ಪಾತ್ರಗಳಲ್ಲಿ ಈ ರೀತಿಯ ಘರ್ಷಣೆ ನಡೆದರೆ ಇನ್ನು ಕಾದಂಬರಿ ಪೂರಕವಾಗಿ ಬರುವ ಪಾತ್ರಗಳಾದ ಪ್ರಭು, ವಾಸು, ನಾಗರಾಜ ಜೋಯಿಸರು, ಒಕ್ಕಲಿಗ ರಂಗರಾವ್, ಲಿಂಗಾಯಿತ ನೀಲಕಂಠಸ್ವಾಮಿ, ದೇವಸ್ಥಾನದ ಪೂಜಾರಿ ಸೀತಾರಾಮಯ್ಯ, ಅವನ ಮಗ ಗಣೇಶ ಇವರೇ ಮೊದಲಾದ ಕೆಲವು ಪ್ರಮುಖ ಪಾತ್ರಗಳು ವರ್ಗಸಂಘರ್ಷ ಹಿನ್ನೆಲೆಯಲ್ಲಿ ನೋಡಿದಾಗ ಕೆಲವು ಪಾತ್ರಗಳು ತಮ್ಮ ತಮ್ಮ ವರ್ಗದವರನ್ನು ಕಂಡರೆ ತಮ್ಮೊಳಗೆ ಕತ್ತಿಮಸೆಯುತ್ತಿರುತ್ತಾರೆ. ನಾಗರಾಜ ಜೋಯಿಸ ದೇವಸ್ಥಾನದ ಮುಖ್ಯ ಅರ್ಚಕನಾದ ಸೀತಾರಾಮಯ್ಯನನ್ನು ಒಳಗೊಳಗೆ ದ್ವೇಷಮಾಡುತ್ತಿರುತ್ತಾನೆ. ಇದಕ್ಕೆ ಕಾರಣ ದಾಯಾದಿ ಮತ್ಸರ ಒಂದಾದರೆ, ದೇವಸ್ಥಾನದ ಪೂಜೆ ತನ್ನ ಪಾಲಿಗೆ ದಕ್ಕಲಿಲ್ಲ ಎಂಬುವುದು ಮತ್ತೊಂದು ಸಂಗತಿ. ಇವರು ತಮ್ಮಲ್ಲಿ ದ್ವೇಷಮಾಡಿದರೂ ಕೆಳವರ್ಗದ ಹೊಲೆಯರ ವಿಷಯ ಬಂದಾಗ ಮಾತ್ರ ಅವರ ನಿಲುವು ಒಂದೇ ಅವರು ಹಿಂದಿನಿಂದ ಬಂದ ಸಂಪ್ರದಾಯವನ್ನೇ ಅನುಸರಿಬೇಕು ಬದಲಾವಣೆಗೆ ಅವಕಾಶವಿಲ್ಲ ಎಂಬ ನಿಲುವನ್ನು ತಳೆದವರು.

ಭಾರತೀಪುರದ ಶ್ರೀಮಂತ ವ್ಯಾಪಾರಿ ಪ್ರಭು. ಇಡೀ ಭಾರತೀಪುರದ ವ್ಯಾಪಾರವನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದವನು. ಜಗನ್ನಾಥನನ್ನು ಬಿಟ್ಟರೆ ಭಾರತೀಪುರದ ದೊಡ್ಡ ಹಣವಂತ. ಜಗನ್ನಾಥ ರಾಜಿನಾಮೆ ಕೊಟ್ಟ ದೇವಸ್ಥಾನದ ಧರ್ಮದರ್ಶಿತ್ವವನ್ನು ವಹಿಸಿಕೊಂಡವನು,

ಎರಡನೇ ಮಹಾಯುದ್ಧದ ಸಮಯದಲ್ಲಿ ಅಕ್ಕಿ, ಸೀಮೆಎಣ್ಣೆ, ಸಕ್ಕರೆಯನ್ನು ಕಾಳಸಂತೆಯಲ್ಲಿ ಮಾರಿ ಹಣಗಳಿಸಿದನು. ವ್ಯಾಪಾರದಲ್ಲಿ ಪ್ರಭುಗಳ ಪಾಲಿಸಿ ಇದು ಮಾರ್ಯಾದೆ ಬಿಟ್ಟು ದುಡ್ಡು ಮಾಡು; ದುಡ್ಡು ಮಾಡಿದ ಮೇಲೆ ಮರ್ಯಾದೆ ಹೇಗೋ ತಾನಾಗಿಯೇ ಬರುತ್ತೆ [೧] ಈ ಮಾತನ್ನು ಅವರೆ ತಕ್ಕಡಿ ಎದುರು ಕೂತು ಹೇಳುತ್ತಿದ್ದರು. ಇಂತಹ ಪ್ರಭುಗಳು ಕೆಳವರ್ಗದವರನ್ನು ಶೋಷಣೆ ಮಾಡುವುದೇ ಹೊರತು ಅವರ ಜೀವನವನ್ನು ಸುಧಾರಿಸಬೇಕೆಂಬ ಕನಿಷ್ಠ ಕಾಳಜಿ ಇಲ್ಲದ, ಪ್ರತಿಕ್ಷಣವು ವ್ಯವಹಾರಿಕವಾಗಿ ಯೋಚಿಸುವ ಮೇಲ್ವರ್ಗದ ಬ್ರಾಹ್ಮಣ.

ಕಾದಂಬರಿಯ ಅಂತ್ಯದಲ್ಲಿ ಬರುವ ಒಕ್ಕಲಿಗ ರಂಗರಾವ್, ಲಿಂಗಾಯಿತ ನೀಲಕಂಠಸ್ವಾಮಿ, ಸರ್ವೋದಯ ನಾಯಕ ಅನಂತ ಕೃಷ್ಣ, ಡಿ.ಸಿ. ಸಾಹೇಬ ಸತ್ಯಪ್ರಕಾಶ್ ಇವೇ ಮೊದಲಾದ ಪಾತ್ರಗಳು ಹೊಲೆಯರನ್ನೂ ಉದ್ದಾರ ಮಾಡಬೇಕೆಂದು ಹೋರಾಟ ಮಾಡುತ್ತಿದ್ದರೂ ಅದು ಕೇವಲ ಹೆಸರಿಗಷ್ಟೇ. ತಾವು ಒಳ್ಳೆ ಹೆಸರು ಮಾಡಿದರೆ ಮುಂಬರುವ ಚುನಾವಣೆಯಲ್ಲಿ ಹೊಲೆಯರ ಎಲ್ಲಾ ಮತಗಳನ್ನು ತಾವು ದಕ್ಕಿಸಿಕೊಳ್ಳುವ ಹುನ್ನಾರವೇ ಹೊರತು, ನಿಜವಾದ ಕಾಳಜಿಯಿಂದಲ್ಲ, ಹೊಲೆಯರ ಗುಡಿಸಲಿಗೆ ಬೆಂಕಿ ಬಿದ್ದಾಗ ನೀಲಕಂಠ ಸ್ವಾಮಿ ಸಾರ್ ಇದನ್ನೊಂದು ಇಶ್ಶ್ಯೂ ಮಾಡಬೇಕು, ಫ್ರಂಟ್ ನ್ಯೂಸ್ ಆಗುತ್ತೆ ಚೌಡನ್ನ ನಮ್ಮ ಚಳವಳಿಯ ಹೀರೋ ಮಾಡಬೇಕು [೨] ಹೀಗೆ ಹೋರಾಟಮಾಡೋ ಗೊಡ್ಡು ಆದರ್ಶವಾದಿಗಳು ನೀಲಕಂಠಸ್ವಾಮಿ ಮತ್ತು ರಂಗರಾವ್. ಡಿ.ಸಿ. ಸತ್ಯಪ್ರಕಾಶ ಮೇಲ್ವರ್ಗದವರನ್ನು ವಿರೋಧಿಸಲಾರದೆ, ಕೆಳವರ್ಗದ ಹೊಲೆಯರನ್ನು ಕೈ ಬಿಡಲಾರದ ಒಣ ಆದರ್ಶಕ್ಕೆ ಈತ ಅಂಟಿಕೊಂಡಿರುತ್ತಾನೆ.

ಕಾದಂಬರಿಯಲ್ಲಿ ಜಗನ್ನಾಥನ ಜೊತೆ ಗುರುತಿಸಿಕೊಳ್ಳುವ ಪ್ರಮುಖ ವ್ಯಕ್ತಿ ಶ್ರೀಪತಿರಾಯರು, ಇವರು ಹಿಂದೊಂದು ಕಾಲದಲ್ಲಿ ಅಪ್ಪಟ್ಟ ಗಾಂಧೀವಾದಿ. ಕಾಂಗ್ರೇಸ್ ಪಕ್ಷದ ಹಳೆಯ ನಾಯಕರು. ಸ್ವತಂತ್ರ ಚಳುವಳಿಯಲ್ಲಿ ಭಾಗವಹಿಸಿ ತಮ್ಮ ಆಸ್ತಿ–ಪಾಸ್ತಿಯನ್ನು ಕಳೆದುಕೊಂಡು ಈಗ ಮೂಲೆಗುಂಪಾದ ದೇಶಭಕ್ತರು. ಹರಿಜನೋದ್ಧಾರದ ಜಗನ್ನಾಥನ ಕಾಳಜಿಯ ಬಗ್ಗೆ ಹೊಲೆಯರು ತಮ್ಮ ಪಾಡಿಗೆ ತಾವು ಜೀವಿಸ್ಕೊಂಡಿದ್ದವು! ಕುಡಕೊಂಡು, ಕುಣಕೊಂಡು ಖುಷಿಯಾಗಿದ್ರು, ಒಗ್ಗಿಕೋತಾ ಹೋದ್ರು, ನಾನು ನಿನ್ನ ಮುಟ್ಟಲ್ಲ ಅಂದ್ರೆ, ನಾನು ನಿನ್ನ ಮುಟ್ಟಲ್ಲ ಅಂದ್ರು, ಹೀಗೆ ತಾಳಿಕೊಂಡ್ರು , ಹೀಗೆ ಹೇಳುವ ಶ್ರೀಪತಿರಾಯರು ಸಹ ಕೆಳವರ್ಗದವರ ಬಗ್ಗೆ ಕಾಳಜಿ ಇದ್ದರೂ ಅವರಿಗೆ ಉದ್ಧಾರ ಆಗಬೇಕು ಅನಿಸಿದ ಮೇಲೆ ಅವರ ಪಾಡಿಗೆ ಅವರನ್ನು ಬಿಡಬೇಕು ಎನ್ನುವ ಸೋಗಲಾಡಿತನದ ವ್ಯಕ್ತಿ

೧. ಯು.ಆರ್. ಅನಂತಮೂರ್ತಿ – ಭಾರತೀಪುರ ಪು.ಸಂ.೭೧
೨. ಯು.ಆರ್. ಅನಂತಮೂರ್ತಿ – ಭಾರತೀಪುರ ಪು. ಸ. ೧೭೨

ಶ್ರೀಪತಿರಾಯರು. ಕಾದಂಬರಿಯ ಕೆಲವು ಪ್ರಮುಖ ಸನ್ನಿವೇಶಗಳಲ್ಲಿ ಕಾಣಿಸಿಕೊಳ್ಳುವ ಅಪರೂಪದ ವ್ಯಕ್ತಿ ಗಣೇಶ. ಈತ ದೇವಸ್ಥಾನದ ಮುಖ್ಯ ಪೂಜಾರಿ ಸೀತಾರಾಮಯ್ಯನ ಮಗ, ಜಗನ್ನಾಥನಿಂದ ಸಾಧಿಸಲಾಗದ ಕೆಲಸವನ್ನು ಧೈರ್ಯವಾಗಿ ಮಾಡುವ, ಒಂದರ್ಥದಲ್ಲಿ ಕಾದಂಬರಿಯ ನಿಜವಾದ ನಾಯಕ. ತನ್ನ ತಂದೆ ಸೀತಾರಾಮಯ್ಯ ಮಂಜುನಾಥನ ಮಹಿಮೆಯ ... SµÌ œµ°¡®±q¯ Ù "ಆಚಂದ್ರಾರ್ಕ ಸ್ಥಾಪಿತವಾದ ಮಂಜುನಾಥ ಸ್ವಾಮಿಯ ಲಿಂಗವನ್ನು ನಾಶಮಾಡೋ ನರಮನುಷ್ಯ ಹುಟ್ಟಿಲ್ಲ ೧ ಎಂಬ ಮಾತುಗಳು ಆತನನ್ನು ಸದಾ ಕಾಡುತ್ತಿರುವಾಗ ಅದೇಗೆ ನಾಶ ಮಾಡಲಾಗುವುದಿಲ್ಲವೆಂದು ತೀರ್ಮಾನಿಸಿಕೊಂಡು ಒಂದು ರಾತ್ರಿ ಎಲ್ಲರೂ ಮಲಗಿದ್ದಾಗ ಕೈಯಲೊಂದು ಹಾರೆಗೋಲು ಹಿಡಿದು ದೇವಸ್ಥಾನಕ್ಕೆ ಬಂದು, ಲಿಂಗವನ್ನು ಅಗೆದು ತೆಗೆದು ಪಾಪನಾಶಿನಿ ಹೊಳೆಯಲಿ ಬಿಸಾಡಿ ಬರುತ್ತಾನೆ.

ಜಗನ್ನಾಥ ಮಂಜುನಾಥನ ಪ್ರಭಾವವನ್ನು ಇಲ್ಲವಾಗಿಸಬೇಕೆಂದು ಕೇವಲ ಬಾಯಿಮಾತಿನಲ್ಲೇ ಹೇಳುತ್ತಾ ಕಾಲ ಕಳೆದರೆ, ಗಣೇಶ ಅದನ್ನು ಪ್ರಾಕ್ಟಿಕಲ್ ಆಗಿ ಮಾಡಿ ತೋರಿಸುತ್ತಾನೆ. ಅದಕ್ಕೆ ಕಾರಣ ತನ್ನ ತಂದೆಯ ಮೇಲಿನ ಅತಿಯಾದ ಸಿಟ್ಟು, ಮತ್ತು ತಂದೆಯ ಮಾತನ್ನು ತಿರಸ್ಕರಿಸುವ ಒಂದು ದಾರಿ ಜೊತೆಗೆ ತಂದೆಯ ನೇರವಾಗಿ ಪ್ರತಿಭಟಿಸಲಾಗದ ಗಣೇಶನ ಸುಪ್ತಾವಸ್ಥೆಯ ಆವೇಶ ಇವೆಲ್ಲಾ ಸೇರಿ ಅವನು ಮಂಜುನಾಥ ಸ್ವಾಮಿಯ ಲಿಂಗವನ್ನು ಅಗೆಯಲು ಕಾರಣವಾಗುತ್ತವೆ. ಆಚಂದ್ರಾರ್ಕವಂತೆ, ಹದಿನೆಂಟು ಅಡಿ ಆಳದಲ್ಲಿ ಭೂ ಪ್ರಸ್ತಾರವಂತೆ ಚಕ್ರವಂತೆ ಹೊಂಡದಲ್ಲಿ ನವರತ್ನಗಳನ್ನು ನಾಣ್ಯಗಳನ್ನು ತುಂಬಿರುತ್ತಾರಂತೆ ಅಷ್ಟ ದಿಗ್ಬಂಧನ ಮಾಡಿರುತ್ತಾರಂತೆ, ಅಪ್ಪನ ಪುರಾಣ, ಎಲ್ಲ ನಾಶವಾಗಬೇಕು, ಬೇರು ಸಹಿತ, ಇಲ್ಲದಿದ್ದರೆ ನಾನು ನಾಶವಾಗುತ್ತೇನೆ. ಜಗನ್ನಾಥರಾಯರು ಹೊಲೆಯರನ್ನು ಒಳಗೆ ಕರೆದುಕೊಂಡು ಬಂದಾಗ ನಾನೇ ಕೂಗಿ ಹೇಳುತೇನೆ, ಕೇಳಿ ಎಲ್ಲ ನಾಶವಾಯಿತು. ಇನ್ನು ನಾವೆಲ್ಲ ಸ್ವತಂತ್ರರು ೧. ಗಣೇಶನ ಈ ಕ್ರಾಂತಿಕಾರಿ ಆಲೋಚನೆಗಳು ಶತಮಾನಗಳಿಂದ ಕೊಳೆತು ನಾರುತ್ತಿರುವ ಜಾತಿ, ವರ್ಗ ವ್ಯವಸ್ಥೆಯನ್ನು ಬುಡ ಸಮೇತ ಕೀಳುವ ಪ್ರಬಲವಾದ ಕ್ರಾಂತಿಯ ಕಿಡಿಯಾಗಿದೆ. ಹೀಗೆ ಭಾರತೀಪುರ ಕಾದಂಬರಿಯಲ್ಲಿ ವರ್ಗ ಸಂಘರ್ಷ ಕೆಲವು ಜನರ ಸ್ವಾರ್ಥಕ್ಕೆ ಬಳಕೆಯಾಗುತ್ತದೆ. ಕೆಲವು ವ್ಯಕ್ತಿಗಳು ಅದರ ವಿರುದ್ಧ ಹೋರಾಟ ಮಾಡುತ್ತಾರೆ, ಈ ಕಾದಂಬರಿಯ ವಿಶೇಷವೆಂದರೆ ವರ್ಗ ಸಂಘರ್ಷದಲ್ಲಿ ನಿಜವಾಗಿ ತುಳಿತಕ್ಕೆ ಒಳಗಾದ ಕೆಳವರ್ಗದ ಹೊಲೆಯರು ಇದರ ಯಾವುದೇ ಸೋಂಕಿಗೆ ಒಳಗಾಗದೆ ತಮ್ಮ ಪಾಡಿಗೆ ತಾವು ಮೌನವಾಗಿ ಉಳಿಯುವುದು, ಅದು ಅವರ ಪ್ರತಿಭಟನೆಯೇ ಅಥವಾ ನಿರ್ಲಕ್ಷ್ಯವೇ ಕಾದಂಬರಿಯನ್ನು ಅರ್ಥೈಸಿಕೊಳ್ಳುವ ಅದು ನಮ್ಮ ನಮ್ಮ ತೀರ್ಮಾನಕ್ಕೆ ಬಿಟ್ಟ ವಿಷಯವಾಗಿದೆ.

೧. ಯು.ಆರ್. ಅನಂತಮೂರ್ತಿ- ಭಾರತೀಪುರ. ಪು.ಸಂ.೧೯೩

೧. ಯು. ಆರ್. ಅನಂತಮೂರ್ತಿ- ಭಾರತೀಪುರ. ಪು. ಸಂ ೧೯೩

೫. ಕಾದಂಬರಿಯ ಫಲಿತಗಳು

ವರುಷವೆಲ್ಲ ಬೆವರು ಸುರಿಸಿ, ಶ್ರಮಪಟ್ಟು, ದುಡಿದ ರೈತ ವರುಷದ ಅಂತ್ಯದಲ್ಲಿ ತನ್ನ ಬೆವರಿನ ಪ್ರತಿಫಲಕ್ಕೆ ಆಸೆಗಣ್ಣಿನಿಂದ ಎದುರು ನೋಡುತ್ತಿರುತ್ತಾನೆ, ಹಾಗೆಯೇ ನನ್ನ ನಿಬಂಧದ ವಿಷಯ ಚೋಮನ ದುಡಿ ಮತ್ತು ಭಾರತೀಪುರ ಕಾದಂಬರಿಗಳಲ್ಲಿ ಜಾತಿ ಮತ್ತು ವರ್ಗ ಸಂಘರ್ಷದ ಫಲಿತಾಂಶವನ್ನು ಈ ಅಧ್ಯಾಯನದಲ್ಲಿ ವಿಶ್ಲೇಷಣೆ ಮಾಡಿದ್ದೇನೆ.

ಚೋಮನ ದುಡಿ ಜಾತಿ ಸಂಘರ್ಷದ ಹಿನ್ನೆಲೆಯಲ್ಲಿ ವಿಶ್ಲೇಷಣೆ ಮಾಡಿದಾಗ ಈ ಕಾದಂಬರಿಯ ಪ್ರಧಾನ ಉದ್ದೇಶವೇ ಜಾತಿಯ ಅನಿಷ್ಟದಿಂದ ಕಾದಂಬರಿಯ ನಾಯಕ ಏನೆಲ್ಲ ಕಷ್ಟಕೋಟಲೆಗಳನ್ನು ಅನುಭವಿಸುತ್ತಾನೆ ಎಂಬುವುದನ್ನು ಎರಡನೆ ಅಧ್ಯಾಯದಲ್ಲಿ ಚರ್ಚೆ ಮಾಡಿದ್ದಾನೆ. ಕಾದಂಬರಿಕಾರ ಜಾತಿಯ ಖಡ್ಗವನ್ನು ಸಮರ್ಥವಾಗಿ ಕಾದಂಬರಿಯಲ್ಲಿ ಜಳಪಿಸಿದ್ದಾನೆ. ಕಾದಂಬರಿಯಲ್ಲಿ ಬರುವ ಸಂಕಪ್ಪಯ್ಯ ಮತ್ತು ಅವನ ತಾಯಿ ತಮ್ಮ ಜಾತಿಯನ್ನೇ ಮುಂದಿಟ್ಟುಕೊಂಡು ಅದರಿಂದ ತಾವುಗಳು ತಮ್ಮನ್ನು ರಕ್ಷಿಸಿಕೊಳ್ಳುತ್ತಾರೆ. ಈ ಇಬ್ಬರು ಯಾವುದೇ ಸಮಸ್ಯೆ ಬಂದರು ಮೊದಲು ಬೆಟ್ಟು ಮಾಡುವುದು ತಮ್ಮ ಜಾತಿಯ ಕಡೆಗೆ, ಅದು ತಮ್ಮನ್ನು ರಕ್ಷಿಸಿಕೊಳ್ಳುವ ಸಮಯವಿರಲಿ ಅಥವಾ ಅಧಿಕಾರದ ಗತ್ತನ್ನು ಪ್ರದರ್ಶಿಸುವ ಸಮಯವಿರಲಿ ಒಂದು ರೀತಿಯಲ್ಲಿ ತಮ್ಮ ಜಾತಿಯನ್ನು ತಾವು ರಕ್ಷಿಸುತ್ತಾ, ತಮಗೆ ಅರಿವಿಲ್ಲದೆಯೇ ಅದರಿಂದ ತಮ್ಮ ರಕ್ಷಣೆಯನ್ನು ಮಾಡಿಕೊಳ್ಳುತ್ತಾರೆ. ವೈದ್ಯನೊಬ್ಬ ಆ ವೃತ್ತಿಯನ್ನು ಸೇವಾಭಾವನೆಯಿಂದ ಕೈಗೊಂಡಿರುವುದಾಗಿ ಹೇಳಿ ಕೊಂಡರು, ಸಹ ಅದರಿಂದ ಅವನ ಜೀವನ ನಿರ್ವಹಣೆ ಮಾಡುವ ಸ್ವಾರ್ಥವು ಅಡಗಿರುವಂತೆ ಹಾಗೇ ಚೋಮನ ದುಡಿಯ ಸಂಕಪಯ್ಯ ಮತ್ತು ಅವನ ತಾಯಿ.

ಸಂಕಪ್ಪಯ್ಯ ಜೀವಿತದ ಕೊನೆಯವರೆಗೂ ಸಹ ತನ್ನ ಮನಸ್ಸನ್ನು ಬದಲಾಯಿಸುವುದಿಲ್ಲ, ಅವನ ಉದ್ದೇಶ ಒಂದೇ ತನ್ನ ಬ್ರಾಹ್ಮಣ ಜಾತಿಯನ್ನು ತಾನು ರಕ್ಷಿಸಿಕೊಳ್ಳಬೇಕು. ಚೋಮನ ಅವಿಶ್ರಾಂತ ದುಡಿಮೆಗೂ ಸಹ ಸಂಕಪಯ್ಯನ ಕಲ್ಲಿನ ಮನಸ್ಸು ಕರಗುವುದಿಲ್ಲ, ಅಂತಿಮವಾಗಿ ಅದಕ್ಕೆ ಬಲಿಯಾಗುವುದು ಚೋಮ ಮತ್ತು ಅವನ ಕುಟುಂಬ ಇದು ಕಾದಂಬರಿಯಲ್ಲಿ ಕಾರಂತರು ಯಶಸ್ವಿಯಾಗಿ ಚಿತ್ರಿಸಿದ್ದಾರೆ.
ಸಂಕಪ್ಪಯ್ಯ ತನ್ನ ತಾಯಿ ಬದುಕಿರುವವರೆಗೆ ಭೂಮಿಯನ್ನು ಗೇಣಿಗೆ ಕೊಡುವುದಿಲ್ಲವೆಂದು ಗೊತ್ತಿದ್ದರೂ ಚೋಮ ಒಮ್ಮೆಯೂ ಸಹ ತನ್ನ ಧಣಿಗಳ ವಿರುದ್ಧ ಸಿಡಿದೇಳುವುದಿಲ್ಲ ಚೋಮನಿಗೆ ವ್ಯವಸಾಯ ಮಾಡಬೇಕೆಂಬ ಹಂಬಲಕ್ಕೆ ಸಂಕಪ್ಪಯ್ಯ ಜಮೀನೆ ಬೇಕಾಗಿರಲಿಲ್ಲ ಅದಕ್ಕೆ ಕ್ರಿಸ್ತಿಯನ್

ಪಾದ್ರಿಯ ಬಳಿ ಜಮೀನು ಸಿಗುತಿತ್ತು. ಅಥವಾ ಸರಕಾರದಿಂದ ಪಡೆದುಕೊಳ್ಳಬಹುದಿತ್ತು ಹೀಗೆ ಹಲವು ದಾರಿಗಳು ಚೋಮನಿಗೆ ಬೇಸಾಯಗಾರನಾಗಲು ಅವಕಾಶ ಕಲ್ಪಿಸಿದ್ದವು, ಆದರೆ ಚೋಮ ಈ ರೀತಿ ಯಾವುದೇ ಬೇರೆ ಯೋಚನೆಯನ್ನು ಮಾಡುವುದಿಲ್ಲ ಏಕೆಂದರೆ ಕಾರಂತರಿಗೆ ನಿಜವಾಗಿ ಚೋಮ ಉದ್ಧಾರ ಆಗುವ ತುಡಿತ ಇಲ್ಲವೆನಿಸುತ್ತದೆ.

ಚೋಮನ ಮಾತಿಗೆ ಬೆಂಬಲವಾಗಿ ಆತನ ಮಗಳು ಬೆಳ್ಳಿ ಸಂಕಪಯ್ಯನನ್ನು ಬಿಟ್ಟರೆ ತಮಗೆ ಜೀವನದ ಗತಿ ಏನು? ಕೂಲಿಗೆ ಹೋಗಲಿ ಬಿಡಲಿ ತಮ್ಮ ಪಾಲಿನ ಅಕ್ಕಿಯನ್ನು ಕೊಡುವ ದಣಿಗಳು ಸಾಕ್ಷಾತ್ ದೈವಾಂಶ ಸಂಭೂತರು ಅವರನ್ನು ತಿರಸ್ಕರಿಸುವುದಿರಲಿ ಅವರ ಬಗ್ಗೆ ಚಕಾರವೆತ್ತುವ ಮನಸ್ಸು ಮಾಡುವುದಿಲ್ಲ

ಕಾರಂತರ ಚೋಮ ಮತ್ತು ಸಂಕಪಯ್ಯನ ಬಾಂಧವ್ಯ ಅದು ಮೂವತ್ತರ ದಶಕದಲ್ಲಿ ಮಾತ್ರ ಸಾಧ್ಯವಿತ್ತು. ಇಂದು ೨೧ನೇ ಶತಮಾನ ದಲಿತರೂ ಸಹ ಶಿಕ್ಷಣವನ್ನು ಪಡೆದು ಕೊಂಡು ಸಮಾಜದಲ್ಲಿ ಇತರ ಜಾತಿಯವರಂತೆ ಗೌರವದ ಜೀವನ ನಡೆಸುವ ಇಂದಿನ ದಿನಗಳಲ್ಲಿ ಚೋಮನ ದುಡಿ ಕಾದಂಬರಿ ಕಾರಂತರು ಯಾವುದೋ ಆದರ್ಶಕ್ಕೆ ಜೋತುಬಿದ್ದು ರಚಿಸಿರುವಂತೆ ಕಂಡುಬರುತ್ತದೆ.

ಚೋಮನ ದುಡಿಯಲ್ಲಿ ಬರುವ ನೀಲ ನೀರಲ್ಲಿ ಮುಳುಗಿ ಸಾವನ್ನು ಅಪ್ಪುವುದು, ಜಾತಿಯ ಕಾರಣದಿಂದ ನೀಲ ಹೊಲೆಯರ ಹುಡುಗನಾಗಿದ್ದರಿಂದ ಅಲ್ಲೇ ದಡದಲ್ಲಿದ್ದ ಬ್ರಾಹ್ಮಣರು ನೀನ್ನನ್ನು ಎತ್ತಲು ಬಂದ ತಮ್ಮ ಜಾತಿಯ ಯುವಕನನ್ನು ತಡೆಯುತ್ತಾರೆ, ನೀರಲ್ಲಿ ಮುಳುಗಿದ ನೀಲ ಮರಣ ಹೊಂದುತ್ತಾನೆ. ಅಷ್ಟು ಜನ ದಡದಲ್ಲಿ ಇದ್ದರೂ ನೀಲ ಹೊಲೆಯರ ಹುಡುಗ, ಆತ ಅಸ್ಪೃಶ್ಯ ಎಂಬ ಒಂದೇ ಕಾರಣಕ್ಕೆ ಅವನನ್ನು ರಕ್ಷಿಸದಿರುವುದು ಕರುಳು ಕೊರೆಯುವ ಸಂಗತಿ, ಬ್ರಾಹ್ಮಣರ ದೃಷ್ಟಿಯಲ್ಲಿ ಹೊಲೆಯರು ಮನುಷ್ಯರೆ ಅಲ್ಲವೆಂಬುವುದು ಅವರ ಲೆಕ್ಕಾಚಾರವೆಂಬಂತೆ ಈ ಸನ್ನಿವೇಶ ಸಹೃದಯರನ್ನು ದುಃಖದ ಮಡುವಿನಲ್ಲಿ ಮುಳುಗಿಸುತ್ತದೆ. ಕಾರಂತರ ಈ ಸನ್ನಿವೇಶ ಔಚಿತ್ಯ ಪೂರ್ಣವಾಗಿ ಚಿತ್ರವಾಗಿದೆ.
ಘಟ್ಟದ ಮೇಲಿನ ಕಾಫೀ ತೋಟದ ಮಿಂಗೇಲ ದೊರೆಗಳ ಬಳಿ ಚೋಮನ ಮಕ್ಕಳು ಕೂಲಿಯ ಆಳುಗಳಾಗಿ ಹೋದಾಗ ಅಲ್ಲಿ ಅವರಿಗೆ ದೊರೆಯುವ ಆತಿಥ್ಯ, ಕೊಡುವ ಕೂಲಿ, ಇವೆಲ್ಲವು ಕೆಳಜಾತಿಯುವರನ್ನು ಹೇಗೆ ನಡೆಸುತ್ತಿದ್ದರು, ಎಂಬುವುದನ್ನು ಕಾರಂತರು ಎಳೆ ಎಳೆಯಾಗಿ ಚಿತ್ರಿಸುತ್ತಾರೆ.

ಕಾರಂತರು ತಮ್ಮ ಕಾದಂಬರಿಯಲ್ಲಿ ಜಾತಿ ಸಂಘರ್ಷವನ್ನು ಸಮರ್ಥವಾಗಿ ಚಿತ್ರಿಸಿದ್ದಾರೆಂದು ಕಂಡರು ಸಹ, ಕಾರಂತರು ಬ್ರಾಹ್ಮಣರಾಗಿರುವ ಕಾರಣದಿಂದ ಇನ್ನು ಉತ್ತಮವಾಗಿ ಚಿತ್ರಿಸಬಹುದಿದ್ದ ಜಾತಿ ಸಂಘರ್ಷ ಕೆಲವೊಂದು ಕಡೆ ಮರೆಮಾಚಲ್ಪಟ್ಟಿದೆ, ಅಂತಹ ಕೆಲವೊಂದು ಸನ್ನಿವೇಶಗಳು ಈ ಕೆಳಗಿನಂತಿವೆ.

ಚೋಮ ಕಿರಿಸ್ತಿಯರ ಜಾತಿಗೆ ಸೇರಬೇಕೆಂದು ಹೋರಾಟ ಮಾಡಿ ಆತ ಪುಜುರ್ಲಿಯ ಭೂತದ ಬಳಿ ನಮಸ್ಕಾರ ಮಾಡಲು ಬಂದಾಗ ಕಾರಂತರು ಭೂತದ ಬಾಯಿಂದ ಹೇಳಿಸುವ ಮಾತುಗಳು ಚೋಮನನ್ನು ಎದುರಿಸುವ ಪ್ರಯತ್ನವನ್ನು ಮಾಡುವುದರ ಮೂಲಕ ತಮ್ಮ ಬ್ರಾಹ್ಮಣ್ಯವನ್ನು ಚೋಮ ತಿರಸ್ಕರಿಸದಂತೆ ನೋಡಿಕೊಳ್ಳುತ್ತಾರೆ. ಅದೇ ಒಬ್ಬ ದಲಿತ ಕಾದಂಬರಿಕಾರ ಇದೇ ಸನ್ನಿವೇಶವನ್ನು ಚಿತ್ರಿಸಿದ್ದರೆ, ಅದು ಪೂರ್ಣ ಪ್ರಮಾಣದ ಬಂಡಾಯವೇ ಆಗಿರುತಿತ್ತು.

ಕಾರಂತರು ಒಮ್ಮೆಯಾದರೂ ಚೋಮನಿಂದ ಸಂಕಪ್ಪಯ್ಯ ದಣಿಗಳಿಗೆ ತನ್ನ ಕಷ್ಟದ ಅರಿವನ್ನು ಮಾಡಿಸಬಹುದಿತ್ತು. ಆಗಲಾದರೂ ಸಂಕಪಯ್ಯನ ಮನಸ್ಸು ಕರಗುತಿತ್ತೋ ಏನೋ, ಆದರೆ ಕಾರಂತರು ಮೇಲ್ವರ್ಗದ ಜನರ ಮನಸ್ಸು ಪರಿವರ್ತಿಸುವ ಪ್ರಯತ್ನವನ್ನು ಮಾಡಿಲ್ಲ. ಕಾರಂತರರು ೭೦ರ ದಶಕದ ನಂತರ ಬಂದ ದಲಿತ ಸಾಹಿತ್ಯದ ಅರಿವಿದ್ದರೆ ಚೋಮನನ್ನು ಅವನ ಬದುಕನ್ನು ಆ ರೀತಿ ಚಿತ್ರಿಸುತ್ತಿರಲಿಲ್ಲ ಎನಿಸುತ್ತದೆ. ಒಂದು ವೇಳೆ ಚಿತ್ರಿಸಿದ್ದರೂ ಚೋಮನಿಗೆ ದಣಿಗಳ ವಿರುದ್ಧ ರೊಚ್ಚಿಗೇಳುವಂತೆ ಚಿತ್ರಿಸಬೇಕಾಗುತ್ತಿತ್ತು.

ಕಾರಂತರು ದಲಿತ ವರ್ಗದ ಕಣ್ಣೊರೆಸಲು, ತಾನು ದಲಿತರ ಪರವೆಂದು ಹೇಳಿಕೊಳ್ಳಲು ಗುರುವನನ್ನು ಕ್ರಿಸ್ತಿಯನ್ ಧರ್ಮಕ್ಕೆ ಹೋಗಲು ಅವಕಾಶ ಕೊಡುತ್ತಾರೆ. ಆದರೆ ಚೋಮನ ವಿಷಯದಲ್ಲಿ ಕಾರಂತರಿಗೆ ಅದು ಸರಿಕಾಣುವುದಿಲ್ಲ. ಏಕೆಂದರೆ ಚೋಮ ಕಾದಂಬರಿಯ ಮುಖ್ಯಪಾತ್ರ, ಸಣ್ಣಪುಟ್ಟ ಪಾತ್ರಗಳು ಕೈತಪ್ಪಿದರು ಮುಖ್ಯ ಪಾತ್ರ ತಮ್ಮ ಅಂಕೆಯಲ್ಲೇ ಅರಳಿಸುವ ಕಾರ್ಯ ಮಾಡಿದ್ದಾರೆ.

ಹೀಗೆ ಕಾರಂತರು ಕಾದಂಬರಿಯ ಜಾತಿ ಸಂಘರ್ಷದ ಅಂಶಗಳನ್ನು ತರುವಾಗ ಅವರು ತಮ್ಮ ಜಾತಿಯ ಕಾರಣದಿಂದ ಕೆಲವು ಸಮಯದಲ್ಲಿ ಪೇಚಿಗೆ ಸಿಲುಕುವುದು ಕಾದಂಬರಿಯಲ್ಲಿ ಕಾಣಬಹುದು. ಅದೇ ಒಬ್ಬ ಕೆಳಜಾತಿಯ ಲೇಖಕ ಈ ಕಾದಂಬರಿಯನ್ನು ಚಿತ್ರಿಸಿದ್ದರೆ ಅವನು [illegible]

[illegible]

ಇಡೀ ಮೇಲ್ಜಾತಿಯ ಸಂಕಪಯ್ಯನ ವರ್ಗವನ್ನು ಕಾಲ್ಚೆಂಡು ಮಾಡಿ ಜಾಡಿಸಿ ಬಿಡುತ್ತಿದ್ದರೇನೋ ಆದರೆ ಕಾರಂತರು ಸೌಮ್ಯ ನೆಲೆಯಲ್ಲೆ ಎರಡು ಜಾತಿಗಳನ್ನು ಚಿತ್ರಿಸಲು ಪ್ರಯತ್ನಿಸುತ್ತಾರೆ. ನನ್ನ ಆಯ್ಕೆಯ ಮತ್ತೊಂದು ಕಾದಂಬರಿ ಭಾರತೀಪುರವನ್ನು ಬರೆದ ಅನಂತಮೂರ್ತಿಯವರು ಸಹ ಹುಟ್ಟಿನಲ್ಲಿ ಮೇಲ್ಜಾತಿಯ ಬ್ರಾಹ್ಮಣರು. ಅವರ ಕಾದಂಬರಿಯ ವಿಷಯವು ಸಮಾಜದ ದಲಿತ ವರ್ಗವನ್ನು ಮೇಲೆತ್ತುವ ಪ್ರಯತ್ನವನ್ನು ಮಾಡುತ್ತಾರೆ. ಯು.ಆರ್. ಅನಂತಮೂರ್ತಿಯವರ ಕಾದಂಬರಿ ರಚನೆಯಾಗಿದ್ದು ೭೦ರ ದಶಕದಲ್ಲಿ ಆ ವೇಳೆಗಾಗಲೆ ಭಾರತಕ್ಕೆ ಸ್ವಾತಂತ್ರ್ಯ ಬಂದು, ಸರ್ಕಾರ ಸಮಾಜದ ಪ್ರತಿಯೊಬ್ಬರಿಗೂ ಶಿಕ್ಷಣ, ಸಮಾನತೆ, ಸ್ವಾತಂತ್ರ್ಯವನ್ನು ಘೋಷಣೆ ಮಾಡಿತ್ತು, ಹಾಗಾಗಿ ಅನಂತಮೂರ್ತಿಯವರು ಹೊಲೆಯರನ್ನು ಹೆಚ್ಚು ಗೋಳು ಹಾಕಿಸುವಂತಿರದೆ, ಅವರಿಗೆ ಸಮಾನತೆ ಕೊಡಬೇಕು, ಗೌರವ ಕೊಡಬೇಕೆಂಬ ಭಾವನೆಗಳು ವ್ಯಕ್ತವಾಗುವ ರೀತಿ ತಮ್ಮ ಕಾದಂಬರಿಯಲ್ಲಿ ಬದಲಾವಣೆ ಮಾಡಿಕೊಂಡಿದ್ದಾರೆ,

ಶ್ರೀಪತಿರಾಯರು, ಚಿಕ್ಕಿ, ನರಹರಿರಾಯರು, ನಾಗರಾಜ ಜೋಯಿಸರು, ಸೀತಾರಾಮಯ್ಯ ಮೊದಲಾದ ಹಳೆ ತಲೆಮಾರಿನ ಬ್ರಾಹ್ಮಣರನ್ನು ಬಿಟ್ಟರೆ ಈ ಕಾದಂಬರಿಯಲ್ಲಿ ಬರುವ ಹೆಚ್ಚು ಕಡಿಮೆ ಎಲ್ಲಾ ಪಾತ್ರಗಳು ದಲಿತರ ಉದ್ಧಾರದ ಯೋಚನೆಯನ್ನು ಸ್ವಾರ್ಥಕ್ಕಾಗಿಯೋ ಅಥವಾ ಉದ್ದೇಶಪೂರ್ವಕವಾಗಿಯೇ ಮಾಡುತ್ತವೆ.

ಅನಂತಮೂರ್ತಿಯವರ ಕಾದಂಬರಿಯ ನಾಯಕ ಕೇವಲ ಕ್ರಿಯೆಯ ಮೂಲಕ ಎಲ್ಲವನ್ನು ಸಾಧಿಸಲು ಸಾಧ್ಯವೆಂದು ಹೊರಡುವ ಜಗನ್ನಾಥ, ನಿಜವಾಗಿ ದಲಿತರ ಮನಸ್ಸು ಅರಿಯುವ ಪ್ರಯತ್ನದಲ್ಲಿ ವಿಫಲನಾಗುತ್ತಾನೆ. ಅವನು ದಲಿತರಿಗೆ ಮೇಲ್ಜಾತಿಯವರಂತೆ ಬಿಳಿಬಟ್ಟೆ ಹಾಕಲು ಹೇಳಿ ಅವುಗಳನ್ನು ತಾನೆ ತಂದು ಕೊಡುವುದು, ಅಂತಹ ಶುಭ್ರವಾದ ಬಿಳಿಬಟ್ಟೆಗಳನ್ನು ಹಾಕಲು ಮುಜುಗರ ಪಟ್ಟುಕೊಂಡ ಹೊಲೆಯರು ಪಂಚೆಯನ್ನು ಹರಿದು ಲಂಗೋಟಿ ಕಟ್ಟಿಕೊಳ್ಳುವುದು, ಅಂಗಿಯ ಕಾಲರನ್ನು ಒಳಗೆ ಮಡಿಚಿ ಹಾಕಿಕೊಳ್ಳುವುದು. ಜಗನ್ನಾಥ ಸಾಲಿಗ್ರಾಮದ ಪವಿತ್ರತೆಯನ್ನು ಅಲ್ಲಗಳೆಯಲು ಅದನ್ನು ಹೊಲೆಯರ ಹುಡುಗರಿಂದ ಮುಟ್ಟಲು ಹೇಳಿದಾಗ ಅವರು ನಿಜವಾದ ಆಸಕ್ತಿಯಾಗಲಿ, ಕುತೂಹಲವಾಗಲಿ ತೋರದೆ ಜಗನ್ನಾಥನ ಬೆದರಿಕೆಗೆ ಹೆದರಿ ಮುಟ್ಟುವ ಶಾಸ್ತ್ರವನ್ನು ಮಾಡುತ್ತಾರೆ, ಮುಂದೆ ಜಗನ್ನಾಥ ಹೊಲೆಯರನ್ನು ದೇವಸ್ಥಾನದೊಳಗೆ ಕರೆದುಕೊಂಡು ಹೋಗಬೇಕೆಂದು ಹೇಳಿದಾಗ ದಲಿತರು ಜಗನ್ನಾಥನ ಬೆದರಿಕೆಗೆ ಹೆದರಿ ಹೋಗುತ್ತಾರೆ. ಇದು ಅವರ ಒಳಗಿನ ನಿಜವಾದ ತುಡಿತದಿಂದಲ್ಲ. ಜಗನ್ನಾಥ ಕೇವಲ ಬಾಹ್ಯ ಪ್ರೇರಣೆಯಿಂದ ಹೊಲೆಯರನ್ನು ಸಮಾಜದ

ಮುಖ್ಯವಾಹಿನಿಗೆ ತರಲು ಪ್ರಯತ್ನಿಸಿ ಅಂತಿಮವಾಗಿ ಸೋಲನ್ನು ಅನುಭವಿಸುತ್ತಾನೆ, ಆದರೆ ಜಗನ್ನಾಥ ಒಬ್ಬ ಜಮೀನ್ದಾರಿ, ಮನೆತನಕ್ಕೆ ಸೇರಿದ ವ್ಯಕ್ತಿ ತನ್ನ ಜಮೀನನ್ನು ಹೊಲೆಯರಿಗೆ ದಾನ ಕೊಡುವುದರ ಮೂಲಕ ಅವರ ಬಡತನವನ್ನು ಹೋಗಲಾಡಿಸುವುದರ ಮೂಲಕ ಅವರನ್ನು ಬದಲಾಯಿಸಲು ಪ್ರಯತ್ನಿಸಿದರೆ ಅವನನ್ನು ಮೆಚ್ಚಬಹುದಿತ್ತು. ಇಲ್ಲಿ ಕಾದಂಬರಿಕಾರ ಜಗನ್ನಾಥನ ಮೂಲಕ ದಲಿತರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಲು ಪ್ರಯತ್ನಿಸಿದರೂ ಅಲ್ಲಿಯು ಸಹ ಸ್ವಾರ್ಥದ ಉದ್ದೇಶ ಇಲ್ಲದೆ ಇರುವುದಿಲ್ಲ.

ಜಗನ್ನಾಥ ಹೊಲೆಯರ ಉದ್ಧಾರದ ಮೂಲಕ ಅವನ ಅಸ್ತಿತ್ವವನ್ನು ಗುರುತಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಅವನು ಕೇವಲ ತನ್ನನ್ನು ಸಮಾಜ ಆನಂದರಾಯರ ಮಗನೆಂದು ಗುರುತಿಸದೆ, ತನ್ನ ಸ್ವ ಪ್ರಯತ್ನದಿಂದ ಏನಾದರೂ ಸಾಧಿಸಬೇಕು ಆ ಮೂಲಕ ಸಮಾಜ ತನ್ನನ್ನು ವಿಶೇಷವಾಗಿ ಗುರುತಿಸಬೇಕೆಂಬ ನಿರೀಕ್ಷೆಯು, ಮಹತ್ವಾಕಾಂಕ್ಷೆಯು ಜಗನ್ನಾಥನಿಗೆ ಇರುತ್ತದೆ.

ಅನಂತಮೂರ್ತಿಯವರು ಜಗನ್ನಾಥನ ಮೂಲಕ ತಮ್ಮ ಜಾತಿ ಸಂಘರ್ಷಕ್ಕೆ ಒಳ್ಳೆಯ ತಿರುವು ಕೊಡಲು ಆಗದಿದ್ದಾಗ ಅದಕ್ಕಾಗಿ ಆಯ್ಕೆ ಮಾಡಿಕೊಳ್ಳುವುದು ಸೀತಾರಾಮಯ್ಯನ ಮಗ ಗಣೇಶನನ್ನ. ಗಣೇಶ ಮಂಜುನಾಥಸ್ವಾಮಿಯ ಮುಖ್ಯ ಅರ್ಚಕ ಸೀತಾರಾಮಯ್ಯನ ಮಗ ತಂದೆಯಿಂದ ಮಂಜುನಾಥನ ಮಹಿಮೆಯನ್ನು ಕಾರಣೀಕತ್ವವನ್ನು ಕೇಳಿ ಕೇಳಿ ಕಿವಿ ತೂತು ಬಿದ್ದ ಹುಡುಗ. ಮಂಜುನಾಥ ಸ್ವಾಮಿಯು ಸೂರ್ಯ ಚಂದ್ರ ಇರುವವರೆಗೆ ಶಾಶ್ವತವಾದದ್ದು ಅದನ್ನು ನಾಶಮಾಡುವ ನರ ಪಿಳ್ಳೆ ಇನ್ನು ಹುಟ್ಟಿಲ್ಲವೆಂದು ಉದ್ದುದ್ದ ಮಾತುಗಳನ್ನು ಕೇಳಿದಾಗ ಗಣೇಶನಿಗೆ ಮೈಯಲ್ಲ ಬೆಂಕಿಯ ಜ್ವಾಲೆಯಾಗುತಿತ್ತು. ತಂದೆಯ ಮೇಲಿನ ಸಿಟ್ಟು, ಮಂಜುನಾಥನ ಮೇಲೆ ಭಾರತೀಪುರಕ್ಕೆ ಇದ್ದ ನಂಬಿಕೆ ಇವೆಲ್ಲವನ್ನು ಒಮ್ಮೆಲೆ, ತಿರಸ್ಕರಿಸಲು ರಾತ್ರೋರಾತ್ರಿ ಹೋಗಿ ಮಂಜುನಾಥನ ಗರ್ಭಗುಡಿಗೆ ನುಗ್ಗಿ ಮಂಜುನಾಥ ಸ್ವಾಮಿಯ ಲಿಂಗವನ್ನು ಅಗೆದು ತಂದು ಹೊಳೆಗೆ ಎಸೆಯುತ್ತಾನೆ. ಇಲ್ಲಿ ಗಣೇಶ ಯಾರನ್ನು ಮೆಚ್ಚಿಸಲು ಯಾರನ್ನು ಉದ್ಧಾರ ಮಾಡಲು ಮಾಡುವ ಕೆಲಸವಲ್ಲ, ಯಾವುದರ ಬಾಹ್ಯ ಪ್ರೇರಣೆಯಿಲ್ಲದೆ ಶತಮಾನಗಳಿಂದ ಬಂದಿರುವ ಮೌಢ್ಯವನ್ನು ತಿರಸ್ಕರಿಸಲು ಗಣೇಶ ಮುಖ್ಯವಾದ ಮಂಜುನಾಥ ಸ್ವಾಮಿಯ ಲಿಂಗವನ್ನೇ ಕಿತ್ತೆಸೆಯುವುದು ಅದು ಅನಂತಮೂರ್ತಿಯವರ ಕ್ರಾಂತಿಕಾರಿ ವಿಚಾರಗಳ ಪ್ರತೀಕ.

ಹೀಗೆ ಅನಂತಮೂರ್ತಿಯವರು ಜಾತಿಸಂಘರ್ಷದ ವಿಚಾರವನ್ನು ತಮ್ಮ ಕಾದಂಬರಿಯಲ್ಲಿ ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಕಾದಂಬರಿಯ ಆರಂಭದಿಂದ ಜಗನ್ನಾಥನ ಚಟುವಟಿಕೆಗಳನ್ನು ನೋಡಿದಾಗ ಕೇವಲ ಇದು ಸೋಗಲಾಡಿತನ, ಬೊಗಳೆ, ಪಾಶ್ಚಾತ್ಯ ಶಿಕ್ಷಣದ ಪ್ರಭಾವ, ಅತೀಯಾದ ಆದರ್ಶ ಎನಿಸಿದರೂ, ಗಣೇಶನ ಪಾತ್ರದ ವೇಳೆಗೆ ಅನಂತಮೂರ್ತಿ ನಿಜವಾಗಿಯೂ ಇಡೀ ವ್ಯವಸ್ಥೆಯನ್ನು ವಿರೋಧಿಸುವ ಕೆಲಸವನ್ನು ಮಾಡುವುದು ಆಶ್ಚರ್ಯವೆನಿಸುತ್ತದೆ, ಅನಂತಮೂರ್ತಿ ಅವರು ತಮ್ಮ ಜಾತಿಯ ಅಭಿಮಾನವನ್ನು ಬಿಟ್ಟು ಅದರೊಳಗಿನ ಕೊಳಕನ್ನು, ಡಾಂಭಿಕತನವನ್ನು ಬಯಲು ಮಾಡುವುದು ಜಗನ್ನಾಥನ ಜನ್ಮರಹಸ್ಯವನ್ನು ಮುಚ್ಚಿಕೊಳ್ಳದೆ ಮೇಲ್ಜಾತಿಯಲ್ಲಿರುವ ಭ್ರಷ್ಟತೆಯನ್ನು ಬಯಲಿಗೆಳೆಯುವುದು ಅವರ ಕ್ರಾಂತಿಕಾರಿ ದೋರಣೆಯನ್ನು ಸೂಚಿಸುತ್ತದೆ, ಒಟ್ಟಿನಲ್ಲಿ ಅನಂತಮೂರ್ತಿಯವರು ಕೆಳಜಾತಿಯ ಹೊಲೆಯರನ್ನು ಸಂಪೂರ್ಣ ಉದ್ದಾರ ಮಾಡಲು ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಪ್ರಯತ್ನದಲ್ಲಿ ವಿಫಲರಾದರು, ಒಂದು ಪುಟ್ಟ ಪ್ರಯತ್ನವನ್ನು ಈ ಕಾದಂಬರಿಯ ಮೂಲಕ ಮಾಡಿದ್ದಾರೆ.

ಚೋಮನ ದುಡಿ ಮತ್ತು ಭಾರತೀಪುರದಲ್ಲಿ ವರ್ಗಸಂಘರ್ಷದ ಅಂಶಗಳು ಸನ್ನಿವೇಶದ ಜೊತೆಗೆ ತಳುಕು ಹಾಕಿಕೊಂಡು ಅಲ್ಲಲ್ಲಿ ಕಾಣಸಿಗುತ್ತವೆ. ಅಂತಹ ಸನ್ನಿವೇಶವನ್ನು ಈ ಹಿಂದಿನ ಅಧ್ಯಾಯದಲ್ಲಿ ಗುರುತಿಸಿ ಹೇಳಿದ್ದೇನೆ, ಇಲ್ಲಿ ವರ್ಗ ಸಂಘರ್ಷವನ್ನು ತರುವಲ್ಲಿ ಕಾದಂಬರಿಗಳು ಎಷ್ಟು ಸಫಲವಾಗಿವೆ ಎಂಬುವುದನ್ನು ಕುರಿತು ತಿಳಿದುಕೊಳ್ಳೋಣ.

ಚೋಮನ ದುಡಿಯಲ್ಲಿ ಬರುವ ಸಂಕಪಯ್ಯ ಮೇಲ್ವರ್ಗದ ನಾಯಕ, ಅವನು ತನ್ನ ಮೇಲ್ವರ್ಗವನ್ನೇ ಬಂಡವಾಳವಾಗಿಟ್ಟುಕೊಂಡು ಕೆಳವರ್ಗದ ಚೋಮನ ಕುಟುಂಬವನ್ನು ತನ್ನ ಆಣತಿಯಂತೆ ನಡೆಸುತ್ತಿರುತ್ತಾನೆ. ಅದಕ್ಕೆ ಪೂರಕವಾಗಿ ಚೋಮ ಕೆಳವರ್ಗದಲ್ಲಿ ಹುಟ್ಟಿರುವ ತಾನು ಮೇಲ್ವರ್ಗದವರ ಸೇವೆಯನ್ನು ಮಾಡುವುದೇ ವಿನಃ ಅದನ್ನು ಬಿಟ್ಟು ತನಗೆ ಅನ್ಯಮಾರ್ಗವಿಲ್ಲ, ಅದರಲ್ಲೇ ತನ್ನ ಉದ್ಧಾರವನ್ನು ಕಂಡುಕೊಳ್ಳಲು ದಣಿಯ ಸೇವೆಯಲ್ಲೇ ತನ್ನ ಬದುಕನ್ನು ಹುಡುಕಲು ಹೊರಟು ಕೊನೆಗೆ ದಣಿಯರ ಪಾದದೂಳಿಯಾಗಿ ಅಂತ್ಯವನ್ನು ಕಾಣುತ್ತಾನೆ, ಇವನ ನಂತರ ಇವನ ಚನಿಯ, ಬೆಳ್ಳಿ, ನೀಲರದು ಇದೇ ದಾರಿ, ಇಲ್ಲಿ ವರ್ಗ ವ್ಯವಸ್ಥೆಯ ವಿರುದ್ಧ ಸಿಡಿದೇಳುವ ಪಾತ್ರವೆಂದರೆ ಗುರುವನದು, ತಂದೆಯಿಂದ ದೂರ ಉಳಿದರು ತನ್ನ ಜಾತಿ ಮತ್ತು ವರ್ಗವನ್ನು ಮೀರಿ ಬೆಳೆಯಲು ಪ್ರಯತ್ನಿಸುತ್ತಾನೆ. ಅದು ಕೆಳಜಾತಿಯ ಹೊಲೆಯುರ ಜಾತಿ ಮತ್ತು ಧರ್ಮದಿಂದ ಹೊರಬಂದು ಕಿರಿಸ್ತಿಯನ್ನರ ಮೇರಿಯನ್ನು ಮದುವೆಯಾಗುವುದರ ಮೂಲಕ ಆತ ಇಡೀ ವ್ಯವಸ್ಥೆಯನ್ನು ದಿಕ್ಕರಿಸುತ್ತಾನೆ.

ಇಲ್ಲಿ ಕಾದಂಬರಿಕಾರ ಗುರುವನ ಮೂಲಕ ಹೊಲೆಯರ ಜೀವನ ಬದಲಾವಣೆಯ ಸೂಚನೆಯನ್ನು ಸೂಕ್ಷ್ಮವಾಗಿ ಹೇಳುತ್ತಾರೆ, ಆದರೆ ಚೋಮುನಂತಹ ಹಿರಿಯ ಜೀವಗಳು ತಮ್ಮ ಸಂಪ್ರಾದಾಯವನ್ನು ಜಾತಿಯನ್ನು ಬಿಡುವುದಿಲ್ಲವೆಂದು ಹೇಳಿದರೆ, ಗುರುವನಂತಹ ಹೊಸ ತಲೆಮಾರು ಅವರು ಬದಲಾವಣೆಗಾಗಿಯೇ ಹುಟ್ಟಿರುವರೆಂಬಂತೆ ಗುರುವನ ಮೂಲಕ ಅದನ್ನು ಮಾಡಿಸುತ್ತಾರೆ. ಅಂತಿಮವಾಗಿ ಬೆಳ್ಳಿಯೂ ಸಹ ತನ್ನ ಅಣ್ಣ ಗುರುವ ಉದ್ದೇಶ ಸರಿಯಾದದೆಂದು ಅದಕ್ಕೆ ತಮ್ಮ ಒಪ್ಪಿಗೆಯು ಇದೆ ಎನ್ನುವಂತಹ ಮಾತನ್ನಾಡುತ್ತಾಳೆ.

ಕಾಫೀ ತೋಟದ ಮಿಂಗೇಲ ದೊರೆಗಳು ಕೆಳವರ್ಗದವರಿಂದ ಕೆಲಸ ಮಾಡಿಸಿಕೊಂಡರು ಅವರಿಗೆ ಸರಿಯಾದ ಸವಲತ್ತುಗಳನ್ನು, ಕೂಲಿಯನ್ನು ಕೊಡದೆ ಅವರು ಮತ್ತಷ್ಟು ದುರ್ಬಲರಾಗಿ, ಬಡವರಾಗಿರಲು ಕಾರಣರಾಗುವುದು ಕಾದಂಬರಿಯಲ್ಲಿ ಕಾರಂತರು ಬಿಂಬಿಸಿದ್ದಾರೆ, ಅವರು ಎಷ್ಟೇ ಕೆಳವರ್ಗದವರ ಶೋಷಣೆ ಮಾಡಿದರೂ ಸಹ ಅಂತಿಮವಾಗಿ ಅವರಿಗೆ ಸೋಲು ಎಂಬುವುದನ್ನು ಕಾದಂಬರಿಕಾರ ಹೇಳುತ್ತಾನೆ, ಸ್ವಾತಂತ್ರ್ಯ ಬಂದ ನಂತರ ಮಿಂಗೇಲ ಕಾಫೀ ತೋಟವನ್ನು ತೊರೆದು ಇಂಗ್ಲೆಂಡಿಗೆ ಓಡಿಹೋಗುತ್ತಾನೆ. ಮನ್ವೇಲನ ಸ್ಥಿತಿಯು ಅತಂತ್ರವಾಗುತ್ತದೆ. ಅದಕ್ಕೆ ಮುಂಚೆ ಮನ್ವೇಲ ಮತ್ತು ಮಿಂಗೇಲರು ತಾವು ಮೇಲ್ವರ್ಗದವರು ಆಳ್ವಿಕೆ ಮಾಡಲೆ ಬಂದವರೆಂಬಂತೆ ದರ್ಪ, ದಬ್ಬಾಳಿಕೆಯನ್ನು ತನ್ನ ಕಾಫೀ ತೋಟದ ಆಳುಗಳ ಮೇಲೆ ತೋರಿಸುತ್ತಿರುತ್ತಾರೆ. ಜೊತೆಗೆ ಕಾಫೀ ತೋಟದ ಕೂಲಿಗೆ ಬಂದ ಬೆಳ್ಳಿಯಂತಹ ಸುಂದರ ಯುವತಿಯರು ಅವರ ದೌರ್ಜನ್ಯಕ್ಕೆ ಬಲಿಯಾಗಿ ಜೀವನವನ್ನು ಹಾಳುಮಾಡಿಕೊಳ್ಳುವ ಸಂಗತಿಯನ್ನು ಕಾದಂಬರಿಕಾರ ಹೇಳುತ್ತಾನೆ.

ಕಾಫೀ ತೋಟದಲ್ಲಿ ಕೂಲಿಗಳು ನಡೆಸುವ ಹೀನಾಯ ಜೀವನ ಕೆಳವರ್ಗದವರನ್ನು ಮೇಲ್ವರ್ಗದವರು ಹೇಗೆ ನಡೆಸಿಕೊಳ್ಳುತ್ತಿದ್ದರೆಂಬುವುದರ ಪ್ರತ್ಯಕ್ಷ ದರ್ಶನವನ್ನು ಕಾದಂಬರಿಕಾರ ಮಾಡಿಸುತ್ತಾನೆ.

ಭಾರತೀಪುರ ಕಾದಂಬರಿಯಲ್ಲಿ ವರ್ಗ ಸಂಘರ್ಷದ ಸನ್ನಿವೇಶಗಳು ಹೇರಳವಾಗಿ ಸಿಗುತ್ತವೆ. ಆ ಎಲ್ಲ ಸನ್ನಿವೇಶಗಳನ್ನು ಕಾದಂಬರಿಕಾರ ಯು.ಆರ್. ಅನಂತಮೂರ್ತಿ ಸಹಜವಾಗಿ ಚಿತ್ರಿಸಿದ್ದಾರೆ. ಕಾದಂಬರಿಯ ಮುಖ್ಯ ತಿರುಳು ಮೇಲ್ವರ್ಗದ ನಾಯಕನ ಮೂಲಕ ಕೆಳವರ್ಗದ ಹೊಲೆಯರನ್ನು ಗೌರವಯುತ ಜೀವನ ನಡೆಸುವ ಹಾಗೆ ಮಾಡುವುದು ಕಾದಂಬರಿಯ ನಾಯಕ ಜಗನ್ನಾಥ ತನ್ನ ಆದರ್ಶಗಳನ್ನು, ಕನಸುಗಳನ್ನು ಬಲವಂತವಾಗಿ ಹೊಲೆಯರ ಮೇಲೆ ಏರಿ ಅಮೂಲಕ ಅವುಗಳು

ಪ್ರಾಯೋಗಿಕಗೊಳಿಸಲು ನೋಡಿ ಸೋಲುತ್ತಾನೆ. ಜಗನ್ನಾಥ ವಿದ್ಯಾವಂತನಾದರು ತನ್ನ ಆಲೋಚನೆಗಳಿಗೆ, ವಿಚಾರಗಳಿಗೆ ಕೆಳವರ್ಗದ ಹೊಲೆಯರು ಸ್ಪಂದಿಸುತ್ತಾರೆಯೇ? ಅವರಿಗೆ ಅದರ ಅವಶ್ಯಕತೆ ಇದೆಯೇ? ಎಂದು ಸಹ ಯೋಚನೆ ಮಾಡದೆ ಅಂತಿಮವಾಗಿ ಅವರಿಂದ ತಿರಸ್ಕೃತನಾಗುತ್ತಾನೆ. ಜಗನ್ನಾಥ ಸುಖ ಸುಮ್ಮನೆ ಹೊಲೆಯರಿಗೆ ತೊಂದರೆ ಕೊಡುವ ಮೇಲುವರ್ಗದ ಯಜಮಾನ್ಯ ಸಂಸ್ಕೃತಿಯ ಪ್ರತಿನಿಧಿಯಾಗುತ್ತಾನೆ, ಈ ಮೇಲ್ವರ್ಗದ ಪ್ರತಿನಿಧಿಯದು ಎಂತಹ ಸೋಗಲಾಡಿತನದ ಮಿಂಡನ ಬದುಕು ಎಂಬುವುದನ್ನು ಕಾದಂಬರಿಕಾರ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಹೊಲೆಯರ ಕಣ್ಣುಗಳಲ್ಲಿ ತನ್ನ ಕನಸುಗಳನ್ನು ಅರಳಿಸಿ ಕೊಳ್ಳುವ ಅಸ್ತಿತ್ವವಾದಿಯಾಗಿ, ಪೊಳ್ಳು ಆದರ್ಶಗಳನ್ನು ಅಪ್ಪಿಕೊಂಡ ಬೊಗಳೆತನದ ವ್ಯಕ್ತಿತ್ವ ಜಗನ್ನಾಥನದು, ಅದಕ್ಕೆ ಅಂತಿಮವಾಗಿ ಸೋಲನ್ನು ಒಪ್ಪಿಕೊಳ್ಳುತ್ತಾನೆ.

ಹೀಗೆ ನನ್ನ ಆಯ್ಕೆಯ ಎರಡು ಕಾದಂಬರಿಗಳಲ್ಲಿ ಜಾತಿ ಮತ್ತು ವರ್ಗ ಸಂಘರ್ಷದ ಅಂಶಗಳು ಇಬ್ಬರು ಮೇಲ್ವರ್ಗದ ಲೇಖಕರಿಂದ ಚಿತ್ರವಾಗಿರುವುದನ್ನು ಗಮನಿಸಿದಾಗ ಈ ಸಮಸ್ಯೆ ಕೇವಲ ಆಯಾ ಲೇಖಕರ ಕಾಲಕ್ಕೆ ಮಾತ್ರ ಸೀಮಿತವಾಗಿಲ್ಲ. ಅದು ಇಂದಿಗೂ ಸಹ ಜೀವಂತವಾಗಿವೆ ಚೋಮನಂತಹ ಹತ್ತಾರು ಜೀವಗಳು ಸಮಾಜದ ಗಮನಕ್ಕೆ ಬಾರದೆ ನರಳುತ್ತಿರುವುದನ್ನು, ಜಗನ್ನಾಥನಂತೆ ಹರಿಜನೋದ್ಧಾರದ ಆದರ್ಶವಾದಿಗಳನ್ನು ಮಿಂಗೇಲ ಮನ್ವೇಲರಂತೆ ತೋಟದ ದಣಿಗಳು ನಮ್ಮ ಸಮಾಜದಲ್ಲಿ ವಾಸ್ತವ್ಯ ಹೂಡಿದ್ದಾರೆ, ಆದರೆ ಒಂದೇ ಬದಲಾವಣೆ ಅವರವರ ಮುಖವಾಡಗಳು, ವೇಷ -ಭೂಷಣಗಳು ಬದಲಾಗಿವೆ, ಅವರ ಉದ್ದೇಶ ಮಾತ್ರ ಅಂದಿಗೂ ಇಂದಿಗೂ ಏನು ವ್ಯತ್ಯಾಸವಿಲ್ಲದಿರುವುದನ್ನು ಕಾಣಬಹುದು. ಕಾದಂಬರಿಯಲ್ಲಿ ಚೋಮನ ಸಾವು ಕೇವಲ ಸಾಂಕೇತಿಕವಷ್ಟೇ. ಚೋಮ ದೈಹಿಕವಾಗಿ ಅಳಿದಿರಬಹುದು. ಆದರೆ ಅವನ ಮೌನ ಪ್ರತಿಭಟನೆ ಸಮಾಜೀಕ ವ್ಯವಸ್ಥೆ ಇರುವವರೆಗೂ ಮುಂದುವರೆಯುತ್ತಲೆ ಇರುತ್ತದೆ. ಚೋಮನಂತೆ ತುಳಿತಕ್ಕೆ ಒಳಗಾದ ವರ್ಗದಿಂದ ಪ್ರತಿಭಟನೆ ಮುಂದುವರೆಯುತ್ತದೆ.

೬. ಉಪಸಂಹಾರ

ಡಾ. ಕೆ. ಶಿವರಾಮ ಕಾರಂತ ಮತ್ತು ಯು. ಆರ್. ಅನಂತಮೂರ್ತಿಯವರಿಂದ ರಚಿತವಾದ ಚೋಮನ ದುಡಿ ಮತ್ತು ಭಾರತೀಪುರ ಕಾದಂಬರಿಗಳು ಸಮಾಜದ ಕೆಳಸ್ತರದ ಹೊಲೆಯರನ್ನು ಗುರಿಯಾಗಿಟ್ಟುಕೊಂಡು ರಚಿತವಾದ ಕಾದಂಬರಿಗಳು. ಆದರೆ ಅವುಗಳನ್ನು ರಚಿಸಿದ ಕಾದಂಬರಿಕಾರರು ಮಾತ್ರ ಮೇಲ್ವರ್ಗದವರು. ಸಾಮಾನ್ಯವಾಗಿ ಮೇಲ್ಜಾತಿಯ ಲೇಖಕನೊಬ್ಬ ಕೆಳಜಾತಿಯ ವಿಷಯವನ್ನು ವಸ್ತುವಾಗಿ ತೆಗೆದುಕೊಂಡಾಗ ಅದನ್ನು ಕೇವಲ ಸಾಂಕೇತಿಕ ರೂಪಕಗಳಂತೆ ತೇಲಿಸಿ ಬಿಡುತ್ತಾರೆ. ಅಂತಹ ಸಂದರ್ಭದಲ್ಲಿ ಈ ಇಬ್ಬರು ಲೇಖಕರು ಕೆಳವರ್ಗದವರ ಬಗ್ಗೆ ಆಸಕ್ತಿ ವಹಿಸಿ, ಅವರ ಸಮಕಾಲೀನ ಸಮಾಜದ ತುಡಿತಗಳಿಗೆ ಸ್ಪಂದಿಸುತ್ತಾ, ಸಮಕಾಲೀನ ವಿಷಯಗಳನ್ನು ತಮ್ಮ ಕೃತಿಗಳಲ್ಲಿ ತರುವ ಪ್ರಯತ್ನ ಮಾಡಿದ್ದಾರೆ. ಆ ಮೂಲಕ ಸಮಾಜದಲ್ಲಿ ನಿಕೃಷ್ಟ ಸ್ಥಾನವನ್ನು ಪಡೆದುಕೊಂಡಿದ್ದ ಕೆಳವರ್ಗದ, ಕೆಳಜಾತಿಯ ಜನರ ಬಗ್ಗೆಯು ಸಹ ಸಾಹಿತ್ಯ ರಚನೆ ಮಾಡಬಹುದು, ಅವರು ಶತಮಾನಗಳಿಂದ ಅನುಭವಿಸಿದ ಮೂಕ ವೇದನೆಗೆ ಈ ಕಾದಂಬರಿಕಾರರು ತಮ್ಮಕಾದಂಬರಿಗಳ ಮೂಲಕ ಧ್ವನಿಕೊಡುವ ಕಾಯಕವನ್ನು ಮಾಡಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯದ ಕಾಲಘಟ್ಟದಲ್ಲಿ ಬಂದ ದಲಿತ ಸಾಹಿತ್ಯವೆಂಬ ಪ್ರಮುಖ ಸಾಹಿತ್ಯ ಪ್ರಕಾರವನ್ನು ಅದೇ ವರ್ಗದಲ್ಲಿ ಹುಟ್ಟಿ ಬೆಳೆದ, ಆ ವರ್ಗದ ನೋವನ್ನು ಅನುಭವಿಸಿದ ವ್ಯಕ್ತಿಗಳು ಮಾತ್ರ ಸಮರ್ಥವಾಗಿ ಅದನ್ನು ಸಾಹಿತ್ಯದಲ್ಲಿ ತರಬಲ್ಲರು, ಆದ್ದರಿಂದ ದಲಿತರ ವಿಷಯವನ್ನು ವಸ್ತುವಾಗಿ ಆಯ್ಕೆಮಾಡಿಕೊಳ್ಳುವ ವ್ಯಕ್ತಿಗಳು ದಲಿತರೆ ಆಗಿದ್ದರೆ ಅವರ ಅಭಿವ್ಯಕ್ತಿ ನೈಜವಾಗಿರುತ್ತದೆ, ಅವರ ಸಾಹಿತ್ಯದಲ್ಲಿ ಸಹಜವಾಗಿ ದಲಿತರ ಬದುಕು, ಬವಣೆಗಳು ಚಿತ್ರಿಸಲ್ಪಡುತ್ತವೆ ಎಂಬುವುದೊಂದು ವಾದವಿತ್ತು. ಆ ವಾದಕ್ಕೆ ಅಪವಾದ ಎಂಬಂತೆ ಶಿವರಾಮ ಕಾರಂತರ ಚೋಮನದುಡಿ ಮತ್ತು ಯು.ಆರ್. ಅನಂತಮೂರ್ತಿಯವರ ಭಾರತೀಪುರ ಕಾದಂಬರಿ ರಚಿತವಾಗಿವೆ. ಒಬ್ಬ ಸೃಜನಶೀಲ ಸಾಹಿತಿಯಾದವನು ತಾನು ಸಮಾಜದ ಯಾವುದೇ ಜಾತಿಯಿಂದ, ವರ್ಗದಿಂದ ಬಂದಿದ್ದರೂ ಕೇವಲ ಅದಕ್ಕೆ ಮಾತ್ರ ಅಂಟಿಕೊಂಡು ತನ್ನ ಸಾಹಿತ್ಯದ ವಿಷಯವಸ್ತುವನ್ನು ಆಯ್ಕೆಮಾಡಿಕೊಳ್ಳುವುದು ಮೂರ್ಖತನದ ಪರಮಾವದಿ ಎನಿಸುತ್ತದೆ. ಸಾಹಿತಿಯಾದವನು ಆತ ಕೇವಲ ತನ್ನದೊಂದು ವರ್ಗ, ಜಾತಿ, ಸಮುದಾಯಕ್ಕೆ ಮಾತ್ರ ಲೇಖಕನಲ್ಲ, ಆತ ಇಡೀ ಸಮಾಜದ ಪ್ರತಿನಿಧಿ. ಸಮಾಜದ ಎಲ್ಲಾ ವ್ಯಕ್ತಿಗಳು ಜೀವನ ಜಂಜಾಟಗಳನ್ನು ತನ್ನ ಹದ್ದಿನ ಕಣ್ಣಿನಿಂದ ಅವಲೋಕಿಸಿ ಯಾವುದು ಸರಿ,

ಯಾವುದು ತಪ್ಪು, ಸಮಾಜ ಯಾವುದನ್ನು ಮಾದರಿಯಾಗಿ ಇಟ್ಟುಕೊಳ್ಳಬೇಕು, ಯಾವುದನ್ನು ಕೈಬಿಡಬೇಕೆಂದು, ಸಮಾಜದ ಓರೆ-ಕೋರೆಗಳನ್ನು ತಿದ್ದುವ ಪ್ರಮಾಣಿಕವಾದ ಪ್ರಯತ್ನ, ನಿಜವಾದ ಅರ್ಥದಲ್ಲಿ ಸಾಹಿತಿಯಾದವನ ಜವಾಬ್ದಾರಿಯಾಗಿರುತ್ತದೆ.

ಬಹುಶಃ ಅಂತದ್ದೆ ಜವಾಬ್ದಾರಿಯನ್ನು ನನ್ನ ಆಯ್ಕೆಯ ಕಾದಂಬರಿಯ ಇಬ್ಬರು ಲೇಖಕರು ತಮ್ಮ ಕೃತಿಗಳ ಮೂಲಕ ಮಾಡಿದ್ದಾರೆಂದು ನನಗನ್ನಿಸುತ್ತದೆ. ಬ್ರಾಹ್ಮಣ ಎಂದರೆ ದೈವಾಂಶ ಸಂಭೂತರು ಅವರು ಮಾಡುವುದೆಲ್ಲವೂ ಆಚಾರ, ಅವರು ಸಮಾಜದ ಪ್ರಾಶ್ನಾತೀತ ವ್ಯಕ್ತಿಗಳೆಂದು ಸಮಾಜದ ಇತರೆ ವರ್ಗದ ಜನರ ಬಾಯಲ್ಲಿ ಸ್ತುತಿಸಿಕೊಳ್ಳುತ್ತಿದ್ದ ಈ ಮೇಲ್ವರ್ಗ, ಕಾಲನ ಲೀಲೆಯಲ್ಲಿ ಅದು ಸಹ ತನ್ನನ್ನು ತಾನು ಅಗ್ನಿಪರೀಕ್ಷೆಗೆ ದೂಡಿಕೊಳ್ಳುವ ದಿನಗಳು ಬಂದವು. ಅದು ನಮ್ಮ ಕಾರಂತ ಮತ್ತು ಅನಂತಮೂರ್ತಿಯಂತಹ ಸಮಾಜಮುಖಿಯಾದ ಲೇಖಕರು ತಮ್ಮ ಜಾತಿಯನ್ನು ಅಭಿಮಾನದ ಸೋಗಿನಲ್ಲಿ ಮುಚ್ಚಿ ರಕ್ಷಿಸಬೇಕು ಎಂಬ ಜಾತ್ಯಾಂಧತೆಯನ್ನು ತೋರದೆ, ತಮ್ಮ ಬ್ರಾಹ್ಮಣ ವರ್ಗದಲ್ಲಿ ಕೊಳೆತು ನಾರುತ್ತಿದ್ದ ಕೆಟ್ಟ ಸಂಪ್ರದಾಯಗಳು, ಅರ್ಥವಿಲ್ಲದ ಸ್ವಾರ್ಥದ ಆಚರಣೆಗಳು, ಮಡಿ-ಮೈಲಿಗೆಯ ವಿಚಾರ, ಅಸ್ಪೃಶ್ಯತೆಯ ಆಚರಣೆ, ಹೆಣ್ಣಿಗೆ ಯಾವುದೇ ಸ್ವತಂತ್ರ್ಯಕೊಡದೆ ಗುಲಾಮಳಂತೆ ನೆಡೆಸಿಕೊಳ್ಳುತ್ತಿದ್ದದ್ದು, ಶಿಕ್ಷಣದಿಂದ ಸಮಾಜದ ಹಲವರನ್ನು ವಂಚಿಸಿ, ಕೇವಲ ಕೆಲವರಿಗೆ ಮಾತ್ರ ಅದನ್ನು ಸೀಮಿತಗೊಳಿಸಿಕೊಂಡಿದ್ದು ಹೀಗೆ ಪಟ್ಟಿ ಮಾಡುತ್ತಾ ಹೋದರೆ ಬ್ರಾಹ್ಮಣ ವರ್ಗದ ದೌರ್ಜನ್ಯ-ದಬ್ಬಾಳಿಕೆಗಳು ಬೆಳೆಯಾತ್ತಲೆ ಹೋಗುತ್ತದೆ.

ನನ್ನ ನಿಬಂಧದ ಆಯ್ಕೆಯ ವಿಷಯದ ಒಂದು ವೈಶಿಷ್ಟ್ಯವೆಂದರೆ, ಮೇಲ್ವರ್ಗದ ಲೇಖಕರು ತಮ್ಮ ವರ್ಗದ ಗೊಡ್ಡುತನ, ಸಿನಿಕತೆ, ಯಾವುದು ಸಾಚ, ಯಾವುದು ಮೋಸ, ತಮ್ಮವರ ಹುಸಿತನ ಹುಚ್ಚುತನಗಳು ಮೊದಲಾದ ಅಂಶಗಳನ್ನು ಎಷ್ಟು ಪ್ರಾಮಾಣಿಕವಾಗಿ ಸಮಾಜದ ಮುಂದೆ ತೆರೆದಿಡುತ್ತಾರೆ ಎಂಬುವುದನ್ನು ಅವಲೋಕಿಸುವುದಾಗಿತ್ತು. ನನ್ನ ಆಯ್ಕೆಯ ಇಬ್ಬರು ಲೇಖಕರು ಸಹ ಅದನ್ನು ಪ್ರಾಮಾಣಿಕವಾಗಿ ತೆರೆದಿಡುವ ಆಯಾ ಕಾಲದ ವಿಷಯಗಳಿಗೆ ಮನ್ನಣೆ ಕೊಡಬೇಕು ಆದರೆ ಅವುಗಳಿಂದ ದೂರವಿರಬೇಕೆಂದು ಸಮಕಾಲೀನತೆಗೆ ಸೆಡ್ಡು ಹೊಡೆದು ಮಡಿವಂತಿಕೆ ಪ್ರದರ್ಶಿಸದೆ ತಮ್ಮವರ ವಕ್ರವಾದ ನಡೆ, ನುಡಿ, ಆಚಾರ ವಿಚಾರಗಳನ್ನು ತಮ್ಮ ಕೃತಿಗಳಲ್ಲಿ ತರುವುದರ ಮೂಲಕ ಅವರ ಜಡ್ಡುಗಟ್ಟಿದ ಆಚರಣೆಗಳು ಚಲನಶೀಲವಾಗುವಂತೆ ಮಾಡಿದ್ದಾರೆ.

ಶಿವರಾಮಕಾರಂತ ಮತ್ತು ಯು.ಆರ್. ಅನಂತಮೂರ್ತಿ ಈ ಇಬ್ಬರು ಲೇಖಕರು ತಮ್ಮ ವರ್ಗದ ಮೌಢ್ಯತೆಯನ್ನು ತಮ್ಮ ಸಾಹಿತ್ಯ ಕೃತಿಗಳಲ್ಲಿ ತಂದು ತಮ್ಮವರ ಕೆಂಗಣ್ಣಿಗೆ ಗುರಿಯಾದರು ಸಹ ಕಾಲದ ಗರ್ಭದಲ್ಲಿ ಇವರೆ ಬದಲಾವಣೆಯ ಹೊಸ ಶಕೆಯನ್ನು ಆರಂಭಿಸಿದ ನಾಯಕರಾಗಿ ನಿಲ್ಲುತ್ತಾರೆ.

ನನಗೆ ಈ ಇಬ್ಬರು ಲೇಖಕರ ಕೃತಿಗಳಾದ ಚೋಮನ ದುಡಿ ಮತ್ತು ಭಾರತೀಪುರವನ್ನು ಓದಿದಾಗ ಜಾತಿ ಮತ್ತು ವರ್ಗಸಂಘರ್ಷ ದೃಷ್ಟಿಕೋನದ ಹಿನ್ನೆಲೆಯಲ್ಲಿ ಈ ಕೃತಿಗಳನ್ನು ವಿಶ್ಲೇಷಣೆ ಮಾಡುವುದು ವಿಶಿಷ್ಟ ರೀತಿಯಾದ ಅಧ್ಯಯನ ಕ್ರಮವೆಂದು ತೋರಿದಾಗ ನನ್ನ ನಿಬಂಧ ರಚನೆಗೆ ಇದೇ ವಿಷಯವನ್ನು ಆಯ್ಕೆಮಾಡಿಕೊಂಡೆನು. ನಾನು ಕೇವಲ ದಲಿತ ಪ್ರಜ್ಞೆ ಎಂತಲೋ, ಅಥವಾ ಬ್ರಾಹ್ಮಣ ಪ್ರಜ್ಞೆ ಎಂತಲೋ ತೆಗೆದುಕೊಂಡಿದ್ದರೆ ಕೇವಲ ಆ ವಿಷಯಕ್ಕೆ ಮಾತ್ರ ನನ್ನ ನಿಬಂಧ ಸೀಮಿತವಾಗಿರುತ್ತಿತ್ತು. ಇಲ್ಲಿ ಜಾತಿ ಎಂದು ತೆಗೆದುಕೊಂಡಾಗ ಬ್ರಾಹ್ಮಣರು ಒಳಗೊಂಡಂತೆ ಶೂದ್ರರವರೆಗೆ ಬರುವ ಸಮಾಜದ ಎಲ್ಲಾ ಜಾತಿಯ ಜನರು ಇದರಲ್ಲಿ ಸೇರಿಕೊಳ್ಳುತ್ತಾರೆ.ಸಾಮಾನ್ಯವಾಗಿ ಜಾತಿ ಎಂದಾಗ ಮೇಲ್ಜಾತಿಯ ಬ್ರಾಹ್ಮಣ ಅಥವಾ ಕೆಳಜಾತಿಯ ಹೊಲೆಯರು ಎಂದು ಮಾತ್ರ ಕೆಲವರು ಅರ್ಥೈಸುತ್ತಾರೆ. ಇವರ ನಡುವೆ ಬರುವ ಸಮಾಜದ ಇನ್ನೇಷ್ಟು ಜಾತಿಗಳಿವೆ, ಆಗಾಗಿ ಅವರೆಲ್ಲರ ಚಿತ್ರಣವನ್ನು ಕಾದಂಬರಿಯಲ್ಲಿ ವಿಶ್ಲೇಷಣೆ ಮಾಡುವುದು ನನ್ನ ನಿಬಂಧದ ವಿಷಯವಾಗಿತ್ತು.

ನಾವು ಇಂದು ೨೧ನೇ ಶತಮಾನದ ಆಧುನಿಕ ಯುಗದಲ್ಲಿ ಜೀವಿಸಿದ್ದರು ಸಹ ಜಾತಿ ಮತ್ತು ವರ್ಗ ಎಂಬ ವಿಷಯುಗಳು ವ್ಯಕ್ತಿಯು ನೆರಳಿನಂತೆ ಅವನ್ನು ಬೆಂಬಿಡದೆ ಹಿಂಬಾಲಿಸಿಕೊಂಡು ಬರುತ್ತಿವೆ. ಜಾತಿ ಮತ್ತು ವರ್ಗದ ಆಚರಣೆಯನ್ನು ಮನುಷ್ಯ ಸಂಪೂರ್ಣವಾಗಿ ತೊಡೆದು ಹಾಕಿ ಮಾನವೀಯತೆಯನ್ನು ಮರೆಯದ ಹೊರತು ಅವನಿಗೆ ಉಳಿಗಾಲವಿಲ್ಲ. ಪ್ರತಿದಿನ ಮಾಧ್ಯಮಗಳಲ್ಲಿ ಇವುಗಳದ್ದೇ ಅಟ್ಟಹಾಸ ಮೆರೆಯುತ್ತಿದೆ, ಸ್ವಾರ್ಥ ರಾಜಕಾರಣಿಗಳು, ಮಠಾಧೀಶರು, ತಮ್ಮ ಬೇಳೆ ಬೇಯಿಸಿಕೊಳ್ಳಲು ಕಟ್ಟೇಚ್ಚರದಿಂದ ಇವುಗಳಿಗೆ ನಿರೇರೆದು ಪೋಷಿಸಿ ಕಾಪಾಡಿಕೊಳ್ಳುತ್ತಿದ್ದಾರೆ. ಏನಾದರೂ ಆಗು ಮೊದಲು ಮಾನವನಾಗು ಎಂಬ ಕವಿವಾಣಿಯನ್ನು ನಾವು ಇಂದು ಮರೆತಿದ್ದೇವೆ. ಆಧುನಿಕ ಮಾನವ ಪ್ರಾಣಿಗಳಿಗಿಂತಲು ಹೀನವಾಗಿ ತನ್ನ ಜಾತಿ ಮತ್ತು ವರ್ಗದ ಉಳಿವಿಗಾಗಿ

ಮನುಷರನ್ನೇ ಹತ್ಯೆಗೈಯ ತೊಡಗಿದ್ದಾನೆ. ಇಂತಹ ಮೃಗೀಯ ವರ್ತನೆಯ ಜನರು ನಡೆಸುವ ಕೃತ್ಯವೇ ಇತ್ತೀಚೆಗೆ ಮಾಧ್ಯಮದಲ್ಲಿ ಹೆಸರುಗಳಿಸಿರುವ ಮರ್ಯಾದಾ ಹತ್ಯೆಗಳು , ಜಾತಿ ಘರ್ಷಣೆ ಮೊದಲಾದ ಭೂತಗಳಿಗೆ ಬಲಿಯಾಗಿ ಅದೆಷ್ಟು ಜೀವಗಳು ತಮ್ಮ ಅಮೂಲ್ಯ ಜೀವನವನ್ನು ಬಲಿಕೊಟ್ಟಿವೆಯೋ ಲೆಕ್ಕವಿಡುವವರು ಯಾರು? ಬಹುಶಃ ಪ್ರಾಣಿಗಳಲ್ಲಿ ಜಾತಿಯತೆ ಇಲ್ಲ, ಪ್ರಾಣಿಗಳಲ್ಲಿ ಮೇಲು-ಕೀಳೆಂಬ ವರ್ಗ ಸಂಘರ್ಷವಿಲ್ಲ ಆದರೆ ಪ್ರಾಣಿ ಪ್ರಪಂಚದ ಬುದ್ಧಿವಂತ ಜೀವಿಯಾದ ಮನುಷ್ಯಮಾತ್ರ ತನ್ನ ಸ್ವಾರ್ಥಕ್ಕಾಗಿ ಈ ಕೃತ್ಯವನ್ನೆಸಗಿದ್ದಾನೆ, ಆಗಾದರೆ ಮನುಷ್ಯ ಯಾವ ವಿಷಯದಲ್ಲಿ ಇತರ ಪ್ರಾಣಿಗಳಿಗಿಂತ ದೊಡ್ಡವನು? ಇಂತಹ ಮನುಷ್ಯನ ಹೇಯ ಕೃತ್ಯಗಳನ್ನು ಬಯಲಿಗೆಳೆದು ಬಿಚ್ಚಿಡದ ಹೊರತು ಅವನು ತನ್ನ ವಕ್ರತೆಗಳನ್ನು ತಿದ್ದಿಕೊಳ್ಳಲು ಸಾಧ್ಯವಿಲ್ಲ. ಅಂತಹ ಒಂದು ಪುಟ್ಟ ಪ್ರಯತ್ನವನ್ನು ನಾನು ನಿಬಂಧದ ಮೂಲಕ ಮಾಡಿದ್ದೇನೆ. ಈ ದೃಷ್ಟಿಕೋನದ ಹಿನ್ನೆಲೆಯಲ್ಲಿ ವ್ಯಾಪಕವಾಗಿ ಅಧ್ಯಯನ ಮಾಡಿದರೆ ಇದು ಒಂದು ಮಹಾ ಪ್ರಬಂಧಕ್ಕೂ ವಸ್ತುವಾಗುವ ಸಾಮರ್ಥ್ಯವನ್ನು ಈ ಶೀರ್ಷಿಕೆ ಒಳಗೊಂಡಿದೆ. ಇಲ್ಲಿ ನನಗೆ ಪುಟಗಳ ಮಿತಿ ಇರುವುದರಿಂದ ನನ್ನ ಅಧ್ಯಯನದ ಸೀಮೀತ ವ್ಯಾಪ್ತಿಯೊಳಗೆ ನಾನು ಆ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದ್ದೇನೆ. ಎಂಬ ಆತ್ಮ ವಿಶ್ವಾಸದೊಂದಿಗೆ ಈ ನಿಬಂಧವನ್ನು ನಿಮ್ಮ ಮುಂದಿಟ್ಟಿದ್ದೇನೆ.

೭. ಪರಾಮರ್ಶನ ಗ್ರಂಥಗಳು

೧. ಡಾ. ಕೆ. ಶಿವರಾಮ ಕಾರಂತ – ಚೋಮನದುಡಿ
ಎಸ್.ಬಿ.ಎಸ್ ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್
ಬೆಂಗಳೂರು
(೧೯೩೩) ೨೦೦೮

೨. ಯು.ಆರ್. ಅನಂತಮೂರ್ತಿ – ಭಾರತೀಪುರ
ಅಕ್ಷರ ಪ್ರಕಾಶನ ಹೆಗ್ಗೋಡು
ಸಾಗರ, ಕರ್ನಾಟಕ
೨೦೦೮

೩. ಡಾ. ರಾಗೌ – ಷಷ್ಟಿ ಸಂಪದ
ಸಂವಹನ ಪ್ರಕಾಶನ
ಮೈಸೂರು
೨೦೦೫

೪. ಡಿ.ಆರ್. ನಾಗರಾಜ್ – ಅಮೃತ ಮತ್ತು ಗರುಡ
ಅಕ್ಷರ ಪ್ರಕಾಶ ಹೆಗ್ಗೋಡು
ಸಾಗರ, ಕರ್ನಾಟಕ
ನಾಲ್ಕನೇ ಮುದ್ರಣ ೨೦೦೩

೫. ಡಾ. ಎನ್.ಕೆ.ಕೋದಂಡರಾಮ – ಕನ್ನಡ ಕಥಾ ಸಾಹಿತ್ಯದಲ್ಲಿ
ಸಾಂಸ್ಕೃತಿಕ ಸಂಘರ್ಷ
ಗಾಯತ್ರಿ ಸ್ಮಾರಕ ಗ್ರಂಥಮಾಲೆ
ಮೈಸೂರು
೧೯೯೬

೬. ಡಾ. ತಾಳ್ತಜೆ ವಸಂತಕುಮಾರ – ಶಿವರಾಮ ಕಾರಂತ
ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು
೨೦೦೩

೭. ಸಂ: ಡಾ. ಗುರುಲಿಂಗ ಕಾಪಸೆ – ಶಿವರಾಮ ಕಾರಂತ
ಸಾಂಸ್ಕೃತಿಕ ಅನುಸಂಧಾನ
ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು
೨೦೦೩

೮. ಟಿ.ಪಿ. ಅಶೋಕ – ಶಿವರಾಮ ಕಾರಂತ
ಎರಡು ಆಧ್ಯಯನಗಳು ಅಕ್ಷರ ಪ್ರಕಾಶನ
ಹೆಗ್ಗೋಡು
ಸಾಗರ, ಕರ್ನಾಟಕ
(೧೯೯೨) ೨೦೦೪

೯. ಸಂ: ಅಗ್ರಹಾರ ಕೃಷ್ಣ ಮೂರ್ತಿ – ಡಿ.ಆರ್. ನಾಗರಾಜ್
ಸಂಸ್ಕೃತಿ ಕಥನ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು
೨೦೦೬

೧೦. ಸಂ: ಹೆಚ್. ದಂಡಪ್ಪ ಮತ್ತು ಎನ್. ಸುಮಿತ್ರಬಾಯಿ – ಸುವರ್ಣ ಸಾಹಿತ್ಯ ವಿಮರ್ಶೆ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು – ೫೬೦೦೦೨
೨೦೦೬

೧೧. ಜಿ.ಎಸ್. ಆಮೂರ – ಕನ್ನಡ ಕಥನ ಸಾಹಿತ್ಯ: ಕಾದಂಬರಿ
ಶ್ರೀಹರಿ ಪ್ರಕಾಶನ
ಭಾರತೀ, ನವೋದಯ ನಗರ
ಧಾರವಾಡ
೧೯೯೪

೧೨. ಸಂ: ಟಿ.ಪಿ. ಅಶೋಕ – ಕೆ.ವಿ.ಸುಬ್ಬಣ್ಣ ಅವರ ಆಯ್ದ ಬರಹಗಳು
ಪ್ರಕಾಶಕರು ಟಿ. ಶ್ರೀನಿವಾಸರಾಜು
ನಿರ್ದೇಶಕರು
ಪ್ರಸಾರಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ – ೫೮೩೨೧೧

೧೩. ಯು.ಆರ್. ಅನಂತಮೂರ್ತಿ – ಪೂರ್ವಪರ (ವಿಮರ್ಶಾ ಬರಹಗಳು)
ಶೋಭಾ ಪ್ರೋಸೆಸ್ ಪ್ರಿಂಟರ್ಸ್
ದರ್ಬೆ – ೫೭೪೨೦೨
ಪುತ್ತೂರು, ದ.ಕ

೧೪. ಸಂ: ಡಾ. ಹಾ.ಮಾ.ನಾಯಕ – ಶಿವರಾಮ ಕಾರಂತ
ಡಾ. ಪ್ರಧಾನ ಗುರುದತ್ತ
(ಮಾಲಿನಿ ಮಲ್ಯ)
ನವ ಕರ್ನಾಟಕ ಪಬ್ಲಿಕೇಷನ್ಸ್
ಪ್ರೈವೆಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ
ಬೆಂಗಳೂರು –೫೬೦೦೦೧
೨೦೦೪

೧೫. ಸಂ: ಡಾ. ಬಸವರಾಜ ಕಲ್ಗುಡಿ – ಸುವರ್ಣ ವಿಚಾರ ಸಾಹಿತ್ಯ
ಕನ್ನಡ ಸಂಸ್ಕೃತಿ ಇಲಾಖೆ ಕನ್ನಡ ಭವನ,
ಜೆ.ಸಿ ರಸ್ತೆ, ಬೆಂಗಳೂರು–೫೬೦೦೦೨
೨೦೦೬

೧೬. ಸಂ: ಬಿ. ಮಾಲಿನಿಮಲ್ಯ – ಶಿವರಾಮ ಕಾರಂತ ವಾಙ್ಮಯ ವೃತ್ತಾಂತ
ಎಸ್.ಬಿ.ಎಸ್ ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್
ಬೆಂಗಳೂರು
೫೬೦೦೦೧

೧೭. ಟಿ.ಪಿ. ಅಶೋಕ – ವಾಸ್ತವವಾದ (೧೯೮೯)
ಕನ್ನಡ ಸಾಹಿತ್ಯ ಅಕಾಡೆಮಿ
ಬೆಂಗಳೂರು

೧೮. ಬಾಲಸುಬ್ರಮಣ್ಯ ನರಹಳ್ಳಿ – ನವ್ಯತೆ (೧೯೯೦)
ಕನ್ನಡ ಸಾಹಿತ್ಯ ಅಕಾಡೆಮಿ
ಬೆಂಗಳೂರು

೧೯. ಡಾ. ಡಿ.ಆರ್. ನಾಗರಾಜ – ಸಾಹಿತ್ಯ ಕಥನ
ಅಕ್ಷರ ಪ್ರಕಾಶನ
ಹೆಗ್ಗೋಡು, ಸಾಗರ
ಕರ್ನಾಟಕ – ೫೭೭೪೧೨